ದುಡಿವ ಜನರ ಪ್ರಾಣ ಮಿತ್ರ


ಐಕ್ಯರಂಗ

ಸಂಪುಟ 25 ಸಂಚಿಕೆ 51
ಡಿಸೆಂಬರ್ 21, 2003 ಬೆಲೆ ರೂ. 3.00



ನಾರಾಯಣಪುರ ಬಲದಂಡೆ ಕಾಲುವೆ


ಭ್ರಷ್ಟರಿಗೆ ಅಮೃತ ರೈತರಿಗೆ ವಿಷ






ಬಾಬಾಬುಡನ್ ಗಿರಿ :
ಕಾಂಗ್ರೆಸ್‌ನ ಸೆಕ್ಯುಲರ್ ಮುಖ ಬಟಾಬಯಲು








ಮತದಾರ ಕಾಂಗ್ರೆಸ್‌ಗೆ ಕೈ ಕೊಟ್ಟಿದ್ದೇಕೆ?



'ಮತ'ವಾದಿಗಳ ಜಾತ್ರೆಗಳು

ವ್ಯಾಪಾರೀಕರಣದ ವಿರುದ್ಧ ಯಶಸ್ವಿ ಶೈಕ್ಷಣಿಕ ಬಂದ್

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ 55



ಕಳೆದ ಸಂಚಿಕೆಯಲ್ಲಿ ನೋವು, ಸಂಕಟ ಮತ್ತು ಭಯಭೀತಗೊಂಡ ರೈತ ಸಮುದಾಯ ತಮ್ಮ ಪುತ್ರ-ಪುತ್ರಿಯರನ್ನು ಶತ್ರುಗಳ ವಿರುದ್ಧ ಹೋರಾಡಲು ಗೆರಿಲ್ಲಾ ಪಡೆಗೆ ಕಳಿಸಿಕೊಟ್ಟಿದ್ದು, ತನ್ನದೇ ಜನರ ರಕ್ತದಿಂದ ಕೈಗಳಿಗೆ ಬಣ್ಣ ಮೆತ್ತಿಕೊಂಡಿದ್ದ ವೈರಿ ಏಜೆಂಟರ ಮೇಲೆ ಗೆರಿಲ್ಲಾ ಪಡೆ ದಾಳಿ ನಡೆಸುತ್ತಿದ್ದದ್ದು, ಗೆರಿಲ್ಲಾಗಳನ್ನು ನೋಡುತ್ತಿದ್ದಂತೆಯೇ ಶತ್ರು ಸೈನಿಕರು ಮರ್ಯಾದೆ ಬಿಟ್ಟು ಮೊಣಕಾಲೂರಿದ್ದು, ಸುದೀರ್ಘ ಹೋರಾಟದಲ್ಲಿ ಗೆರಿಲ್ಲಾಗಳಾಗಲೀ, ಜನರಾಗಲೀ ಶತ್ರು ಮಹಿಳೆಯರ ಮೇಲೆ ಅತ್ಯಾಚಾರಗೈದ ಒಂದೇ ಒಂದು ಉದಾಹರಣೆ ಇಲ್ಲದಿರುವುದು, ಗೆರಿಲ್ಲಾಗಳು ಮಹಿಳೆಯರ ಬಗ್ಗೆ ಹೊಂದಿದ್ದ ಗೌರವದ ಪ್ರತೀಕವಾಗಿತ್ತು. ಆದರೆ ಹೋರಾಟ ನಿರತ ಜನರ ಸ್ಥೈರ್ಯ ಕುಗ್ಗಿಸಲು ವೈರಿಗಳು ಅತ್ಯಾಚಾರ, ಲೂಟಿ, ಧ್ವಂಸ ಹಾಗೂ ಸಾಮೂಹಿಕ ಹತ್ಯೆಯ ಕ್ರೂರ ಬಳಸುತ್ತಿದ್ದರ ಬಗ್ಗೆ ಓದಿರುವಿರಿ. ಮುಂದೆ.....

ಕನ್ನಡಕ್ಕೆ: ವಿಶ್ವ ಕುಂದಾಪುರ

ಮಾರ್ಕ್ಸ್‌ವಾದ ಲೆನಿನ್‌ವಾದದಲ್ಲಿ ನಂಬಿಕೆಯಿಡೋಣ

ಸಿನಿಕತನದ ಭಾವನೆಗಳು ದುಡಿಯುವ ವರ್ಗದ ಕ್ರಾಂತಿಕಾರಿ ತತ್ವಕ್ಕೆ ತಕ್ಕುದಲ್ಲ ಮಾತ್ರವೇ ಅಲ್ಲ ಕಳೆದ ನಾಲ್ಕು ವರ್ಷಗಳಿಂದ ತೆಲಂಗಾಣದ ಗ್ರಾಮೀಣ ಪ್ರದೇಶಗಳಲ್ಲಿ ಈ ಮೃಗಗಳು ನಡೆಸುತ್ತಿರುವ ದುರಾಚಾರದ ಬಗ್ಗೆ ಅವರ ಪೂರ್ಣ ಅಜ್ಞಾನವನ್ನು ತೋರಿಸುತ್ತದೆ ಕೂಡ. ಭಾರಿ ಪ್ರತಿಕೂಲ ಸನ್ನಿವೇಶಗಳ ನಡುವೆಯೂ ವೀರಾವೇಶದಿಂದ ಸೆಣಸಿ ಶತ್ರುಗಳನ್ನು ಪ್ರತಿರೋಧಿಸುತ್ತಿರುವ ಸಂಗಾತಿಗಳ ತಲೆಯ ಮೇಲೆ ವೈರಿಗಳನ್ನು ಪ್ರಚೋದಿಸಿದ ಆರೋಪವನ್ನು ಹೊರಿಸಲಾಗದು. ದುಷ್ಟರನ್ನು ಪ್ರಚೋದಿಸಲೇ ಬೇಕೆಂದಿಲ್ಲ. ಅವರ ದುಷ್ಟತನವನ್ನು ಪ್ರತಿರೋಧಿಸಿದಾಗ, ಅಂಥವರಿಂದ ಮುಕ್ತಿ ಪಡೆಯಲು ಪ್ರಯತ್ನಿಸಿದಾಗ ಅವರು ಕ್ರೂರ ಕೃತ್ಯಗಳಲ್ಲಿ ತೊಡಗುವುದು ಅವರ ಸಹಜ ಗುಣವಾಗಿದೆ. ಏನಿದ್ದರೂ ಈ ದುಷ್ಟತನವನ್ನು ಪ್ರತಿರೋಧಿಸುವಲ್ಲಿ ರೂಪಿಸುವ ತಪ್ಪು ತಂತ್ರಗಳ ಅಪಕ್ವತೆಯಲ್ಲೇ 'ತಪ್ಪು' ಅಡಗಿದೆ. ಶತ್ರುಗಳ ಕಪಿಮುಷ್ಠಿಯನ್ನು, ರಕ್ತಸಿಕ್ತ ಹಲ್ಲುಗಳನ್ನು ಮುರಿಯುವ ನಾವು ಇನ್ನೂ ಪರಿಣಾಮಕಾರಿ ಸಾಧನಗಳನ್ನು ರೂಪಿಸದಿರುವುದರಲ್ಲೇ 'ತಪ್ಪು' ಅಡಗಿದೆ.

ಜನತೆ ಸಂಘಟಿತರಾಗದೇ ಇರುವುದರಲ್ಲಿಯೇ 'ತಪ್ಪು' ಅಡಗಿದೆ. ಈ ದೌರ್ಬಲ್ಯದಿಂದಾಗಿ ಕೊಲೆಗಡುಕರು ಏನೂ ಬದಲಾಗದೆ ಸುತ್ತಮುತ್ತಲೆಲ್ಲ ಓಡಾಡುತ್ತಿದ್ದಾರೆ.

ಏರಿಯಾ ಹೆಡ್‌ಕ್ವಾರ್ಟರ್ಸ್‌ನಲ್ಲಿ

ಮೌನ ಬೆಟ್ಟಗಳ ಮೇಲೆ ಕತ್ತಲೆಯ ಛಾಯೆ ದಟ್ಟವಾಗುತ್ತಿದ್ದಂತೆ, ಹಕ್ಕಿಗಳು ಕಲರವ ಮಾಡುತ್ತಾ ತಮ್ಮ ಗೂಡುಗಳಿಗೆ ಮರಳುತ್ತಿರುವಾಗ, ಮಲಗಿದ ಮರದ ಕೊಂಬೆಯ ಸಂದಿಯಿಂದ ಏಕಾಂಗಿ ನಕ್ಷತ್ರವೊಂದು ಇಣುಕುತ್ತಿರುವಾಗ, ದಟ್ಟ- ಹಸಿರು ಮುಳ್ಳು ಪೊದೆಯ ಹಿಂದಿನಿಂದ ತರುಣರ ಗುಂಪೊಂದರ ಕಿಲಕಿಲ ನಗು ಹೊರಹೊಮ್ಮಿತು.

"ಇದು ಕಾಡಿಗೆ ಹಿಮ್ಮೆಟ್ಟುವ ಸಂಗಾತಿಗಳು ಸೇರುವ ಕೇಂದ್ರ ಸ್ಥಳವಾಗಿದೆ" - ಎಂದು ಪ್ರಾದೇಶಿಕ ಕಾರ್ಯದರ್ಶಿ ನನ್ನ ಕಿವಿಯಲ್ಲಿ ಉಸುರಿದರು. ಶೀಘ್ರವೇ ನಗುನಗುತ್ತಿರುವ ಯುವಜನರ ತಂಡವೊಂದು ಹೊರಬಂದಿತು. ಈ ತರುಣ ಹೋರಾಟಗಾರರು ಹೊರಬರುತ್ತಿದ್ದಂತೆ ಆತುರಾತುರವಾಗಿ ತಮ್ಮ ಬಂದೂಕುಗಳು ಹಾಗೂ ಮದ್ದುಗುಂಡುಗಳ ಚೀಲಗಳನ್ನು ಸಂಗ್ರಹಿಸಿ ಕೊಂಡರು. ಅವರ ಹಿಂದೆಯೇ ನಗುಮೊಗದ

> **ನಮ್ಮ ಜನರಲ್ಲಿ, ಅವರ ಕ್ರಾಂತಿಕಾರಿ ಹೀರೋಯಿಸಂನ ವಿಶಾಲ ಆಣೆಕಟ್ಟು ಹಾಗೂ ಸಾಮರ್ಥ್ಯದಲ್ಲಿ ವಿಶ್ವಾಸವಿಡೋಣ. ಇತರ ಪ್ರಾಂತ್ಯಗಳಲ್ಲಿನ ನಮ್ಮ ಸಂಗಾತಿಗಳ ಅಂತರ್ಗತ ಒಳ್ಳೆತನ ಮತ್ತು ಪ್ರಾಮಾಣಿಕತೆಯಲ್ಲಿ ವಿಶ್ವಾಸವಿಡೋಣ. ಪಕ್ಷವನ್ನು ನಿಶ್ಚಯವಾಗಿಯೂ ಪುನಶ್ಚೇತನಗೊಳಿಸುವ ಮಾರ್ಕ್ಸ್‌ವಾದ ಲೆನಿನ್‌ವಾದದಲ್ಲಿ ನಾವು ನಂಬಿಕೆಯಿಡೋಣ".**

ತರುಣಿಯರ ತಂಡವೊಂದು ಹೊರಬಂದಿತು. 'ರೆಡ್ ಸೆಲ್ಯೂಟ್ಸ್ ಕಾಮ್ರೇಡ್ಸ್' ಎಂದವರು ಹೇಳಿದರು. ಆತ್ಮೀಯವಾಗಿ ಕೈಕುಲುಕಿದರು, ಅಪ್ಪಿಕೊಂಡರು.

"ನಾವೂ ನಿಮ್ಮ ಜತೆ ಕಾಡಿಗೆ ಬರುತ್ತೇವೆ" - ಎಲ್ಲಾ ತರುಣಿಯವರು ಏಕಕಂಠದಿಂದ ಘೋಷಿಸಿದರು. ಯುವಜನರ ಈ ಸಂತೋಷದ ಹಿಂದೆ ಅಡಗಿರುವ ಅಂಶವನ್ನು ನಾನು ಸುಲಭವಾಗಿ ಗುರುತಿಸಿದೆ. ಶತ್ರುಗಳ ವಿರುದ್ಧದ ಹೋರಾಟದಲ್ಲಿ ಅಡಗಿರುವ ಅಪೂರ್ವ ಅನುಭವ ವನ್ನು ಸವಿಯುವ, ಎದುರಿಸುವ ಇರಾದೆ ಅವರದ್ದಾಗಿತ್ತು.

"ಕಾಡಿಗೆ ಹೋಗುವ ದಿನಾಂಕವನ್ನು ಬಹಿರಂಗಪಡಿಸು ವುದು ತಾಂತ್ರಿಕ ನಿಯಮಗಳಿಗೆ ವಿರುದ್ಧವಾದರು ಎಂದು ಹೇಳಿದ ಜೇನುಗಾರ, ಶುಭಾಶಯ ವಿನಿಮಯ ಮುಗಿಸಿಕೊಂಡು ಮುಂದೆ ಸಾಗುವಂತೆ ಕೈಸನ್ನೆಯಿಂದ ಸೂಚಿಸಿದ.

"ಕಾಮ್ರೇಡ್ಸ್, ನಾವು ತುಂಬಾ ಬೇಗನೆ ಹೋಗಬೇಕಾಗಿದೆ ಎಂದು ಆಮೇಲೆ ಕೂಗಿ ಹೇಳಿದ. ಇಬ್ಬರೂ ತರುಣ ಸ್ತ್ರೀ ಸಂಗಾತಿಗಳು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. "ಸೊಕ್ಕಿನಿಂದ ವರ್ತಿಸುತ್ತಿರುವಂತೆ ಕಾಣುತ್ತಿಯಲ್ಲವೆ" ಎಂದು ಅವರು ಜೇನುಗಾರನಿಗೆ ಹೇಳಿದರು. ಅಲ್ಲದೆ "ಸಲ್ಪ ತಡೆಯಿರಿ, ನಾವು ಮಾತನಾಡಬೇಕು' ಎಂದೂ ನುಡಿದರು.

ತರುಣಿಯರ ಒತ್ತಡಕ್ಕೆ ಜೇನುಗಾರ ತಲೆಬಾಗಿದ. 'ನಾನು ನಿಮಗೆ ಏನೂ ಹೇಳಲಾರೆ ಕಾಮ್ರೇಡ್ಸ್. ನೀವಂದುಕೊಂಡಂತೆ ಮಾಡಿ' ಎಂದನು. ನುಣುಪು ಕಲ್ಲೊಂದರ ಮೇಲೆ ಕುಳಿತು ಕಚ್ಚಾಸಿಗರೇಟ್ ಸೇದತೊಡಗಿದ.

ಪ್ರಶ್ನೆಗಳ ಸುರಿಮಳೆ

ಈಗ ನಾವು ಅಕ್ಷರಶಃ ಎಲ್ಲಾ ಬದಿಗಳಿಂದ ಪ್ರಶ್ನೆಗಳ ಸುರಿಮಳೆಯನ್ನು ಎದುರಿಸಿದೆವು. ಸಂಗಾತಿಗಳು ಪ್ರಶ್ನೆಗಳನ್ನು ಕೇಳತೊಡಗಿದರು. ಪ್ರತಿಯೊಂದು ಪ್ರಶ್ನೆಯೂ, ಆ ದಿನಗಳಲ್ಲಿ ತೀವ್ರವಾಗಿದ್ದ ಪಕ್ಷದ ಆಂತರಿಕ ಹೋರಾಟದ ಕುರಿತೇ ಆಗಿತ್ತು. ಅವರು ಪಕ್ಷದ ಪ್ರಾದೇಶಿಕ ಕಾರ್ಯದರ್ಶಿಯನ್ನು ಪ್ರಶ್ನಿಸಿದರು. ಜೋಸಿ ಏನನ್ನು ಪ್ರತಿಪಾದಿಸುತ್ತಿದ್ದಾರೆ? ಡಾಂಗೆಯವರ ಅಭಿಪ್ರಾಯವೇನು? ಆಂಧ್ರ ಸಂಗಾತಿಗಳು ಕ್ರಾಂತಿಕಾರಿ ಹೋರಾಟ ಮತ್ತು partisan ಸಮರವನ್ನು ಹೇಗೆ ರಕ್ಷಿಸಿಕೊಳ್ಳುತ್ತಿದ್ದಾರೆ? ಈ ಬೇರೆ ಬೇರೆ ನಿಲುವುಗಳ ಬಗ್ಗೆ ಸಂಗಾತಿಗಳ ಪ್ರತಿಕ್ರಿಯೆಯೇನು? ಇವೇ ಮುಂತಾದ ಪ್ರಶ್ನೆಗಳನ್ನು ಕುತೂಹಲದಿಂದ ಕೇಳಿದರು.

ಈ ಬೇರೆ ಬೇರೆ ನಿಲುವುಗಳ ಬಗ್ಗೆ ಇತರ ಪ್ರಾಂತ್ಯಗಳ ಸಂಗಾತಿಗಳ ಪ್ರತಿಕ್ರಿಯೆಯೇನು ಎಂಬುದೂ ಅವರ ಪ್ರಶ್ನೆಯಾಗಿತ್ತು. ಇವುಗಳಿಗೆಲ್ಲ ಪ್ರಾದೇಶಿಕ ಕಾರ್ಯದರ್ಶಿ ತುಂಬಾ ಒಳ್ಳೆಯ ಉತ್ತರವನ್ನು ನೀಡುವಂತಿರಲಿಲ್ಲ. ಹಾಗೆ ಮಾಡುವಂತೆಯೂ ಇರಲಿಲ್ಲ. ಆತ ವಸ್ತುಸ್ಥಿತಿಯನ್ನು ವಿವರಿಸಿದರು.

"ಸಂಗಾತಿಗಳೇ, ಇಂದು ಪಕ್ಷ ಭಾರಿ ಬಿಕ್ಕಟ್ಟನ್ನು ಎದುರಿಸುತ್ತಿದೆ. ಬಹುತೇಕ ಎಲ್ಲ ಪ್ರಾಂತ್ಯಗಳಲ್ಲಿ ನಮ್ಮ ಸಂಗಾತಿಗಳು ಸಾಮೂಹಿಕ ಕೆಲಸವನ್ನು, ಸಾಮೂಹಿಕ ಸಂಪರ್ಕವನ್ನು ಕೈಬಿಟ್ಟಿದ್ದಾರೆ. ಈಗ ದೇಶದೆಲ್ಲೆಡೆ ಕಾಣುತ್ತಿರುವ ಜನಸಮೂಹದ ಆಂದೋಲನದಿಂದ ನಾವು ಪ್ರತ್ಯೇಕಗೊಂಡಿದ್ದೇವೆ ಎಂದವರು ಹೇಳಿದರು.

"ನಾವಿಂದು ಎದುರಿಸುತ್ತಿರುವ ಇಂಥ ಪಕ್ಷದ ಆಂತರಿಕ ಹೋರಾಟ ಆಕಸ್ಮಿಕ ವಿದ್ಯಮಾನವಲ್ಲ. ಪಕ್ಷದ ಬೆಳವಣಿಗೆಯ ಪ್ರಕ್ರಿಯೆಯಲ್ಲಿ, ನಮ್ಮ ಜನರ ಬೆಳವಣಿಗೆಯ ಮಟ್ಟದ ಪ್ರಕ್ರಿಯೆಯಲ್ಲಿ ಇವು ಸಹಜವಾದವು. ಸಾಮೂಹಿಕ ಚಳುವಳಿಯ ಮಟ್ಟಕ್ಕೆ ಸರಿದೂಗುವಂಥ ಪ್ರಕ್ರಿಯೆಗೆ ಅಡ್ಡಿಯಾದ ಸೈದ್ಧಾಂತಿಕ ಅಡೆತಡೆಗಳನ್ನು ಮುರಿಯಬೇಕು. ಜನತೆಯ ಭಾವನೆಗೆ ತಕ್ಕಂತೆ ಪಕ್ಷವನ್ನು ಸಿದ್ಧಪಡಿಸಲು ಹಾಗೂ ಜನತೆಯ ನಾಯಕನಾಗಿ ಕಾರ್ಯನಿರ್ವಹಿಸಲು ಇದು ಅಗತ್ಯ. ಹಾಗೆ ಕಾರ್ಯ ನಿರ್ವಹಿಸುವುದೇ ಅದರ ಕೆಲಸ" - ಎಂದರು.

"ಆದರೆ ಇದು ಪಡೆದುಕೊಂಡಿರುವ ಕೆಟ್ಟ ಹಾಗೂ ಅಪಾಯಕಾರಿ ಆಯಾಮದಿಂದ ನಮಗೆ ತುಂಬಾ ಚಿಂತೆಯಾಗಿದೆ. ಕೆಸರೆರಚುವುದು, ಆರೋಪ - ಪ್ರತ್ಯಾರೋಪಗಳು, ವೈಯಕ್ತಿಕ ಜಗಳಗಳು ಹಾಗೂ ಆಕಾಂಕ್ಷೆಗಳು ಚರ್ಚೆಯನ್ನು ರಾಜಕೀಯ ಮಟ್ಟದಿಂದ ವೈಯಕ್ತಿಕ ನಿಂದನೆಯ ಮಟ್ಟಕ್ಕೆ ಇಳಿಸಿದೆ. ಅನುಮಾನ, ಪರಸ್ಪರ ಅವಿಶ್ವಾಸ, ಸಂಗಾತಿತನಕ್ಕೆ ಹೊರತಾದ ವೈಯಕ್ತಿಕ ಪ್ರತಿಷ್ಠೆ ಇತ್ಯಾದಿಗಳು ಕಾಡುತ್ತಿವೆ....."

ಶತ್ರು ಸುಮ್ಮನೆ ಕುಳಿತಿರುವುದಿಲ್ಲ.....

'ನಮ್ಮ ಮನೆ ಅಸಂಘಟಿತವಾಗಿರುವುದನ್ನು ನೋಡಿ ವೈರಿಗಳು ಸುಮ್ಮನೆ ಕುಳಿತಿರುವುದಿಲ್ಲ. ಒಮ್ಮೆ ಈ ಕ್ರಾಂತಿಕಾರಿ ಕೋಟೆಯಲ್ಲಿ ಬಿರುಕು ಕಾಣಿಸಿಕೊಂಡಿತೆಂದರೆ ಅದರಲ್ಲಿನ ಪ್ರತಿಯೊಂದು ರಂಧ್ರದ ಮೂಲಕವೂ ಆತ ನಮತ್ತ ಗುಂಡು ಹಾರಿಸುತ್ತಾನೆ. ಆತ ಡಾಂಗೆ ನಿಲುವನ್ನು ತೆಲಂಗಾಣ ಜನರಿಗೆ ತಪ್ಪಾಗಿ ವಿವರಿಸುತ್ತಾನೆ ಹಾಗೂ ಸಶಸ್ತ್ರ ಹೋರಾಟವನ್ನು ಪ್ರತಿಪಾದಿಸುವವರು ತುಳಿದಿರುವ 'ಹುಚ್ಚು ಹಾದಿ' ಯನ್ನು ತೋರಿಸಿ ಜನರ ನೈತಿಕ ಸ್ಥೈರ್ಯ ಕುಂದಿಸಲು ಪ್ರಯತ್ನಿಸುತ್ತಾನೆ. ಶತ್ರುಗಳು ಜನರ ನಡುವೆ ಹಂಚುತ್ತಿರುವ ಕರಪತ್ರಗಳ ಬಗ್ಗೆ ನಿಮಗೆ ಗೊತ್ತಿರಬಹುದು.

"ಆದರೂ ನಾವು ಈ ಬಗ್ಗೆ ಹತಾಶರಾಗ ಬಾರದು. ಕಳೆದ ನಾಲ್ಕು ವರ್ಷಗಳಿಂದ ವೈರಿ ನಮ್ಮ ಮುಂದೆ ಒಡ್ಡಿದ ಅತ್ಯಂತ ಕಷ್ಟದ ಪರಿಸ್ಥಿತಿಗಳನ್ನು ನಾವು ಎದುರಿಸಿದ್ದೇವೆ. 1948 ರಲ್ಲಿ ನೆಹರೂ ಆಡಳಿತದ ಫ್ಯಾಸಿಸ್ಟ್ ಪಡೆಗಳಿಂದ ತೀವ್ರವಾಗಿ ಕ್ಷತಿಗೊಂಡ ನಮ್ಮ ಪಡೆಗಳು ಈಗ ಪುನಃ ಸಂಘಟಿತವಾಗಿದ್ದು ಬಲಗೊಂಡಿದೆ ಹಾಗೂ ಬೆಳೆದಿದೆ. ನಮ್ಮ ರಾಜಕೀಯ ಮತ್ತು ಸೇನಾ ಕಮಾಂಡರ್‌ಗಳು ಹಾಗೂ ಗೆರಿಲ್ಲಾ ಹೋರಾಟಗಾರರು ಸಮರಾಂಗಣದಲ್ಲಿ ನುರಿತು ಹದಗೊಂಡಿದ್ದಾರೆ, ರಾಜಕೀಯ ಹಾಗೂ ಮಿಲಿಟರಿ ಅನುಭವಗಳಲ್ಲಿ ಗಣನೀಯವಾಗಿ ಬೆಳೆದಿದ್ದಾರೆ. ನಮ್ಮ ಜನರು ಕಾಲದ ಪರೀಕ್ಷೆಯಲ್ಲಿ ಗೆದ್ದಿದ್ದಾರೆ. ಶತ್ರುಗಳ ಬರ್ಬರ ದಬ್ಬಾಳಿಕೆಗೂ ನಮ್ಮ ಜನರ ನೈತಿಕ ಸ್ಥೈರ್ಯವನ್ನು ಮುರಿಯಲು ಆಗಲಿಲ್ಲ. ನಮ್ಮ ಜನರಲ್ಲಿ, ಅವರ ಕ್ರಾಂತಿಕಾರಿ ಹೀರೋಯಿಸಂನ ವಿಶಾಲ ಆಣೆಕಟ್ಟು ಹಾಗೂ ಸಾಮರ್ಥ್ಯದಲ್ಲಿ ವಿಶ್ವಾಸವಿಡೋಣ. ಇತರ ಪ್ರಾಂತ್ಯಗಳಲ್ಲಿನ ನಮ್ಮ ಸಂಗಾತಿಗಳ ಅಂತರ್ಗತ ಒಳ್ಳೆತನ ಮತ್ತು ಪ್ರಾಮಾಣಿಕತೆಯಲ್ಲಿ ವಿಶ್ವಾಸವಿಡೋಣ. ಪಕ್ಷವನ್ನು ನಿಶ್ಚಯವಾಗಿಯೂ ಪುನಶ್ಚೇತನಗೊಳಿಸುವ ಮಾರ್ಕ್ಸ್‌ವಾದ ಲೆನಿನ್‌ವಾದದಲ್ಲಿ ನಾವು ನಂಬಿಕೆಯಿಡೋಣ".

(ಮುಗಿಯಿತು)

ಏನಂತೀರಿ?

ಕಳೆದೊಂದು ವರುಷದಿಂದಲೂ ನಿರಂತರವಾಗಿ 'ವಿಮೋಚನಾ ಸಮರದಲ್ಲಿ....' ಆತ್ಮಕಥನವನ್ನು ಓದುತ್ತಾ ಬಂದಿದ್ದೀರಿ. ಪ್ರತೀವಾರವೂ ಕಾತುರದಿಂದ, ಕೆಚ್ಚೆದೆಯ ಅನುಭವಗಳನ್ನು ಅರಿವ ತವಕದಲ್ಲಿ ಓದುಗರು ಕಾದಿದ್ದು ಪ್ರತೀವಾರವೂ ನಮಗೆ ಬಂದ ಪ್ರತಿಕ್ರಿಯೆಗಳಿಂದ ಕಂಡಿದೆ.

52 ಕಂತುಗಳಲ್ಲಿ ಈಗಾಗಲೇ ತೆರೆದುಕೊಂಡ ಆತ್ಮಕಥನ ಮುಕ್ತಾಯಗೊಂಡಿದೆ. ಎಲ್ಲರಲ್ಲೂ ಹೋರಾಟದ ಕಿಚ್ಚು ಹಚ್ಚಿದ, ಚಿಂತನೆ ಬೆಳೆಸಿದ ಈ ಧಾರವಾಹಿಯ ಬಗ್ಗೆ ನಿಮ್ಮ ಅನಿಸಿಕೆಗಳಿಗೆ ಸ್ವಾಗತ. ತಪ್ಪದೇ ಅಭಿಪ್ರಾಯಗಳನ್ನು ಬರೆದು ಕಳಿಸಿ. ಅವುಗಳನ್ನು ದಾಖಲಿಸೋಣ.

- ಸಂ.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಡಿಸೆಂಬರ್ 16, 2003**
  ಖಾಸಗೀಕರಣದ ವಿರುದ್ಧ ಸಾರ್ವಜನಿಕ ತೈಲ ಉದ್ದಿಮೆ ನೌಕರರ ಮುಷ್ಕರ
- **ಡಿಸೆಂಬರ್ 19, 2003**
  ಜೀವ ವಿಮಾ (ಎಲ್‌ಐಸಿ) ಏಜೆಂಟ್ಸ್ ಅಖಿಲ ಭಾರತ ಸಮ್ಮೇಳನ, ತಿರುವನಂತಪುರ
- **ಡಿಸೆಂಬರ್ 26-27, 2003**
  ಅಖಿಲ ಭಾರತ ಕಿಸಾನ್ ಸಭಾ ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಆಶ್ರಯದಲ್ಲಿ
  ವಿಚಾರಸಂಕಿರಣ : ಭಾರತದ ಕೃಷಿ ಕ್ಷೇತ್ರವು ಎದುರಿಸುತ್ತಿರುವ ಸವಾಲುಗಳು
  ತಿರುವನಂತಪುರ, ಕೇರಳ
- **ಡಿಸೆಂಬರ್ 28, 30, 2003**
  64ನೇ ಭಾರತ ಇತಿಹಾಸ ಕಾಂಗ್ರೆಸ್
  ಮೈಸೂರು ವಿಶ್ವವಿದ್ಯಾಲಯ
  ಮೈಸೂರು
- **ಜನವರಿ 16 ರಿಂದ 21, 2004**
  ವಿಶ್ವ ಸಾಮಾಜಿಕ ವೇದಿಕೆ(WSF)
  3ನೇ ಜಾಗತಿಕ ಸಮ್ಮೇಳನ
  ಮುಂಬಯಿ

ಹಿಂದುಗಳ ಹೆಸರಿನಲ್ಲಿ ವಿಷ ಉಣಿಸುವ 'ಮತ'ವಾದಿಗಳ ಜಾತ್ರೆ

ಈಗ ಹಿಂದೂ ಸಮಾಜೋತ್ಸವದ ಬಿರುಸು ಬೆಂಗಳೂರು, ಉಡುಪಿಗಳಲ್ಲಿ ಭಾರಿ ಸಮಾರಂಭ ನಡೆದವು. ಇದರ ಬೆನ್ನಲ್ಲಿ ಕೊಡಗು, ಮಡಿಕೇರಿಯಲ್ಲಿ ಭರ್ಜರಿ ತಯಾರಿ. ಇಂತಹ ಹಿಂದೂ ಸಮಾಜೋತ್ಸವ ಮಾತ್ರವೇ ಭಾರತವನ್ನು ಉಳಿಸುತ್ತದೆ ಎನ್ನುತ್ತಾರೆ ಸಂಘಟಕರು. ರಾಮಮಂದಿರ ಅಯೋಧ್ಯೆಯಲ್ಲೇ ನಿರ್ಮಾಣ, ಅಸ್ಪೃಶ್ಯತೆ-ಭಯೋತ್ಪಾದನೆ ಈ ಉತ್ಸವಗಳ ಮುಖ್ಯ ಧ್ಯೇಯವಾಕ್ಯ. ಈ ಹಿಂದೆಯೂ ಹಲವಾರು ಕಡೆ ಇಂತಹ 'ಸಮಾಜೋತ್ಸವ'ಗಳು ನಡೆದಿವೆ. ಅದರ



ನಂತರ ಅಥವಾ ಅದಕ್ಕೂ ಮೊದಲು ಕೋಮುಗಲಭೆಗಳು ಹತ್ತಿ ಉರಿದಿವೆ. ಎಂತಹ ವಾತಾವರಣವನ್ನು ಬಿಸಿಯೇರಿಸಿ ಬೆಂಕಿ ಭುಗಿಲೇಳಿಸುವ ಶಕ್ತಿ ಅದರ ನಾಯಕರಿಗಿದೆ. ಬೆಂಗಳೂರಿನಲ್ಲಿಯೂ ಡಿಸೆಂಬರ್ 7 ರಂದು ಸಮಾವೇಶದ ಮೊದಲ ಕೆಲವೇ ದಿನಗಳ ಹಿಂದೆ ಯಲಹಂಕ ಪ್ರದೇಶದಲ್ಲಿ ವಿಗ್ರಹಗಳ ಕಳ್ಳತನ, ವಿಗ್ರಹಗಳ ಮೇಲೆ ದಾಳಿ ಇತ್ಯಾದಿಗಳು ದಿನದಿನವೂ ಸರಣಿಯಂತೆ ಸಂಭವಿಸಿದವು! ಹಿಂದೂ ಧರ್ಮ ರಕ್ಷಣೆಗಾಗಿ, 'ಗಲಭೆಗಳೂ' ನಡೆದವು. ಒಟ್ಟಾರೆ ಜನರ ಮನದಲ್ಲಿ ಅಭದ್ರತೆ ಹುಟ್ಟಿಸಲಾಯಿತು. ಓಣಿ ವಿದ್ಯಾಮಾನಗಳ ಜಾಗತಿ ಭಯೋತ್ಪಾದನೆಯ ನಂಟನ್ನು ಪ್ರಚುರಿಸಲಾಯಿತು. ಹಿಂದೆ ಕೊಡಗಿನಲ್ಲಿ ಹಿಂದೂ ಸಮಾಜೋತ್ಸವ ಆದ ಕೆಲವು ದಿನಗಳಲ್ಲಿ ವಾರಗಟ್ಟಲೆ 'ಹರಿಶ್ಚಂದ್ರ' ಊರಿನ ದೇವಸ್ಥಾನದ ನೆಪದಲ್ಲಿ ಏಕಮುಖವಾಗಿ ಅಲ್ಪಸಂಖ್ಯಾತರ ಮೇಲೆ ಧಾಳಿಗಳು ನಡೆದವು. ಹಾವೇರಿಯಲ್ಲಿ, ಉಳ್ಳಾಲದಲ್ಲಿ ಗಲಭೆ ಕಂಡಿದ್ದೇವೆ. ಇನ್ನೂ ಚುನಾವಣೆಗಳು ಹತ್ತಿರಬರುತ್ತಿರುವಂತೆ ಕಿಚ್ಚು ಹೊತ್ತಿಸದೇ ಇದ್ದಾರೆಯೇ?

ಇಂತಹ ಸಮಾಜೋತ್ಸವಗಳ ಸಿದ್ಧತೆಯೇ ಹಾಗಿರುತ್ತದೆ. ಪ್ರಚಾರದ ವೈಖರಿ, ಅತ್ಯಂತ ತಂತ್ರಬದ್ಧವಾಗಿ ರೂಪಿಸಲಾಗುತ್ತದೆ. ಘೋಷಣೆ, ಅಲಂಕಾರ, ಮೆರವಣಿಗೆ ಹಾದಿ, ಭಾಷಣಗಳು, ಮಾಧ್ಯಮಗಳಲ್ಲಿ ಅದರ ಬಿಸಿಯೇರಿಸುವುದು ಎಲ್ಲವೂ ಯೋಜನಾಬದ್ಧ. ಸಮಾವೇಶಗಳಲ್ಲಿ ಭಾಗಹಿಸುವ ಜನರ ಸಂಖ್ಯೆಗಿಂತ ಹತ್ತು ಪಟ್ಟು ಜನರನ್ನು ಈ ಪ್ರಚಾರ ತಲುಪುತ್ತದೆ. ಬೆಂಗಳೂರಿನ 'ಉತ್ಸವ'ಕ್ಕೆ ಬಳಸಲಾದ ಬ್ಯಾನರ್-ಅದರ ಘೋಷಣೆಗಳು, ತಯಾರಿಯ ರೀತಿ ಅತ್ಯಂತ ಪ್ರಚೋದಾನತ್ಮಕ. ಯಾವುದೇ ಓಣಿ, ಕಾಲೋನಿ, ಸರ್ಕಲ್-ರಸ್ತೆಗಳು ಈ 'ಸಿಂಗಾರ' ಸಿದ್ಧತೆಯಿಂದ ಉಳಿದಿರಲಿಲ್ಲ. ಇಂತಹ ಒಟ್ಟು ಸಮಾವೇಶಕ್ಕೆ ಏನಿಲ್ಲವೆಂದರೂ 2 ಕೋಟಿ ರೂ. ಖರ್ಚಾಗಿರುವ ಅಂದಾಜಿದೆ. ಈ ಹಣ, ಇಷ್ಟು ಎಲ್ಲಿಂದ ಬಂತು ಎಂದು ಯಾರೂ ಕೇಳುವಂತಿಲ್ಲ. ಇದಕ್ಕೆ ಲೆಕ್ಕ ಕೊಡಬೇಕೆಂಬ ನಿಯಮವೂ ಆರ್‌ಎಸ್‌ಎಸ್‌ನಲ್ಲಿ ಇಲ್ಲ. ಎಲ್ಲವೂ ರಾಮಮಂದಿರ ಇಟ್ಟಿಗೆ ಹಣದಂತೆಯೇ? ಅಲ್ಲಿ ಸಾವಿರಾರು ಕೋಟಿ ಸಂಗ್ರಹಿಸಿದರೂ ಲೆಕ್ಕ ನೀಡಲಿಲ್ಲ. ಕೇಳಿದ ಅಧಿಕಾರಿಗಳನ್ನು ಎತ್ತಂಗಡಿ ಮಾಡಲಾಯಿತು!

ಇಂತಹ ಪ್ರಚೋದನಾತ್ಮಕ ಸಂವಿಧಾನ ವಿರೋಧಿ ಘೋಷಣೆಗಳ ಬ್ಯಾನರುಗಳನ್ನು ಪ್ರದರ್ಶಿಸಲು ಬೆಂಗಳೂರು ಮಹಾನಗರ ಪಾಲಿಕೆ ಅನುಮತಿ ನೀಡಿತೇಕೆ? ಕಾಸು ಕಟ್ಟಿರುವುದರಿಂದ ಪರವಾನಗಿ ಕೊಟ್ಟಿರಬೇಕು ಎನ್ನುತ್ತಾರೆ ಮುಖ್ಯಮಂತ್ರಿಗಳು. ಅಂದರೆ ಕಾಸು ಕೊಟ್ಟರೆ ಏನೂ ಬರೆಯಹುದು, ಕೂಗಬಹುದು, ಪ್ರದರ್ಶಿಸಬಹುದು. ಬಹಳ ಚೆನ್ನಾಗಿದೆ ವಿಶ್ವಬ್ಯಾಂಕಿನ ಪಾಠ! ಅಂತೂ ಸಂಘ ಪರಿವಾರದ ಸಮಾರಂಭದಲ್ಲಿ 'ಕೊಟ್ಟವ ಕೋಡಂಗಿ, ತಿಂದವ ಈರಭದ್ರ'! ಅವರ ಪ್ರಚಾರದ ವೈಖರಿಯೇ ಒಂದು ಭಯೋತ್ಪಾದನೆ!.

ಬೆಂಗಳೂರು, ಉಡುಪಿ ಮುಂತಾದೆಡೆಯ 'ಸಮಾಜೋತ್ಸವ'ಗಳು ಸಂಘ ಪರಿವಾರದ ಸದ್ಯದ 'ಮೂರನೇ ಅಜೆಂಡಾಗಳಲ್ಲಿ ಒಂದು. ಇನ್ನುಳಿದದ್ದು ಗಲಭೆಗಳು. ಬಾಬಾ ಬುಡನ್‌ಗಿರಿ ಅಯೋಧ್ಯೆಯಾಗಿಸುವುದು.....!

ಬೆಂಗಳೂರಿನ ಸಮಾವೇಶಕ್ಕೆ ಕುಖ್ಯಾತ ಪ್ರವೀಣ ತೊಗಾಡಿಯ ಬಂದಿದ್ದ. ಪೇಜಾವರರೂ, ಆದಿಚುಂಚನಗಿರಿ ಸ್ವಾಮಿಗಳು, ಹೈಟೆಕ್ ಸ್ವಾಮಿ ರವಿಶಂಕರ್ ಇದ್ದರು. ಪ್ರಕಟಿಸಿದಂತೆ ತುಮಕೂರಿನ ಸಿದ್ಧಗಂಗಾ ಮಠದ ಸ್ವಾಮಿಗಳ ಬರದೇ ಹೊರಗುಳಿದರು. ಇದರಲ್ಲಿ ಭಾಗವಹಿಸಬೇಡಿ, ಕೋಮುವಾದಿಗಳಿಗೆ ಅಧಿಕೃತ ತರಬೇತಿ ಎಂದು ನಾಡಿನ ಹಿರಿಯ ಚಿಂತಕರು ಮನವಿ ಮಾಡಿದ್ದರು.

ಮುಸ್ಲಿಂರಿಗಾದರೆ ಮೆಕ್ಕ ಇದೆ. ಆದರೆ ಹಿಂದುಗಳಿಗೇನಿದೆ. ಆದ್ದರಿಂದಲೇ ಅಯೋಧ್ಯೆಯಲ್ಲಿ ರಾಮಮಂದಿರ ಆಗಬೇಕು ಎಂಬುದು ಚೆಡ್ಡಿ ಪಡೆಗಳ ಆಂಬೋಣ. ಅದಕ್ಕೆ ಆದಿಚುಂಚನಗಿರಿ ಸ್ವಾಮಿಗಳು ದನಿ ಗೂಡಿಸಿದ್ದರೆ ಉರು ಹೊಡೆದು ಉಡುಪಿಯಲ್ಲಿಯೂ ಹೇಳಿದ್ದಾರೆ. ಬದುಕಿನ ಕಲೆ ಕಲಿಸುವ ರವಿಶಂಕರ್ ಒಳಗೊಂಡು ಎಲ್ಲರದೂ ಇದೇ ಹಾಡು. ಕಣ್ಣು ಬಿಟ್ಟರೆ ಹತ್ತಾರು ದೇವಾಲಯಗಳು, ಆರಾಧನಾ ಕೇಂದ್ರಗಳು - ಹುಂಡಿಗಳು ಇರುವಾಗ ಸಾರಾಸಗಟು ಮಂಕುಬೂದಿ ಎರಚಿದರೆ? ತೊಗಾಡಿಯನಾನಂಥವರು ಕೊಡಗಟ್ಟಲೆ ವಿಷದ ದ್ವೇಷವನ್ನು ಕಕ್ಕಿದ್ದು, ಹಿಂದೂ ಪರ ಸರ್ಕಾರ ಚುನಾಯಿಸಲು ಕರೆ

ಈವಾರ ಕರ್ನಾಟಕ
ಒಂದು ನೋಟ
ಎಸ್.ವೈ.ಗುರುಶಾಂತ್

ಕೊಟ್ಟಿದ್ದ ಚುನಾವಣೆ ಅಜೆಂಡಾವಾಗಿತ್ತು. ಧರ್ಮದ ಹೆಸರಿನಲ್ಲಿ ನಡೆದ ರಾಜಕೀಯ ಸಮಾವೇಶವಾಗಿತ್ತು. ರಾಜಕೀಯ ಜಾತ್ರೆ ಎಂಬುದರಲ್ಲಿ ಅನುಮಾನವಿಲ್ಲ. ಈ ಬಾರಿಯೂ ಬಿಜೆಪಿ ಈ ಉತ್ಸವಕ್ಕೆ ಬೆಂಬಲ ಘೋಷಿಸಿ ಜನ ಹೆಚ್ಚು ಸೇರಿಸಲು ಪ್ರಯಾಸ ಪಟ್ಟಿತು. ಈಚೆಗೆ ಆ ಪಕ್ಷಕ್ಕೆ ಕರ್ನಾಟಕದಲ್ಲಿ ಎರಗುತ್ತಿರುವ ಅಘಾತಗಳಿಂದ ತೇಲುಗಣ್ಣು ಬಿಡುತ್ತಿರುವ ಅನಂತಕುಮಾರ್ ಈ ಉತ್ಸವ ತಮಗನುಕೂಲವಾದೀತು ಎಂಬ ನಿರೀಕ್ಷೆ. ಅದಕ್ಕಾಗಿ ಅನಂತಕುಮಾರ್ ಬೀದಿಗಿಳಿದು ಪ್ರಚಾರಕ್ಕಿಳಿದಿದ್ದು. ಈ ಬೆಂಕಿ ವಿಷ ಉಗುಳಿದ ಉತ್ಸವದಲ್ಲಿ ಐಎಂಎಫ್-ವಿಶ್ವಬ್ಯಾಂಕ್ ಬಗ್ಗೆಯಾಗಲಿ, ಅಮೆರಿಕಾದ ಆಕ್ರಮಣ,ಕೈಗಾರಿಕೆಗಳ ನಾಶ, ಕೃಷಿ ದಿವಾಳಿ,ರೈತರ ಕೂಲಿಕಾರರ ಆತ್ಮಹತ್ಯೆ-ಸಾವುಗಳು, ನಿರುದ್ಯೋಗದ ಬಗ್ಗೆ ಒಂದೇ ಒಂದು ಮಾತೂ ಕೇಳಿಬರಲಿಲ್ಲ. ಸತ್ತ ರೈತರು ಬಹುತೇಕ ಹಿಂದುಗಳೇ ಆಗಿದ್ದಾರೆ. ಅಂದರೆ ಈ ಚೆಡ್ಡಿ ವೀರರ 'ಹಿಂದೂ ಕಾಳಜಿ' ಎಂತಹದು ಎಂಬ ಪ್ರಶ್ನೆ ಸಹಜವಾಗಿದೆ. ಆದರೆ ಅದರತ್ತ ಕಿಂಚಿತ್ತೂ ಉತ್ತರ ಕೊಡಲು ಅವರು ತಯಾರಿಲ್ಲ.

ಈ ನಡೆವು ಕರ್ನಾಟಕದ ಸೆಕ್ಯುಲರ್ ಕಾಂಗ್ರೆಸ್‌ನ ಪಾತ್ರದ ಬಗ್ಗೆ ಹೇಳದಿದ್ದರೆ ಅರ್ಧ ವಿಷಯಗಳಾ ಆದವು. ಅಲ್ಪಸಂಖ್ಯಾತರನ್ನು ನೇರವಾಗಿಯೇ ತೆಗಳಿ, ದೂಷಿಸಿ ಪ್ರಚೋದಿಸುವ ಈ ಸಮಾವೇಶದ ಜಾಗವಿದ್ದದ್ದು ಕೂಗಳತೆಯ ದೂರದಲ್ಲೇ ಅಲ್ಪಸಂಖ್ಯಾತರು ವಾಸಿಸುವ ಪ್ರದೇಶದಲ್ಲಿ. ಸ್ವಲ್ಪ ಹೆಚ್ಚುಕಡಿಮೆಯಾದರೂ ಯಾವುದೇ ಕ್ಷಣದಲ್ಲಿ ಧಾಳಿಗಳು ನಡೆದು ಗಲಭೆ ಹೊತ್ತಿಕೊಳ್ಳಬಹುದಾದ ಪ್ರದೇಶದಲ್ಲಿ. ಉದ್ವಿಗ್ನತೆಯಲ್ಲಿ ಇದಕ್ಕೆ ಯಾಕೆ ಸರ್ಕಾರ ಅನುಮತಿ ನೀಡಿತು. ಹಾಗೆಯೇ ಕಾಂಗ್ರೆಸ್ ಅಧಿಕಾರದ ಮಹಾನಗರ ಪಾಲಿಕೆ ಯಾಕೆ ಪ್ರಚೋದನಾತ್ಮಕ ಪ್ರಚಾರ ಸಾಮಗ್ರಿ ಹಾಕಲು ಅವಕಾಶಕೊಟ್ಟಿತು. ಶಾಂತಿ, ಸೌಹಾರ್ದತೆ ಸಾರುವ ನಾಡಿನ ಚಿಂತಕರನ್ನು, ಸಂಘಟನೆಗಳನ್ನು ಜೈಲಿಗಟ್ಟುವ ಸರ್ಕಾರ ಹೀಗೇಕೆ ಮಾಡಿತು? ಕೋಮುವಾದಿಗಳು ಹಾರಿಸುವ ಧ್ವಜದ ಸಂಖ್ಯೆ ಮೀರುವಂತೆ ತ್ರಿವರ್ಣ ಧ್ವಜ ಹಾರಿಸುವುದಾಗಿ ಅಸಂಬದ್ಧವಾಗಿ ಮಾತನಾಡಿದ ಜಾಫರ್‌ಶರೀಫ್ ನಂತರ ಮೌನವಾಗಿ, ಹಿಂದುತ್ವವಾದಿಗಳು ಹುರುಪುಗೊಳ್ಳುವಂತೆ ಮಾಡಿದ್ದು ಯಾಕೆ? ಇದಕ್ಕೆ ಕೃಷ್ಣ ಹೇಳೋದು ಕಾದು ನೋಡಿ! ಅಂತೂ 'ಖಾವಿ ಪಡೆ' ಕರ್ನಾಟಕಕ್ಕೆ ಕೊಳ್ಳಿ ಇಡಲು ಧಾವಿಸುತ್ತಿದೆ. ಹಣವಂತರು, ಅಧಿಕಾರಸ್ಥರು ಹೈಟೆಕ್‌ನ ಮಠಾಧೀಶರೂ ಸಾಲಾಗಿ ಪಥಸಂಚಲನದಲ್ಲಿ ಹೊರಟಿದ್ದಾರೆ. ಜನಜಾಗೃತರಾಗಬೇಕಾದ ಸಮಯವಿದು. ಕರ್ನಾಟಕವನ್ನು ಇನ್ನೊಂದು ಗುಜರಾತ್ ಮಾಡುವ ಬೆದರಿಕೆ ಹಾಕಿದ್ದ ತೊಗಾಡಿಯಾಗೆ ಧಿಕ್ಕಾರ ಹೇಳಲು ಡಿಸೆಂಬರ್ 6 ರಂದು ಸಾವಿರಾರು ಜನ ಸೇರಿದ್ದು ಆಶಾದಾಯಕ.

ಖೋಟಾ ದೇಶಪ್ರೇಮಿಗಳ ಹತಾಶೆಯ ಅರಚಾಟ

ಇದು ಅನಿರೀಕ್ಷಿತ, ಆಘಾತ, ಹಾಗಾಗಿಯೇ ಹಾಲಾಹಲದ ಕುದಿತ, ಹತಾಶೆ.. ಈ ಬಾರಿಯೂ 'ದತ್ತಜಯಂತಿ'ಯನ್ನು ಅಂದುಕೊಂಡಂತೆ ಅಡೆತಡೆಯಿಲ್ಲದೆ ನಡೆಸಬಹುದು ಎಂಬ ಲೆಕ್ಕವಿತ್ತು. ದತ್ತಮಾಲೆ ಹೆಸರಿನಲ್ಲಿ ಬಾಬುಬುಡನ್‌ಗಿರಿಯ ಗುಹೆ ಬಳಿ, ಮಾಣಿಕ್ಯಧಾರದ ಸುತ್ತಮುತ್ತ ದಾಂಧಲೆ ನಡೆಸಿದ ಖಾವಿಪಡೆ ಅಲ್ಲಿನ ಅಲ್ಪಸಂಖ್ಯಾತರ ಅಂಗಡಿಗಳನ್ನು ಧ್ವಂಸಗೊಳಿಸಿದ್ದಲ್ಲದೇ, ದರ್ಗಾವೊಂದನ್ನು ಹಾಳುಗೆಡವಿತ್ತು. ಮಾರಳತೆಯಲ್ಲೇ ಪೊಲೀಸರಿದ್ದರೂ ಮೌನ ಪ್ರೇಕ್ಷಕರಾಗಿದ್ದುದು ಮಂಗನಾಟಕ್ಕೆ ಮದವೇರಿಸಿತ್ತು. ನಂತರ ಬಂದ ಜಿಲ್ಲಾಧಿಕಾರಿ ಉಳಿದದ್ದನ್ನು ನೆಲಸಮಗೊಳಿಸಿದ ಬಳಿಕವಂತೂ ಖಾವಿ ಪಡೆಗಳ ಗುಪ್ತ ಅಜೆಂಡಾ ಗೆಲುವಾಗುವ ಆಸೆ ಗರಿಗೆದರಿತ್ತು. ಅದಕ್ಕೆಂದೇ ಖಾವಿ ಪಡೆಯ ಮುತಾಲಿಕ ಬಿಜೆಪಿ ಅಧ್ಯಕ್ಷ ಅನಂತಕುಮಾರ್‌ಗಳು ಬಾಬಾಬುಡನ್ ಪೀಠವನ್ನು [illegible] ಭಾರತದ ಅಯೋಧ್ಯೆ ಮಾಡುವ ಬಹಿರಂಗ [illegible]ರಿಕೆ ಹಾಕತೊಡಗಿದ್ದರು. ಚುನಾವಣೆಗಳು ಹತ್ತಿರವಾಗುತ್ತಿದಂತೆಯೇ ಈ ದುಷ್ಟ ಅಜೆಂಡಾವನ್ನು ಜಾರಿಗೊಳಿಸಿ ನಾಗರಿಕತೆ, ಪರಂಪರೆ, ದೇಶದ ಸಂಸ್ಕೃತಿ-ಜನಜೀವನಕ್ಕೆ ಬೆಂಕಿ ಇಡಲು ಸಿದ್ಧಗೊಂಡಿದ್ದರು ಚೆಡ್ಡಿಪಡೆ. ಆದರೆ.. ಮೋದಿ, ತೊಗಾಡಿಯಾಗಳ ಸಂತತಿ ಅಂದುಕೊಂಡಂತೆ ಆಗಲಿಲ್ಲ. ಕಾರಣ ಕೋಮುವಾದಿ ವಿಧ್ವಂಸತನಕ್ಕೆ ಈ ವರುಷ ದೇಶಪ್ರೇಮಿ, ಧರ್ಮನಿರಪೇಕ್ಷತೆಯ ಜನತೆಯಿಂದ ಬೆಳೆದುಬಂದ ಭಾರಿ ಪ್ರತಿರೋಧ. ಸಂಘ ಪರಿವಾರದ ಜೊತೆ ಆಡಳಿತ ಕೈಜೋಡಿಸಿದರೂ ಜಾರಿಗೊಳ್ಳದ ಅಜೆಂಡಾ! ಹೀಗಾಗಿ ಮುತಾಲಿಕ, ಅನಂತಕುಮಾರ ಒಂದಾಗಿ ಅರಚುತ್ತಿದ್ದಾರೆ. ಬಿಜೆಪಿಯ ಶಂಕರಮೂರ್ತಿ, ರಾಮಚಂದ್ರಗೌ[illegible] ತಾವು ರಾಜಕೀಯ ಪಕ್ಷದ ನಾಯಕರು ಎಂಬುದನ್ನು ಮರೆತು ಅತ್ಯಂತ ಬೇಜವಾಬ್ದಾರಿಯಿಂದ ಬಜರಂಗದಳದ ಭಯೋತ್ಪಾದಕರಂತೆ ಆಡುತ್ತಿದ್ದಾರೆ.

'ಬಾಬಾ ಬಡನ್‌ಗಿರಿಯ ಸೌಹಾರ್ದ, ಸೂಫಿ ಸಂತರ ಪರಂಪರೆ, ಸಂಸತಿಯ ಬಹುಮುಖಿ ಸಂಸತಿಯ ರಕ್ಷಣೆಗೆ ಮುಂದಾದ ಜ್ಞಾನಪೀಠ ಪ್ರಶಸ್ತಿವಿಜೇತ ಕನ್ನಡದ ಖ್ಯಾತ ಬರಹಗಾರ ಗಿರೀಶ್ ಕಾರ್ನಾಡರನ್ನು 'ದೇಶದ್ರೋಹಿ'ಗಳೆಂದು ಕರೆದು ತಮ್ಮ ನಾಲಿಗೆ, ಮಾತಿನ ಮೂಲದ ನಿಜಬಣ್ಣ

- ಪುಟ 5ಕ್ಕೆ

ಐಕ್ಯರಂಗ
4 ದಶಕಗಳ ಹಿಂದೆ
ಡಿಸೆಂಬರ್ 6, 1964

ಮೈದಾನ್ ಗೇರುಬೀಜ ಕಾರ್ಖಾನೆ ಮುಚ್ಚುವುದರ ವಿರುದ್ಧ ಪಿಎಲ್ ಕಾರ್ಮಿಕರ ಧೀರ ಹೋರಾಟ

ಪಿಯರ್ ಲೆಸ್ಲಿ ಕಂಪನಿಯು ಬ್ರಿಟನ್ ಬಂಡವಾಳಿಗರ ಒಂದು ಸಂಸ್ಥೆಯಾಗಿದೆ....

ಭಾರತದಲ್ಲಿ ಗೇರುಬೀಜ ಕೈಗಾರಿಕೆಯನ್ನು ನಡೆಸುತ್ತಿರುವ ಸಂಸ್ಥೆಗಳಲ್ಲಿ ಇದು ಪ್ರಮುಖ ಸಂಸ್ಥೆಯಾಗಿದೆ. ಮಂಗಳೂರಿನಲ್ಲಿ ಮೂರು ಗೇರುಬೀಜ ಕಾರ್ಖಾನೆಗಳನ್ನು ನಡೆಸುತ್ತಿದೆ. ಮಂಗಳೂರಿನಲ್ಲಿ ಈ ಸಂಸ್ಥೆಯ ಕಾರ್ಖಾನೆಗಳಲ್ಲಿ ಸುಮಾರು ನಾಲ್ಕು ಸಾವಿರ ಮಂದಿ ಕಾರ್ಮಿಕರು ದುಡಿಯುತ್ತಿದ್ದಾರೆ.

ಮುಷ್ಕರಾರಂಭ - ತಮ್ಮ ಸಂಕಷ್ಟಗಳನ್ನೆಲ್ಲಾ ಮಜೂರರು ನಿವೇದಿಸಿಕೊಂಡರೂ ಮಾಲಕರಿಂದ ಯಾವ ರೀತಿಯ ಸಹಾನುಭೂತಿಯೂ ದೊರೆಯಲಿಲ್ಲ. ಎಂತಲೇ ತಾ. 24.11.64 ರಿಂದ ಮಜೂರರ ಧರಣಿ ಮುಷ್ಕರವನ್ನು ಹೂಡಿದರು.

★

ಅಪಪ್ರಚಾರದ ಅಸಂಬದ್ಧ ಪತ್ರಿಕಾ ವರದಿಗಳು ಕಾಂ. ಸುಂದರಯ್ಯರವರ ಖಂಡನೆ

ಭಾರತ ಕಮ್ಯುನಿಸ್ಟ್ ಪಾರ್ಟಿಯು ಏಳನೇ ಕಾಂಗ್ರೆಸ್ಸಿನ ಬಳಿಕ 'ಎಡ ಕಮ್ಯುನಿಸ್ಟರು' ಸಶಸ್ತ್ರ ಹೋರಾಟಕ್ಕಾಗಿ ರಹಸ್ಯ ಸಿದ್ಧತೆಗಳನ್ನು ಮಾಡುತ್ತಲಿದ್ದಾರೆಂಬ ಸುಳ್ಳು ಸುದ್ದಿಗಳನ್ನು ಕೆಲವೊಂದು ಪತ್ರಿಕೆಗಳು ಪ್ರಕಟಿಸುತ್ತಲಿವೆ. ಇಂತಹ ಸುಳ್ಳು ಸುದ್ದಿಗಳಲ್ಲಿ ಎಳ್ಳಷ್ಟೂ ಹುರುಳಿಲ್ಲ ಹಾಗೂ ಈ ಸುದ್ದಿಗಳು ಅಪಪ್ರಚಾರದ ಉದ್ದೇಶದಿಂದ ಕೂಡಿದ ಸಂಪೂರ್ಣ ಸುಳ್ಳು ಸುದ್ದಿಗಳಾಗಿವೆ ಎಂದು ಭಾರತ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ. ಪಿ.ಸುಂದರಯ್ಯರವರು ಪತ್ರಿಕಾ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

★

ಸರ್ಕಾರದ ಧೋರಣೆಯೇ ಆಹಾರಾಭಾವಕ್ಕೆ ಕಾರಣ ಭಾರತ ಕಮ್ಯುನಿಸ್ಟ್ ಪಾರ್ಟಿ ಮೈಸೂರು ರಾಜ್ಯ ಮಂಡಳಿಯ ನಿರ್ಣಯಗಳು

ಮೈಸೂರು ರಾಜ್ಯದಲ್ಲಿ ಗಂಭೀರವಾಗಿರುವ ಆಹಾರ ಪರಿಸ್ಥಿತಿಗೆ ಕಾಳಸಂತೆಯವರನ್ನು ಪ್ರೋತ್ಸಾಹಿಸುವ ಮೈಸೂರು ಸರ್ಕಾರದ ಧೋರಣೆಯೇ ಕಾರಣವೆಂದು ಭಾರತ ಕಮ್ಯುನಿಸ್ಟ್ ಪಾರ್ಟಿಯ ರಾಜ್ಯ ಮಂಡಳಿಯ ಸಭೆಯು ಆರೋಪಿಸಿದೆ. ಸರ್ಕಾರದ ಈ ಧೋರಣೆಯ ವಿರುದ್ಧ ಕಮ್ಯುನಿಸ್ಟ್ ಪಾರ್ಟಿ ಮತ್ತು ಜನತೆ ಒಂದಾಗಿ ಹೋರಾಡಬೇಕೆಂದೂ ರಾಜ್ಯ ಮಂಡಳಿಯು ಕರೆಯಿತ್ತಿದೆ.

★

ಇಂಡೋನೇಶ್ಯಾದ ದಿಟ್ಟ ಹೆಜ್ಜೆ

ಬ್ರಿಟನ್ ಒಡೆತನದಲ್ಲಿರುವ ಎಲ್ಲಾ ಕಂಪನಿಗಳನ್ನು ಮತ್ತು ಅವುಗಳ ಶಾಖೆಗಳನ್ನು ಇಂಡೋನೇಶ್ಯಾ ಸರ್ಕಾರವು ತನ್ನ ನೇರವಾದ ನಿಯಂತ್ರಣಕ್ಕೆ ಒಳಪಡಿಸುವ ಕಾರ್ಯಕ್ರಮವನ್ನು ಅಧ್ಯಕ್ಷ ಸುಕಾರ್ನೋರವರು ಅಂಗೀಕರಿಸಿದ್ದಾರೆ. ಈ ಕಂಪನಿಗಳಿಗೆ ತಾತ್ಕಾಲಿಕ ಸಂರಕ್ಷಣೆಯನ್ನು ಒದಗಿಸಲಾಗಿತ್ತು.

★

ಪೋರ್ತುಗೀಸ್ ಜನತೆಯ ಐತಿಹಾಸಿಕ ಹೋರಾಟ

ಸಾಲಜಾರ್ ಸರ್ವಾಧಿಕಾರದ ದೇಶದೊಳಗಡೆ ದಿನ ನಿತ್ಯವೂ ಕಮ್ಯುನಿಸ್ಟ್ ಪಾರ್ಟಿ ನೇತೃತ್ವದಲ್ಲಿ ಜನತೆ ನಡೆಸುತ್ತಿರುವ ಧೀರೋದಾತ್ತ ಹೋರಾಟವನ್ನು ಜಗತ್ತಿನಿಂದ ಮರೆ ಮಾಚಿಡಲು ಅದೆಷ್ಟು ಪ್ರಯತ್ನಿಸಿದರೂ ಈ ಮೌನದ ಗೋಡೆ ಒಮ್ಮೆ ಕುಸಿದು ಬೀಳುವಂತ ಸ್ಥಿತಿಯಿದೆಯೆಂದು ಈಗಿನ ಪರಿಸ್ಥಿತಿಗಳಿಂದ ಭಾವಿಸಬಹುದಾಗಿದೆ.

ಡಿಸೆಂಬರ್ 11 ಅಖಿಲ ಭಾರತ ಶೈಕ್ಷಣಿಕ ಮುಷ್ಕರ ಅಭೂತಪೂರ್ವ ಯಶಸ್ವಿ

ಭಾರತ ವಿದ್ಯಾರ್ಥಿ ಫೆಡರೇಷನ್ ಕರೆ ನೀಡಿದ್ದ 'ಶೈಕ್ಷಣಿಕ ಬಂದ್' ಯಶಸ್ವಿಯಾಗಿದೆ. ಎಸ್‌ಎಫ್‌ಐ ಕರೆ ನೀಡಿದ್ದ ಈ ಮಹತ್ವದ ಶೈಕ್ಷಣಿಕ ಬಂದ್‌ಗೆ ಈ ಬಾರಿ ವಿದ್ಯಾರ್ಥಿಗಳು ಅಭೂತಪೂರ್ವವಾಗಿ ಸ್ಪಂದಿಸಿದ್ದಾರೆ. ಸ್ವ ಇಚ್ಛೆಯಿಂದ ಎಸ್‌ಎಫ್‌ಐನ ಕರೆಗೆ ವಿದ್ಯಾರ್ಥಿನಿಯರು ಸೇರಿದಂತೆ ಲಕ್ಷಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ತರಗತಿ ಬಹಿಷ್ಕರಿಸಿ ವಿದ್ಯಾರ್ಥಿ ಚಳುವಳಿಯನ್ನು ದಾಖಲು ಮಾಡಿದ್ದಾರೆ. ಕೇಂದ್ರ-ರಾಜ್ಯ ಸರ್ಕಾರಗಳ ಶಿಕ್ಷಣದ ಖಾಸಗೀಸಕರಣ- ವ್ಯಾಪಾರೀಕರಣದ ನೀತಿಗೆ ಪ್ರತಿರೋಧ ಒಡ್ಡಿದ್ದಾರೆ.

ಶಿಕ್ಷಣದ ವ್ಯಾಪಾರೀಕರಣ ವಿರೋಧಿಸಿ, ಕೇಂದ್ರ-ರಾಜ್ಯ ಸರ್ಕಾರಗಳು ಶಿಕ್ಷಣಕ್ಕೆ ಬಜೆಟ್ ಹೆಚ್ಚಿಸಬೇಕು, ಖಾಸಗಿ ಶಿಕ್ಷಣ ಸಂಸ್ಥೆಗಳು ಡೊನೇಷನ್ ವಸೂಲಿ ಮಾಡುವುದನ್ನು ನಿಯಂತ್ರಿಸಲು ಕೇಂದ್ರೀಯ ಶಾಸನ ರಚಿಸಲು ಒತ್ತಾಯಿಸಿ, ವೃತ್ತಿ ಶಿಕ್ಷಣದ ಸಮಸ್ಯೆಗೆ ಶಾಶ್ವತ ಪರಿಹಾರ ರೂಪಿಸಲು ಆಗ್ರಹಿಸಿ ಶಿಕ್ಷಣದ ಕೋಮುವಾದೀಕರಣದ ವಿರುದ್ಧ, ಸರ್ಕಾರಿ ಶಾಲಾ- ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳಿಗೆ, ವಿದ್ಯಾರ್ಥಿ ಸಮುದಾಯದ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ ಕರೆ ನೀಡಿದ್ದ 'ಶೈಕ್ಷಣಿಕ ಬಂದ್' ಯಶಸ್ವಿಯಾಗಿದೆ. ಎಸ್‌ಎಫ್‌ಐ ಕರೆ ನೀಡಿದ್ದ ಈ ಮಹತ್ವದ ಶೈಕ್ಷಣಿಕ ಬಂದ್‌ಗೆ ವಿದ್ಯಾರ್ಥಿಗಳು ಅಭೂತಪೂರ್ವವಾಗಿ ಸ್ಪಂದಿಸಿದ್ದಾರೆ. ಸ್ವ ಇಚ್ಛೆಯಿಂದ ಎಸ್‌ಎಫ್‌ಐನ ಕರೆಗೆ ವಿದ್ಯಾರ್ಥಿನಿಯರು ಸೇರಿದಂತೆ ಲಕ್ಷಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ತಮ್ಮ ಪ್ರತಿಭಟನೆಯನ್ನು ದಾಖಲು ಮಾಡಿದ್ದಾರೆ. ಕೇಂದ್ರ-ರಾಜ್ಯ ಸರ್ಕಾರಗಳ ಶಿಕ್ಷಣದ ಖಾಸಗೀಸಕರಣ-ವ್ಯಾಪಾರೀಕರಣದ ನೀತಿಗೆ ವಿದ್ಯಾರ್ಥಿಗಳು ಪ್ರತಿರೋಧ ಒಡ್ಡಿದ್ದಾರೆ.

ಬೆಂಗಳೂರು ನಗರ-ಗ್ರಾಮಾಂತರ ಜಿಲ್ಲೆಗಳಲ್ಲಿ ಲಕ್ಷಕ್ಕೂ ಮೀರಿ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿದ್ದಾರೆ. ಕೋಲಾರದಲ್ಲಿ [illegible] ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ವ್ಯಾಪಕ [illegible] ವ್ಯಕ್ತವಾಗಿದೆ. [illegible] ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು, ಮದ್ದೂರು, ಮಳವಳ್ಳಿಯಲ್ಲೂ ಸಹ ಮೆರವಣಿಗೆ, ಭೂತದಹನ ಕಾರ್ಯಕ್ರಮ ನಡೆದಿದೆ. ಹಾಸನ ಜಿಲ್ಲೆಯಲ್ಲಿ ಎಲ್ಲಾ ಕಾಲೇಜುಗಳ ಬಂದ್ ಯಶಸ್ವಿಯಾಗಿದೆ. ಸಾವಿರಾರು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಸಂಪೂರ್ಣ ಶೈಕ್ಷಣಿಕ ಬಂದ್ ನಡೆದು ಬಳ್ಳಾರಿ ಜಿಲ್ಲಾ ಕೇಂದ್ರದಲ್ಲಿ 1 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಹೊಸಪೇಟೆ, ಹಗರಿಬೊಮ್ಮನಹಳ್ಳಿ ಇತರೆ ತಾಲ್ಲೂಕುಗಳಲ್ಲೂ ಸಾವಿರಾರು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ರಾಜ್ಯ-ಕೇಂದ್ರ ಸರ್ಕಾರಗಳ ಭೂತದಹನ ಮಾಡಿದರು.

ದಾವಣಗೆರೆ ಜಿಲ್ಲೆಯ ಹರಪ್ಪನ ಹಳ್ಳಿ ಶಾಲಾ ಕಾಲೇಜುಗಳ ಬಂದ್ ಯಶಸ್ವಿಯಾಗಿದೆ. ಸುಮಾರು 10 ಸಾವಿರಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ಫಾರ್ಮಸಿ, ಟಿಸಿಎಚ್, ಬಿ.ಎಡ್. ಮುಂತಾದ ತರಗತಿಗಳ ವಿದ್ಯಾರ್ಥಿಗಳು ಸಹ ತರಗತಿ ಬಹಿಷ್ಕರಿಸಿದ್ದಾರೆ.

ಗುಲ್ಬರ್ಗಾ ಜಿಲ್ಲೆಯಲ್ಲಿ ಇಂಜಿನಿಯರಿಂಗ್ ಕಾಲೇಜು ಸೇರಿದಂತೆ 15 ಸಾವಿರಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದ್ದಾರೆ. ಶಹಾಪುರ ತಾಲ್ಲೂಕಿನ ಎಲ್ಲಾ ಶಾಲಾಕಾಲೇಜುಗಳು ಬಂದ್ ಆಚರಿಸಿವೆ. ಬೀದರ್ ಜಿಲ್ಲೆಯಾದ್ಯಂತ ಸಂಪೂರ್ಣ ಶೈಕ್ಷಣಿಕ ಬಂದ್ ಯಶಸ್ವಿಯಾಗಿದೆ. ವೈದ್ಯಕೀಯ ಕಾಲೇಜು, ಐಟಿಐ ಕಾಲೇಜು, ಪದವಿ ಕಾಲೇಜುಗಳು, ಪ್ರೌಢಶಾಲೆಗಳ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಭೂತದಹನ ನಡೆಸಿದರು. ಕೊಪ್ಪಳ ಜಿಲ್ಲೆ ಸೇರಿದಂತೆ ಗಂಗಾವತಿಯಲ್ಲಿಯೂ ಪ್ರತಿಭಟನೆ ನಡೆದಿದೆ.

ತುಮಕೂರಿನ ಜಿಲ್ಲಾ ಕೇಂದ್ರದಲ್ಲಿ ಪದವಿ ಕಾಲೇಜುಗಳು, ಪದವಿಪೂರ್ವ ಕಾಲೇಜು, ಸಿ.ಎಸ್.ಪುರ ಪದವಿ ಪೂರ್ವ ಕಾಲೇಜು ಸೇರಿದಂದೆ ಸುಮಾರು 20 ಸಾವಿರಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದ್ದಾರೆ. ರಾಯಚೂರು ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆಯ ಕುಮಟಾ, ಹೊನ್ನಾವರ, ಅಂಕೋಲಾ, ಕಾರವಾರ ತಾಲ್ಲೂಕುಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದ್ದಾರೆ. ಗದಗ ಜಿಲ್ಲಾ ಕೇಂದ್ರ ಸೇರಿದಂತೆ ಗಜೇಂದ್ರ ಗಡ, ರೋಣ,ನರೇಗಲ್ ಮತ್ತು ಮೈಸೂರು ಜಿಲ್ಲೆಯ ಹುಣಸೂರು, ಕೊಡಗು ಜಿಲ್ಲೆಗಳಲ್ಲಿ ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿ, ವಿದ್ಯಾರ್ಥಿಗಳು ಕೇಂದ್ರ-ರಾಜ್ಯ ಸರ್ಕಾರಗಳ ಭೂತ ದಹನ ನಡೆಸಿದ್ದಾರೆ.

ರಾಜ್ಯದಾದ್ಯಂತ ಶೈಕ್ಷಣಿಕ ಬಂದ್ ಯಶಸ್ವಿಯಾಗಿದೆ. ವಿದ್ಯಾರ್ಥಿಗಳ ತೀವ್ರತರ ಅಸಮಾಧಾನವನ್ನು ಕೇಂದ್ರ ರಾಜ್ಯ ಸರ್ಕಾರಗಳು ಗಮನಿಸಿ, ಶಿಕ್ಷಣದ ವ್ಯಾಪಾರೀಕರಣ, ಕೋಮುವಾದೀಕರಣ ನಿಲ್ಲಿಸಬೇಕು. ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ನಿಯಂತ್ರಣವಿಡಬೇಕು, ಶಾಲಾ ಕಾಲೇಜುಗಳಿಗೆ ಮೂಲಭೂತ ಸೌಲಭ್ಯ ಒದಗಿಸಬೇಕು ಎಂದು ಎಸ್‌ಎಫ್‌ಐ ಒತ್ತಾಯಿಸುತ್ತದೆ. ಇಲ್ಲವಾದಲ್ಲಿ ವಿದ್ಯಾರ್ಥಿಗಳು ತೀವ್ರತರ ಹೋರಾಟ ನಡೆಸಬೇಕಾಗುತ್ತದೆಂದು ಎಚ್ಚರಿಸಿದೆ. ಇದನ್ನು ಅರಿತು ಕೇಂದ್ರ ರಾಜ್ಯ ಸರ್ಕಾರಗಳು ರಾಷ್ಟ್ರವ್ಯಾಪಿ ನಡೆದಿರುವ ವಿದ್ಯಾರ್ಥಿ ಮುಷ್ಕರವನ್ನು ಗಮನಿಸಿ ಎಚ್ಚೆತ್ತುಕೊಳ್ಳಬೇಕು. ○

'ಶೈಕ್ಷಣಿಕ ಬಂದ್' ಬೆಂಗಳೂರಿನಲ್ಲಿ ಯಶಸ್ವಿ

ಹಿಂದೆಂದೂ ಕಂಡರಿಯದಂತ ಸಂಖ್ಯೆಯಲ್ಲಿ ಸಹಸ್ರಾರು ವಿದ್ಯಾರ್ಥಿಗಳು ಡಿಸೆಂಬರ್ 11 ರಂದು ತರಗತಿ ಬಹಿಷ್ಕರಿಸಿದ್ದಾರೆ. ಬೆಂಗಳೂರು ನಗರದಲ್ಲಿ ಎರಡು ಕಡೆ ಭೂತದಹನ ನಡೆದಿದೆ. ವಿ.ವಿ.ಪುರಂ ಕಲೆ, ವಿಜ್ಞಾನ ಕಾಲೇಜು, ನ್ಯಾಷನಲ್ ಕಾಲೇಜು, ಓಲ್ಡ್ ಪೋರ್ಟ್ ಮತ್ತು ನ್ಯೂಪೋರ್ಟ್ ಪದವಿಪೂರ್ವ ಕಾಲೇಜುಗಳು, ಎಸ್‌ಎಲ್‌ಎನ್ ಪದವಿ ಕಾಲೇಜು, ಜೈನ್ ಪದವಿ ಕಾಲೇಜು, ಬಿಎಂಎಸ್ ಮಹಿಳಾ ಪದವಿ ಕಾಲೇಜು, ಎನ್.ಎಂ.ಕೆ.ಆರ್.ವಿ. ಪದವಿ ಮಹಿಳಾ ಕಾಲೇಜು, ಗಿರಿಜಾಂಬ ಪದವಿಪೂರ್ವ ಕಾಲೇಜು-ಹೈಸ್ಕೂಲುಗಳು ಸೇರಿದಂತೆ 20 ಸಾವಿರಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದರು. ಹಲವಾರು ವಿದ್ಯಾರ್ಥಿಗಳು ಸೇರಿ ಪ್ರೊ. ಶಿವಶಂಕರ್ ವೃತ್ತದ ಬಳಿ ಕೇಂದ್ರ-ರಾಜ್ಯ ಸರ್ಕಾರಗಳ ಭೂತ ದಹನ ಮಾಡಿದರು.

ಇನ್ನೊಂದೆಡೆ ನಗರ ಕೇಂದ್ರದಲ್ಲಿ ಸರ್ಕಾರಿ ಕಲಾ ಕಾಲೇಜು, ವಿಜ್ಞಾನ ಕಾಲೇಜು, ಮಹಾರಾಣಿ ಕಾಲೇಜುಗಳು, ಗೃಹ ವಿಜ್ಞಾನ ಕಾಲೇಜು, ಕೆ.ಎಲ್.ಇ. ಕಾಲೇಜು,



ಬೆಂಗಳೂರಿನಲ್ಲಿ ವಿದ್ಯಾರ್ಥಿಗಳಿಂದ ಪ್ರತಿಭಟನೆ

ಬಸವೇಶ್ವರ ಪದವಿ ಕಾಲೇಜು, ಅಂಬೇಡ್ಕರ್ ಕಾಲೇಜು, ಸರ್ವೋದಯ ಕಾಲೇಜು, ನಿಜಲಿಂಗಪ್ಪ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಆರ್.ಸಿ. ಕಾಲೇಜು, ಯುನೈಟೆಡ್ ಪದವಿ ಕಾಲೇಜು, ಎಸ್.ಜೆ.ಆರ್. ಮಹಿಳಾ ಪದವಿ ಕಾಲೇಜು, ಮಲ್ಲೇಶ್ವರಂನ ಅಮ್ಮಣ್ಣಿ ಪದವಿ ಕಾಲೇಜು ಹಾಗೂ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜು, ಕಾರ್ಪೋರೇಷನ್ ಪದವಿಪೂರ್ವ ಕಾಲೇಜುಗಳು ಸೇರಿದಂತೆ ಸುಮಾರು 25 ಸಾವಿರಕ್ಕೂ ಮೀರಿ ತರಗತಿ ಬಹಿಷ್ಕರಿಸಿದ್ದಾರೆ. ಸರ್ಕಾರಿ ವಿಜ್ಞಾನ ಕಾಲೇಜಿನ ಮುಂದೆ ಕೇಂದ್ರ-ರಾಜ್ಯ ಸರ್ಕಾರಗಳ ಭೂತವನ್ನು ದಹನ ಮಾಡಲಾಗಿದೆ.

ಸಂಜೆ ಕಾಲೇಜು ವಿದ್ಯಾರ್ಥಿಗಳ ಮುಷ್ಕರ

ವಿಜಯ ಪದವಿ ಸಂಜೆ ಕಾಲೇಜು, ವಿ.ವಿ.ಪುರಂ ಸಂಜೆ ಕಾಲೇಜು, ಎ.ಪಿ.ಎಸ್. ಸಂಜೆ ಕಾಲೇಜಿನ ನೂರಾರು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದ್ದರು. ವಿಜಯ ಸಂಜೆ ಕಾಲೇಜಿನ ರಸ್ತೆಯಲ್ಲಿ ಭೂತದಹನ ನಡೆಸಲಾಯಿತು. ವಿ.ವಿ.ಪುರಂ ಸಂಜೆ ಕಾಲೇಜಿನ ಮುಂದೆ ರಸ್ತೆ ತಡೆ ಮಾಡಲಾಯಿತು. ಸಂಜೆ ಕಾಲೇಜುಗಳನ್ನು ಮುಚ್ಚಲು ಬಿಡುವುದಿಲ್ಲವೆಂದು, ಶಿಕ್ಷಣದ ಖಾಸಗೀಕರಣದ ವಿರುದ್ಧ, ಕೋಮುವಾದೀಕರಣದ ವಿರುದ್ಧ ಮುಗಿಲು ಮುಟ್ಟುವಂತೆ ಘೋಷಣೆ ಕೂಗಿದರು.

ನೂರಾರು ಪ್ರೌಢ ಶಾಲಾ ವಿದ್ಯಾರ್ಥಿಗಳಿಂದ ತರಗತಿ ಬಹಿಷ್ಕಾರ

ಪ್ರಮುಖ ಪ್ರೌಢಶಾಲೆಗಳಾದ ಮಿತ್ರಾಲಯ, ವಿನಾಯಕ ಪ್ರೌಢಶಾಲೆ, ಕಾರ್ಪೋರೇಷನ್ ಪ್ರೌಢಶಾಲೆಗಳು, ಸರ್ಕಾರಿ ಪ್ರೌಢಶಾಲೆಗಳು ಸೇರಿದಂತೆ ಸುಮಾರು 20 ಕ್ಕೂ ಹೆಚ್ಚಿನ ಶಾಲೆಯ ವಿದ್ಯಾರ್ಥಿಗಳು ಸಹ ತರಗತಿ ಬಹಿಷ್ಕರಿಸಿದರು. ಮಧ್ಯಾಹ್ನದ ಬಿಸಿ ಊಟ ವಾಪಸ್ಸಾಗಿದೆ. ಬೆಂಗಳೂರು ಹೊರವಲಯದ ಕೆಂಗೇರಿ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಪ್ರಮುಖ ರಸ್ತೆಯಲ್ಲಿ ಮೆರವಣಿಗೆ ನಡೆಸಿದ್ದಾರೆ. ಕೆ.ಆರ್.ಪುರಂ ಪದವಿ, ಪದವಿಪೂರ್ವ ಕಾಲೇಜುಗಳು, ಹೈಸ್ಕೂಲ್ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಮೆರವಣಿಗೆ ನಡೆಸಿ ಕೇಂದ್ರ-ರಾಜ್ಯ ಸರ್ಕಾರಗಳ ಭೂತ ದಹನ ಮಾಡಿ ತಹಶೀಲ್ದಾರರಿಗೆ ಮನವಿ ಪತ್ರ ನೀಡಲಾಗಿದೆ. ಪರೀಕ್ಷೆಗಳನ್ನು ಮುಂದೂಡಲಾಗಿತ್ತು. ಕೆಲವು ಶಾಲೆಗಳಿಗೆ ಬಂದ್‌ನ ಬೆಂಬಲವಾಗಿ ರಜೆ ಘೋಷಿಸಲಾಗಿತ್ತು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲೂ ತೀವ್ರ ಪ್ರತಿಭಟನೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಎಲ್ಲಾ ಶಾಲಾ-ಕಾಲೇಜಿನ ವಿದ್ಯಾರ್ಥಿಗಳು ತರಗತಿ ಬಹಿಷ್ಕಾರ ಮಾಡಿ ಹೊಸಕೋಟೆ ಹೆದ್ದಾರಿಯಲ್ಲಿ ರಸ್ತೆ ತಡೆ ನಡೆಸಿದ್ದಾರೆ. ನೂರಾರು ವಿದ್ಯಾರ್ಥಿಗಳು ಹೊಸಕೋಟೆಯ ಪ್ರಮುಖ ರಸ್ತೆಯಲ್ಲಿ ಮೆರವಣಿಗೆ ಮಾಡಿ ತಹಶೀಲ್ದಾರರಿಗೆ ಬೇಡಿಕೆಗಳ ಮನವಿ ಪತ್ರ ಸಲ್ಲಿಸಿದರು.

ಆನೇಕಲ್ ತಾಲ್ಲೂಕಿನ ಪ್ರಾಥಮಿಕ ಶಾಲೆಯಿಂದ ಸರ್ಕಾರಿ ಪದವಿ ಕಾಲೇಜಿನವರೆಗೂ ಸಂಪೂರ್ಣ ಶಾಲಾ-ಕಾಲೇಜು ಬಂದ್ ಆಗಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಸಹ ಬಂದ್‌ಗೆ ಬೆಂಬಲವಾಗಿ ಶಾಲೆಗಳಿಗೆ ರಜೆ ಘೋಷಿಸಿದ್ದರು. ಎಸ್.ಎಫ್.ಐ. ತಾಲ್ಲೂಕು ಸಮಿತಿ ನೇತೃತ್ವದಲ್ಲಿ ಆನೇಕಲ್ ಟೌನ್‌ಸರ್ಕಲ್ ಬಳಿ ಭೂತ ದಹನ ಮಾಡಿತು.

ದೊಡ್ಡಬಳ್ಳಾಪುರ ತಾಲ್ಲೂಕಿನ ಪದವಿ ಕಾಲೇಜುಗಳು, ಪದವಿಪೂರ್ವ ಕಾಲೇಜುಗಳು, ಹೈಸ್ಕೂಲ್‌ನ ಎಲ್ಲಾ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದ್ದಾರೆ. ಕನಕಪುರ ತಾಲ್ಲೂಕಿನ ರೂರಲ್ ಕಾಲೇಜಿನ ಸುಮಾರು ಮೂರು ಸಾವಿರ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದ್ದಾರೆ. ಮುನ್ಸಿಪಲ್ ಕಾಲೇಜಿನ ವಿದ್ಯಾರ್ಥಿಗಳು, ರೂರಲ್ ಹೈಸ್ಕೂಲ್ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದ್ದಾರೆ.

ಒಟ್ಟಾರೆ ಇಡೀ ಬೆಂಗಳೂರು ನಗರ-ಗ್ರಾಮಾಂತರ ಜಿಲ್ಲೆಯಲ್ಲಿ ಲಕ್ಷಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ಬೀದಿಗಿಳಿದಿದ್ದಾರೆ. ಪೋಷಕರು, ಶಿಕ್ಷಕರು ಸಹ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದರು. ಕೇಂದ್ರ-ರಾಜ್ಯ ಸರ್ಕಾರಗಳ ವ್ಯವಸ್ಥಿತ ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ಸಿಡಿದಿದ್ದಾರೆ. ಭಾರತ ವಿದ್ಯಾರ್ಥಿ ಫೆಡರೇಷನ್ (SFI) ಕರೆ ನೀಡಿದ್ದ ಅಖಿಲ ಭಾರತ ಶೈಕ್ಷಣಿಕ ಬಂದ್‌ಗೆ ಬೆಂಗಳೂರು ನಗರ, ಗ್ರಾಮಾಂತರದ ಎಲ್ಲಾ ವಿದ್ಯಾರ್ಥಿಗಳು ಸಂಪೂರ್ಣ ಭಾಗವಹಿಸಿ ಬಂದ್ ಯಶಸ್ವಿಗೊಳಿಸಿದ್ದಾರಲ್ಲದೆ ಕೇಂದ್ರ-ರಾಜ್ಯ ಸರ್ಕಾರಕ್ಕೆ ಎಚ್ಚರಿಕೆಯ ಗಂಟೆ ಬಾರಿಸಿದ್ದಾರೆ. ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ನಡುಕ ಹುಟ್ಟಿಸಿದ್ದಾರೆ.

ವರದಿ : ರಾಜಶೇಖರಮೂರ್ತಿ

ಚುನಾವಣೆ ನಂತರದ ಚತ್ತೀಸ್ ಘಡದ ಹಿಂದಿನ ಮುಖ್ಯಮಂತ್ರಿ ಅಜಿತ್ ಜೋಗಿಯವರು ತೊಡಗಿಕೊಂಡಿದ್ದ ಕೆಲಸವನ್ನು ಎಲ್ಲಾ ಪ್ರಜಾಪ್ರಭುತ್ವ ಜನತೆಯೂ ವಿರೋಧಿಸಬೇಕಾಗಿದೆ. ಜನತೆ ನೀಡಿದ ತೀರ್ಪಿಗೆ ಮಣಿದು ಸೋಲನ್ನು ಒಪ್ಪಿಕೊಳ್ಳುವ ಬದಲು ಬಿಜೆಪಿ ಶಾಸಕರುಗಳಿಗೆ ಲಂಚದ ಆಮಿಷ ಒಡ್ಡಿ ಬದಲಿ ಸರ್ಕಾರ ರಚಿಸಲು ಮುಂದೆ ಬಂದುದು ಜೋಗಿ ವಿರುದ್ಧ ಕಾಂಗ್ರೆಸ್ ಪಕ್ಷ ತೆಗೆದುಕೊಂಡ ತೀರ್ಮಾನ ಸರಿಯಾಗಿಯೇ ಇದೆ.



ಈ ಘಟನೆಯ ವಿರುದ್ಧ ಬಿಜೆಪಿಯು ನಡೆಸಿದ ಉನ್ನತ ಪ್ರಚಾರ ತಂತ್ರವು ಹಾಗೂ ಸಿಬಿಐನ ಬಿರುಸಾದ ಕಾರ್ಯಾಚರಣೆಯನ್ನು ನೋಡಿದರೆ ಈ ಸಂಘಟನೆಗಳು ಪ್ರಧಾನಮಂತ್ರಿಗಳ ಹಾಗೂ ಕೇಂದ್ರ ಗೃಹ ಮಂತ್ರಿಗಳ ಕೈಗೊಂಬೆಗಳಾಗಿರುವುದರಲ್ಲಿ ಅನುಮಾನವಿಲ್ಲ. ತೆಹಲ್ಕಾ ಲಂಚದ ಪ್ರಕರಣದಲ್ಲಾಗಲೀ, ಜುದೇವ್ ಪ್ರಕರಣದಲ್ಲಾಗಲೀ ಕಂತೆ ಕಂತೆ ಹಣ ಸ್ವೀಕರಿಸಿದ ಎನ್‌ಡಿಎ ನಾಯಕರ ವಿರುದ್ಧ ಇಲ್ಲಿಯವರೆಗೂ ಯಾವುದೇ ಚಕಾರವೆತ್ತಿಲ್ಲ. ಈ ಪ್ರಕರಣಗಳಲ್ಲಿ ಮುಖ್ಯವಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ಈ ಲಂಚ ಪ್ರಕರಣವನ್ನು ಬಯಲಿಗೆಳೆದವರ ವಿರುದ್ಧ ಕಾರ್ಯಾಚರಣೆ ನಡೆದು ಈ ಸಂಸ್ಥೆಗಳಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ಕಿರುಕುಳ ನೀಡಿ ಅವರ ವಿರುದ್ಧ ಪೊಲೀಸ್ ಕೇಸುಗಳನ್ನು ದಾಖಲಿಸಿದ್ದಾರೆ. ಈ ಕಾರ್ಯಾಚರಣೆಗಳು ಇಡೀ ಸಮಾಜದ ವಾಕ್ ಸ್ವಾತಂತ್ರ್ಯದ ವಿರುದ್ಧ, ಮಾಹಿತಿ ಪಡೆಯುವ ಹಕ್ಕಿನ ವಿರುದ್ಧ ನಡೆದ ಕಾರ್ಯಾಚರಣೆಯಾಗಿದೆ. ಈ ಘಟನೆಗಳಿಂದಾಗಿ ಇಲ್ಲಿಯವರೆಗಿನ ಪತ್ರಿಕೋದ್ಯಮದ ಪರಮ ಪವಿತ್ರವಾದ ಗುಟ್ಟನ್ನು ಕಾಯ್ದಿರಿಸುವ ಹಕ್ಕನ್ನು ತಿರುಚಿದಂತಾಗಿದೆ.


ಅಜಿತ್‌ಜೋಗಿ ಪ್ರಕರಣ

ಬಿಜೆಪಿ ಕೇಂದ್ರಮಂತ್ರಿ ಜುದೇವ್‌ರವರು ಭ್ರಷ್ಟ ಹಗರಣವನ್ನು ಮುಚ್ಚಿಹಾಕಲು ಸಾಕಷ್ಟು ಕಸರತ್ತು ನಡೆಸಿರುವ ಕೇಂದ್ರ ಸರ್ಕಾರ, ಅಜಿತ್ ಜೋಗಿ ವಿಷಯದಲ್ಲಿ ಅತ್ಯುತ್ಸಾಹದಲ್ಲಿರುವುದೇಕೆ? ಅದರ ದ್ವಂದ್ವ ನಿಲುವು ಪ್ರಶ್ನಾರ್ಹ. ಭಾರಿ ನೈತಿಕತೆಯ ಬಗ್ಗೆ ಬೊಗಳೆಹೊಡೆಯುವ ಬಿಜೆಪಿಯ ಇತಿಹಾಸವಾದರೂ ಎಂತಹದ್ದೂ?

ಇದೇ ರೀತಿ ಜುದೇವ್ ಪ್ರಕರಣದಲ್ಲಿ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದವರು ಯಾರು, ಹೇಗೆ ಈ ಕಾರ್ಯಾಚರಣೆ ನಡೆಯಿತು ಎನ್ನುವುದರ ಬಗ್ಗೆ ತನಿಖೆ ನಡೆಸುವುದು ಹಾಗೂ ಇಂತಹ ಕಾರ್ಯಾಚರಣೆಗಳ ವಿರುದ್ಧ ಕೇಂದ್ರ ಗೃಹಮಂತ್ರಿಗಳೇ ಕೂಗು ಹಾಕುವುದು.

ನೈತಿಕ ಅಧಃಪತನ

ಸರ್ಕಾರಗಳ ರಚನೆಯಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಲಂಚದ ಆಮಿಷ ಒಡ್ಡಿ ಅವರನ್ನು ಕೊಂಡುಕೊಳ್ಳುವುದು ಇತ್ತೀಚಿನ ದಿನಗಳಲ್ಲಿ ಆಳುವವರ್ಗಗಳ ರಾಜಕೀಯ ಪಕ್ಷಗಳಿಗೆ ರೂಢಿಯಾಗಿಬಿಟ್ಟಿದೆ. ಈ ಪರಿಪಾಠದಲ್ಲಿ ತೊಡಗಿರುವ ಪಕ್ಷಗಳನ್ನು ನೈತಿಕ ಅಧಃಪತನದ ಪಕ್ಷಗಳೆಂದು ಪರಿಗಣಿಸಬಹುದೆ? ಬಿಜೆಪಿ ಪಕ್ಷವು ಹಲವಾರು ರಾಜ್ಯಗಳಲ್ಲಿ ಸರ್ಕಾರಗಳನ್ನು ರಚಿಸುವಾಗ ಇದೇ ಮಾದರಿಯನ್ನು ಅನುಸರಿಸುತ್ತಿರುವಾಗಲೇ ಅದೇ ಪಕ್ಷವು ಉತ್ತಮ ನೈತಿಕ ಮಟ್ಟಗಳನ್ನು ಎತ್ತಿ ಹಿಡಿಯುತ್ತೇವೆ ಎನ್ನುವುದು ದ್ವಂದ್ವವಲ್ಲವೇ? ಇದೇ ಬಿಜೆಪಿ ಪಕ್ಷವು ಬಿಎಸ್‌ಪಿ, ಕಾಂಗ್ರೆಸ್, ಲೋಕದಳ, ಜನತಾಪಕ್ಷದಿಂದ ಪಕ್ಷಾಂತರ ಮಾಡಿದ ಎಲ್ಲಾ ಸದಸ್ಯರಿಗೂ ಮಂತ್ರಿಸ್ಥಾನಗಳನ್ನು ನೀಡಿ ಕಲ್ಯಾಣ್ ಸಿಂಗ್‌ರ ಬಿಜೆಪಿ ಸರ್ಕಾರ ಮುಂದುವರಿದುದನ್ನು ಸ್ಮರಿಸಬಹುದು.



ಬಿಜೆಪಿ ದ್ವಂದ್ವ ನಿಲುವಿನ ಅರ್ಥವೇನು?

ಖೋಟಾ ದೇಶಪ್ರೇಮಿಗಳು

ಪುಟ 3 ರಿಂದ

ಹೊರಹಾಕಿದ್ದಾರೆ. ಇರಲಿ ಖೋಟಾ ದೇಶಪ್ರೇಮಿಗಳಿಂದ ಪ್ರಮಾಣದ ಅಗತ್ಯವಿಲ್ಲ ನಿಜ. ಆದರೆ ಅದರ ಸ್ವಯಂಗುತ್ತಿಗೆ ಹಿಡಿದು ಬಿಟ್ಟಿದ್ದಾರೆ.

ಈ ಚೆಡ್ಡಿ ಚತುರ ನಾಯಕರಿಗೆ ದೇಶಪ್ರೇಮವೆಂದರೆ ಏನೆಂದು ಗೊತ್ತೆ? ಇವರ ವ್ಯಾಖ್ಯಾನವೇ ವಿಚಿತ್ರ. 1942 ರಲ್ಲಿ ಬ್ರಿಟೀಷರ ವಿರುದ್ಧ ಹೋರಾಡಿದ ಯುವಕರ ವಿರುದ್ಧ ಸಾಕ್ಷಿ [illegible] ಶಿಕ್ಷೆ ಕೊಡಿಸಿದ ವಾಜಪೇಯಿಯವರದು ದೇಶಪ್ರೇಮ! ಸ್ವಾತಂತ್ರ್ಯ ಚಳುವಳಿ ಉದ್ದಕ್ಕೂ ಬ್ರಿಟೀಷರ ವಿರುದ್ಧ ಹೋರಾಡದೆ ಅವರ ಒಡೆದಾಳುವ ನೀತಿಯ ಜಾರಿಗೆ ಹಿಂದೂ-ಮುಸ್ಲಿಂ ಘರ್ಷಣೆ ಹುಟ್ಟು ಹಾಕಿ, ಎರಡು ದೇಶಗಳ ಸಿದ್ಧಾಂತ ಪ್ರತಿಪಾದಿಸಿ ಕೆಲಸ ಮಾಡಿದ್ದು ದೇಶಪ್ರೇಮ! ಹೋಗಲಿ ಬಹುಮತವಿಲ್ಲದಿದ್ದರೂ ಅಧಿಕಾರಕ್ಕೇರಿದ 13 ದಿನಗಳಲ್ಲಿ ಕೊನೆ ಕ್ಷಣದಲ್ಲಿಯೇ ಅಮೆರಿಕಾದ ಎನ್ರಾನ್ ಕಂಪನಿಗೆ ದೇಶದ ಜನರನ್ನು ಲೂಟಿ ಮಾಡಲು ಮುಕ್ತ ಪರವಾನಗಿ ಕೊಟ್ಟಿದ್ದು ದೇಶಪ್ರೇಮ!

ದೇಶದ ರಕ್ಷಣೆ ಬಗ್ಗೆ ಇಷ್ಟೊಂದು ಬೊಬ್ಬೆ ಹೊಡೆವ ಈ ಭೂಪರು ರಕ್ಷಣಾ ಸಾಮಗ್ರಿ ಖರೀದಿಯಲ್ಲೇ ಸಾವಿರಾರು ಕೋಟಿ ನೆಕ್ಕಿ, ಸಿಕ್ಕಿಬಿದ್ದ ತೆಹಲ್ಕಾ ಹಗರಣ. ದೇಶಪ್ರೇಮದ ಪ್ರತೀಕ!. ಕಾರ್ಗಿಲ್ ಯುದ್ಧದಲ್ಲಿ ಮಡಿದ ಯೋಧರ ಶವಪೆಟ್ಟಿಗೆಯಲ್ಲೇ ಕೋಟ್ಯಾಂತರ ಹಣ ನುಂಗಿದ್ದ ಅಪ್ರತಿಮ ದೇಶಪ್ರೇಮ! ಇನ್ನು ಕೈಗಾರಿಕೆ, ಕೃಷಿ, ದೇಶದ ತೈಲ, ಗಣಿಗಳ ವಿದೇಶಿ ಕಂಪನಿಗಳಿಗೆ ಮಾರಾಟ... ಅಮೆರಿಕಾಕ್ಕೆ ಅಡಿಯಾಳಾದ ಪ್ರತಿದಿನದ ವಿದ್ಯಮಾನಗಳು. ಬಿಜೆಪಿ - ಸಂಘ ಪರಿವಾರದ ದೇಶಪ್ರೇಮಕ್ಕೆ ಉಜ್ವಲ ಸಾಕ್ಷಿಗಳು!. ಇಂತಹ ದೇಶದ್ರೋಹಿಗಳು ನಾಡಿನ ಪರವಾಗಿ ಹೋರಾಡುವ ಪ್ರಗತಿಪರರನ್ನು ಟೀಕಿಸಲು ಎಂತಹ ಭಂಡತನ! ಸಂಸದೀಯ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಭಿನ್ನಾಭಿಪ್ರಾಯವಿದ್ದರೆ ಹೇಳಬೇಕು ಬದಲಾಗಿ ಬೆದರಿಕೆ ಹಾಕುವುದು (ಜ್ಞಾನಪೀಠ ಪ್ರಶಸ್ತಿ ಹಿಂತೆಗೆತವಂತೆ) ಫ್ಯಾಸಿಸ್ಟ್ ಮನೋಭಾವದ ಪ್ರತೀಕ. ಕೋಮುವಾದಿಗಳ ಹುನ್ನಾರಗಳ ವಿರುದ್ಧ ಬಿಲ್ಲದ ಹೋರಾಟ ನಡೆಸಲು ಕಾರ್ನಾಡ್ ಒಳಗೊಂಡು ಎಲ್ಲಾ ಪ್ರಗತಿಪರರೆಲ್ಲಾ ನಿರ್ಧರಿಸಿದ್ದಾರೆ, ಅಂತಹ ಶಕ್ತಿಗಳನ್ನು ಜನ ಹೆಚ್ಚು ಹೆಚ್ಚು ಅರಿಯಬೇಕಿದೆ.

ತಸ್ಲೀಮಾ ನಸ್ರಿನ್ ಪುಸ್ತಕ 'ಬ್ಯಾನ್' ಮಾಡಿದುದೇಕೆ?

ಬಾಂಗ್ಲಾದೇಶದ ಲೇಖಕಿ ತಸ್ಲಿಮಾ ನಸ್ರೀನ್ ಅವರ ಇತ್ತೀಚಿನ ಪುಸ್ತಕ 'ದ್ವಿಕಾಂಡಿತಾ' (ಎರಡು ಹೋಳು) ವನ್ನು ಪಶ್ಚಿಮ ಬಂಗಾಳದ ಎಡರಂಗ ಸರ್ಕಾರವು 'ಈ ಪುಸ್ತಕವು ಕೋಮು ಘರ್ಷಣೆಗೆ ಎಡೆ ಮಾಡಬಹುದು' ಎಂದು 'ಬ್ಯಾನ್' ಮಾಡಲು ನಿರ್ಧರಿಸಿದ್ದು, ಇದಕ್ಕೆ ಯಾವುದೇ ರಾಜಕೀಯ ಅಥವಾ ಸಾಹಿತ್ಯಿಕ ಕಾರಣಗಳಿಲ್ಲ ಎಂದು ಸ್ಪಷ್ಟಪಡಿಸಿದೆ.



ನವೆಂಬರ್ 28 ರಂದು ಹೊರಡಿಸಿದ ಸರ್ಕಾರಿ ಆಜ್ಞಾ ಪತ್ರದಲ್ಲಿ ಅಪರಾಧ ಸಂಹಿತೆ ಕಲಂ 95 ರ ಪ್ರಕಾರ ಹಾಗೂ ಇಂಡಿಯನ್ ಪಿನಲ್ ಕೋಡ್‌ನ 153ನೇ ಭಾಗದ ಅಡಿಯಲ್ಲಿ ಈ ಕ್ರಮವನ್ನು ಕೈಗೊಂಡಿದೆ(ವಿವಿಧ ಕೋಮುಗಳ ನಡುವೆ ವೈರತ್ವ, ಸ್ಪರ್ಧೆ, ದ್ವೇಷವನ್ನುಂಟು ಮಾಡುವವರನ್ನು ಶಿಕ್ಷಿಸುವುದು ಇತ್ಯಾದಿ)

ಎಡರಂಗ ಸರ್ಕಾರದ ಈ ನಿರ್ಧಾರವನ್ನು ಹಲವಾರು ಸಾಹಿತಿಗಳು, ರಾಜಕೀಯ ಮುಖಂಡರು ಸಮರ್ಥಿಸಿದ್ದಾರೆ. ಹೆಸರಾಂತ ಕಾದಂಬರಿಕಾರ ಸುನೀಲ್ ಗಂಗೋಪಾಧ್ಯಾಯ, ದಿಬ್ಯೆಂದು ಪಾಲಿತ್, ನಬನೀತ್ ದೇಬ್‌ಸೇನ್, ಸಯ್ಯದ್ ಮುಸ್ತಫಾ ಸಿರಾಜ್, ಬಾಂಗ್ಲಾದೇಶದ ಕಾದಂಬರಿಕಾರ ಸ್ಯಾಮ್ಸ್ ಉಲ್ ಹಕ್, ಗಾಯಕ ಸುಮನ್ ಚಟರ್ಜಿ, ತೃಣಮೂಲ ಕಾಂಗ್ರೆಸ್ ಮುಖಂಡ ಮತ್ತು ಕಲ್ಕತ್ತ ಮೇಯರ್ ಸುಬ್ರತ್ ಮುಖರ್ಜಿ ಮತ್ತಿತರರು ನಸ್ರೀನ್ ಅವರ ಪುಸ್ತಕದಲ್ಲಿರುವ ಹಲವಾರು ಅಂಶಗಳು ಕೋಮುಘರ್ಷಣೆಗೆ ಎಡೆ ಮಾಡಿಕೊಡುತ್ತವೆ ಎಂದು ಬಣ್ಣಿಸಿದ್ದಾರೆ.

ಪ.ಬಂಗಾಳದ ಕಾಂಗ್ರೆಸ್ಸಿನ ಮುಖಂಡ ಸೋಮನ್ ಮಿತ್ರ, ತಸ್ಲೀಮಾ ನಸ್ರೀನ್ ಅವರನ್ನು 'ಜಗತ್ತಿನ ಮಹಿಳೆಯರಿಗೊಂದು ಕಳಂಕ' ಎಂದು ಬಣ್ಣಿಸಿದ್ದಾರೆ. 'ನಸ್ರೀನ್ ಅವರು ಬರೆದ 'ದ್ವಿಕಾಂಡಿತಾ' ಯಾವುದೇ ಅಶ್ಲೀಲ ಪುಸ್ತಕಕ್ಕಿಂತ ಭಿನ್ನವಾಗಿಲ್ಲ ಹಾಗೂ ಧಾರ್ಮಿಕ ಸಮುದಾಯದ ಭಾವನೆಗಳಿಗೆ ಧಕ್ಕೆ ಉಂಟುಮಾಡುವ ಹಕ್ಕನ್ನು ಪಡೆದುಕೊಳ್ಳುವುದು ಯಾರಿಗೂ ತಕ್ಕುದಲ್ಲ' ಎಂದು ಹೇಳಿದ್ದಾರೆ.


ಈ ಕುರಿತು ಮಾತನಾಡಿದ ಸಿಪಿಐ(ಎಂ) ನ ಪ.ಬಂಗಾಳ ರಾಜ್ಯ ಕಾರ್ಯದರ್ಶಿ ಅನಿಲ್ ಬಿಸ್ವಾಸ್ 'ಎಡರಂಗ ಸರ್ಕಾರವು ಅಧಿಕಾರಕ್ಕೆ ಬಂದ ನಂತರದಲ್ಲಿ ರಾಜಕೀಯ ಕಾರಣಗಳಿಗಾಗಿ ಯಾವುದೇ ಪುಸ್ತಕವನ್ನು ರದ್ದು ಮಾಡಿರಲಿಲ್ಲ. ಆದರೆ ಈ ಪುಸ್ತಕವು ಕೋಮುವಿರಸಕ್ಕೆ ಕಾರಣವಾಗುತ್ತದೆ ಎಂದು ಅನೇಕ ತಜ್ಞರು ಹೇಳಿದ್ದಾರೆ. ಪ.ಬಂಗಾಳದಲ್ಲಿ ಪ್ರಜಾಪ್ರಭುತ್ವ ಕಾಪಾಡಲು ಈ ಪುಸ್ತಕವನ್ನು ರದ್ದು ಮಾಡುವುದು ಅಗತ್ಯವಿತ್ತು. ಹಲವಾರು ಪತ್ರಿಕೆಗಳು ಅಂತಹುದೇ ಅಭಿಪ್ರಾಯವನ್ನ ವ್ಯಕ್ತಪಡಿಸಿವೆ' ಎಂದು ಹೇಳಿದ್ದಾರೆ.

ಮುಖ್ಯಮಂತ್ರಿ ಹೇಳಿಕೆ: ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯರವರು ಈ ಕುರಿತು ಪ್ರತಿಕ್ರಿಯಿಸುತ್ತಾ 'ಹಲವಾರು ಬಾರಿ ಈ ಪುಸ್ತಕವನ್ನು ನಾನು ಓದಿದೆ. ಅಲ್ಲದೆ ಕನಿಷ್ಟ 25 ಜನ ತಜ್ಞರನ್ನು ಸಂಪರ್ಕಿಸಿ ವಿಮರ್ಶಾತ್ಮಕ ಟಿಪ್ಪಣಿ ನೀಡಲು ತಿಳಿಸಿದೆ. 'ಸಾರ್ವಜನಿಕರು ಈ ಪುಸ್ತಕವನ್ನು ಓದುವುದು ತರವಲ್ಲ. ಅದರಲ್ಲೂ ಪುಸ್ತಕದ 49 ಮತ್ತು 50ನೇ ಪುಟಗಳಲ್ಲಿರುವ ಅಂಶಗಳು ಇಸ್ಲಾಂ ಧರ್ಮದ ಮೂಲ ಅಂಶಗಳಿಗೆ ವಿರುದ್ಧವಾದುದು ಹಾಗೂ ಇಸ್ಲಾಂ ಧಾರ್ಮಿಕ ನಂಬುಗೆಯುವರನ್ನು ಪ್ರಚೋದಿಸುವಂತಹದ್ದು ಎಂದು ಹೇಳಿದ್ದಾರೆ. 'ಆದ್ದರಿಂದ ಆ ಪುಸ್ತಕವನ್ನು ರದ್ದುಗೊಳಿಸಬೇಕಾಯ್ತು' ಎಂದು ಬುದ್ಧದೇವ್ ಭಟ್ಟಾಚಾರ್ಯ ತಿಳಿಸಿದ್ದಾರೆ.

ತಸ್ಲಿಮಾ ನಸ್ರೀನ್ ಅವರ ಹಲವು ಸಂಪುಟಗಳ ಜೀವನ ಚರಿತ್ರೆಯ ಭಾಗವಾಗಿರುವ ಈ ಪುಸ್ತಕವು ಬಂಗಾಳ ಮತ್ತು ಬಾಂಗ್ಲಾದೇಶದ ಹಲವಾರು ವಿದ್ವಾಂಸರ ಕುರಿತು ತೀರಾ ವೈಯಕ್ತಿಕವಾದ ಸುಳ್ಳು ಆಪಾದನೆಗಳನ್ನು ಮಾಡಿದೆ. ಇವೆಲ್ಲಕ್ಕೂ ಮಿಗಿಲಾಗಿ ಧಾರ್ಮಿಕ ಸಾಮರಸ್ಯವನ್ನು ಕೆಡಿಸುವ ಈ ಪುಸ್ತಕವನ್ನು ಮೂಲಭೂತವಾದಿಗಳು ಬಳಸಿಕೊಳ್ಳುವ ಸಾಧ್ಯತೆ ಇರುವುದರಿಂದ ಅದನ್ನು ಬ್ಯಾನ್ ಮಾಡಲಾಗಿದೆ.

ಆದರೆ ಇಸ್ಲಾಂ ಧರ್ಮದ ಕುರಿತು ಕೀಳಾಗಿ ಬರೆದಿರುವ ತಸ್ಲಿಮಾ ಅವರನ್ನು ಬಿಜೆಪಿ ಮುಖಂಡ ತಥಗತಾರ್ಯೊ ಬೆಂಬಲಿಸಿದ್ದಾರೆ. ಯಾಕೋ ಏನೋ? ಮಣಗಟ್ಟಲೆ ಮಾತನಾಡುವ ಮಮತಾ ಬ್ಯಾನರ್ಜಿ ಪೂರ್ಣ ಮೌನಿಯಾಗಿದ್ದಾರೆ!

ಕಾಲುವೆಗಳನ್ನು ಕೊನೆ ಮುಟ್ಟಿಸದೆ ಹೊಲಗಳ ಮಧ್ಯದಲ್ಲಿ ಬಿಡಲಾಗಿದೆ. ಸಂಬಂಧಿಸಿದ ಜೆ.ಇ.ಗಳೊಬ್ಬರು ಬಂದು ವೀಕ್ಷಿಸುವುದಿಲ್ಲ. ಬದಲು ಸ್ಥಳೀಯ ಪುಡಾರಿಗಳಿಗೆ ಕೆಲಸ ಕೊಟ್ಟಿರುವುದರಿಂದ ಪುಡಾರಿಗಳು ಅವೈಜ್ಞಾನಿಕವಾಗಿ ಕಾಲುವೆಗಳನ್ನು ನಿರ್ಮಿಸಿರುವುದರಿಂದ ನೀರು ಹರಿವ ಬದಲು ಹಿಂದಕ್ಕೆ ಹೋಗುವುದೆ ಹೆಚ್ಚು. ಶೇ. 50 ರಷ್ಟು ಹೊಲಗಾಲುವೆ ಗಳು ನೀರು ಹರಿಸಲು ಅಯೋಗ್ಯವಾಗಿವೆ ಯೆಂದರೆ ಈ ಕರ್ಮ ಕಾಂಡದ ವ್ಯಾಪ್ತಿ ಎಷ್ಟೆಂಬುದನ್ನು ಅರ್ಥ ಮಾಡಿಕೊಳ್ಳ ಬಹುದು. ಅಲ್ಲದೆ ಕೆಲಸಗಳು ಅರ್ಧಂಬರ್ಧವಾಗಿ ನಿಂತಿವೆ. ಈ ಬಗ್ಗೆ ಒಂದು ವರದಿ.



ಮಳೆ ನೀರಿಗೆ ಒಡೆದು ಕಾಮಗಾರಿ ದುಸ್ಥಿತಿ ತೋರಿದ ಕಾಲುವೆ


ನಾರಾಯಣಪುರ ಬಲದಂಡೆ ಕಾಲುವೆ

ಭ್ರಷ್ಟರಿಗೆ ಅಮೃತ-ರೈತರಿಗೆ ವಿಷ

"ನೀರಾವರಿ ಯೋಜನೆಗಳು ದೇಶದ ಆಧುನಿಕ ದೇವಾಲಯಗಳು" ಎಂದು ಕರೆದರು ದೇಶದ ಪ್ರಥಮ ಪ್ರಧಾನಿ ಜವಾಹರಲಾಲ ನೆಹರೂರವರು. ಏಷ್ಯಾಖಂಡದಲ್ಲೆ ಅತಿದೊಡ್ಡ ಯೋಜನೆಯೆಂದು ಕರೆಯಿಸಿಕೊಂಡ "ಭಾಕ್ರ-ನಂಗಲ್" ಯೋಜನೆಯನ್ನು ಆರಂಭಿಸಿ ಇಡೀ ಉತ್ತರ ಭಾರತ ಸಮೃದ್ಧಿ ಗೊಳಿಸಿದರು. ಜತೆಗೆ ಭಾಕ್ರಾನಂಗಲ್‌ನಂತಹ ಹತ್ತಾರು ಯೋಜನೆಗಳನ್ನು ಆರಂಭಿಸಿದರು.

ಇಂತಹ ದೇಶದಲ್ಲಿ ಅತ್ಯಂತ ಹಿಂದುಳಿದ ಜಿಲ್ಲೆಯೆಂದು ಹೆಸರಾದ ರಾಯಚೂರು ಜಿಲ್ಲೆಗೆ ತುಂಗ-ಕೃಷ್ಣೆಯರು "ಕಾಮಧೇನು"ವಾಗಿದ್ದಾರೆ. ಇಲ್ಲಿಯ ಕಪ್ಪು ಮಣ್ಣು ಫಲವತ್ತತೆಗೆ ಹೆಸರಾದದು. ಹಿಂಗಾರು ಬಿತ್ತುವ ಸಂದರ್ಭದಲ್ಲಿ ಹಸಿಯಾಗುವಂತಹ ಒಂದು ಮಳೆಬಂದರೆ ಸಾಕು ಸಮೃದ್ಧವಾಗಿ ಬೆಳೆ ಬಂದ ಉದಾಹರಣೆಗಳಿವೆ. ಆದರೆ ಇತ್ತೀಚಿನ ಕೆಲವು ವರ್ಷಗಳಿಂದ ಮಳೆ ಕಡಿಮೆಯಾಗಿ ತುತ್ತು ಅನ್ನಕ್ಕಾಗಿ ಬೆಂಗಳೂರು, ಪುಣೆ, ಬಾಂಬೆಗಳಿಗೆ ಹತ್ತಾರು ಸಾವಿರ ಸಂಖ್ಯೆಯಲ್ಲಿ ವಲಸೆ ಹೋಗಿರುವುದನ್ನು ಪ್ರತಿ ಪ್ರದೇಶದಲ್ಲಿ ಕಾಣುತ್ತೇವೆ.

ತುಂಗಭದ್ರಾ ಎಡದಂಡೆ ಕಾಲುವೆ ಮೂಲಕ ಹರಿದುಬಂದ ನೀರಿನಿಂದ ಜಿಲ್ಲೆಯ ಸಿಂಧನೂರು, ಮಾನವಿ, ರಾಯಚೂರು ತಾಲೂಕಿನ ಕೆಲವು ಪ್ರದೇಶಗಳಿಗೆ ಸಮೃದ್ಧಿಯ ಕಳೆ ಬಂದಿತ್ತು. ಆದರೆ ನಿರಂತರ ಒಡೆಯುತ್ತಿರುವ ಮುಖ್ಯ ಕಾಲುವೆ ಯಿಂದಾಗಿ ಬದಕು ಅತಂತ್ರ ಸ್ಥಿತಿಗೆ ಮುಟ್ಟಿದೆ.



ಪರಿಣಾಮ ರೈತ ಆತ್ಮಹತ್ಯೆ ಮಾರ್ಗ ಕಂಡುಕೊಂಡಿದ್ದಾನೆ.

ನಿರಂತರ ಬರಕ್ಕೆ ಹೆಸರುವಾಸಿಯಾದ ದೇವದುರ್ಗ ಮತ್ತು ಲಿಂಗಸೂಗೂರು ತಾಲೂಕುಗಳ ಜನತೆ ಒಂದು ರೀತಿಯಲ್ಲಿ ಬರಕ್ಕೆ ಹೊಂದಿಕೊಂಡಿದ್ದಾರೆನ್ನಬಹುದು. ಮಳೆ ಬಾರದೆ ಹೋದಾಗಲೆಲ್ಲಾ,

ಒಕ್ಕಲಗೇರ್‍ಯಾಗ ಮಳೆರಾಯ,
ಮಕ್ಕಳ ಮಾರ್‍ಯಾರೋ ಮಳೆರಾಯ,
ಗಂಡುಳ್ಳ ಬಾಲ್ಯಾರು ಭಿಕ್ಷಕ್ಕ ಹೋದರು
ಅನ್ಯಾಯದ ದಿನಬಂತು ಮಳೆರಾಯ!

ಎಂಬ ಜಾನಪದ ಹಾಡಿಗೆ ದನಿಗೂಡಿಸುತ್ತಲೆ ನೋವಿನಿಂದ ದಿನ ಕಳೆದರು. ಈ ಜನತೆಗೆ ನಾರಾಯಣಪುರ ಬಲದಂಡೆ' ಕಾಲುವೆ ಬರುವುದೆಂದಾಗ ಮರುಭೂಮಿಯಲ್ಲಿ ಓಯಸಿಸ್ ನೀರು ಉಕ್ಕುವುದು ಕಂಡಂತಾಗಿ ಜನ ಸಂಭ್ರಮಿಸಿದರು.

ಐತಿಹಾಸಿಕ ಹೋರಾಟ

ಹೋರಾಟಗಾರರ ಕಾಲುವೆಯೆಂದೇ ಹೆಸರಾದ ನಾರಾಯಣಪುರ ಬಲದಂಡೆ ಕಾಲುವೆ ನಿರ್ಮಾಣದ ಹಿಂದಿನ ಕಥೆಯೇ ಒಂದು ರೋಚಕವಾಗಿದೆಯೆನ್ನಬಹುದು. ಕೃಷ್ಣಾ ಕಣಿವೆಯ ಮೊದಲ ಹಂತದಲ್ಲೇ ನಾ.ಬ. ಕಾಲುವೆ ನಿರ್ಮಾಣವಾಗಿ ಈ ಬರದ ನಾಡನ್ನು ಕೆಲವು ದಶಕಗಳ ಹಿಂದೆ ಹಸುರಿನಿಂದ ಕಂಗೊಳಿಸುವಂತೆ ಮಾಡಬಹುದಿತ್ತು. ಆದರೆ ಜಿಲ್ಲೆಯ ನರಸತ್ತ, ನಿಷ್ಕ್ರಿಯ ರಾಜಕಾರಣಿಗಳಿಂದಾಗಿ ನಿರ್ಮಾಣ ಯೋಜನೆ ನನೆಗುದಿಗೆ ಬಿದ್ದಿತ್ತು.

1983ರಲ್ಲಿ ಆರಂಭಗೊಳ್ಳಬೇಕಿದ್ದ ಕಾಲುವೆ ಆರಂಭವನ್ನೆ ಕಾಣದಾದಾಗ ಕರ್ನಾಟಕ ಪ್ರಾಂತ ರೈತ ಸಂಘ 1985 ರಿಂದ 1993ರವರೆಗೆ ನಿರಂತರ ಹೋರಾಟ ನಡೆಸಿ ಈ ಕಾಲುವೆ ಈ ಭಾಗದ 'ಪ್ರಮುಖ ಆದ್ಯತೆ' ಎಂದು ಎಲ್ಲರೂ ಮನಗಾಣುವಂತೆ ಮಾಡಿತು. ರೈತರ ಆತಂಕ ಅರ್ಥಮಾಡಿಕೊಂಡ ಎಲ್ಲಾ ಪಕ್ಷಗಳು ಮುಖಂಡರು 10-4-1993ರಂದು ದೇವದುರ್ಗ ದಲ್ಲಿ ರೈತರೊಂದಿಗೆ ಸೇರಿ ಹೋರಾಟ ಸಮಿತಿ ರಚಿಸಿಕೊಂಡರು. ನಂತರ ಹತ್ತಾರು ಸಾರಿ ಸಾವಿರ ಸಾವಿರಗಟ್ಟಲೆ ರೈತರು ಬೀದಿಗಿಳಿದು ಹೋರಾಡಿದ್ದರಿಂದಲೇ ಕಾಲುವೆ ನಿರ್ಮಾಣ ಸಾಧ್ಯವಾಯಿತು. ಬಹುಶಃ ಕರ್ನಾಟಕ ರೈತರ ಹೋರಾಟದಿಂದಲೇ ಮಂಜೂರಾದ ಕಾಲುವೆ ಇದೊಂದೇ ಆಗಿರಬಹುದಾದ್ದ ಕಾರಣ ಇದೊಂದು ಐತಿಹಾಸಿಕ ಪ್ರಸಂಗವೆನ್ನಬಹುದು.

ಕಹಿ ಪ್ರಸಂಗಗಳು

ಈ ಜನಪರ ಹೋರಾಟಕ್ಕೂ ದ್ರೋಹ ಬಗೆದವರಿದ್ದಾರೆ. 'ಅಧಿಕಾರದಲ್ಲಿರುವೆ, ಹೋರಾಟಕ್ಕೆ ಬರಲಾರೆ' ಎಂದ, ಅಂದು - ಇಂದು ಕೂಡ ಎಂ.ಪಿ. ಯಾಗಿರುವ ವೆಂಕಟೇಶ ನಾಯಕರು, ಐದಾರು ಸಾವಿರ ಎಕರೆಗೆ ಸೀಮಿತಗೊಳಿಸಿ "ಬೇಬಿ ಕೆನಾಲ್" ಮಾಡಿದ, ಅಂದು-ಇಂದು ಸಹ ಮಂತ್ರಿಯಾಗಿರುವ ಅಮರೇಶನಾಯಕರು ಮತ್ತು 10-4-93ರ ರೈತರ ಸಮಾವೇಶಕ್ಕೆ ಹೆಗಡೆಯವರನ್ನು ಬರದಂತೆ ತಡೆದ ಎಂ.ಎಸ್. ಪಾಟೀಲರು - ಇವರುಗಳನ್ನು ರೈತಾಪಿ

ಮಲ್ಲಯ್ಯ ಜಾಲಹಳ್ಳಿ

ಜನತೆ ಹೇಗೆ ಮರೆಯಲು ಸಾಧ್ಯ.

ಲೂಟಿಕೋರರ ಕೇಕಾದ ಕಾಲುವೆ

ಎಲ್ಲಾ ತೊಂದರೆಗಳ ನಡುವೆಯೂ 932 ಕೋಟಿ ರೂಪಾಯಿಗಳ ವೆಚ್ಚದಲ್ಲಿ, 22 ಟಿ.ಎಂ.ಸಿ. ನೀರಿನ ಮೂಲಕ 2.10 ಲಕ್ಷ ಎಕರೆಗೆ ನೀರುಣಿಸಲು 95 ಕಿ.ಮಿ. ಮುಖ್ಯ ಕಾಲುವೆ, 18 ವಿತರಣಾ ಕಾಲುವೆಗಳು, ನೂರಾರು ಉಪ ವಿತರಣಾ ಕಾಲುವೆಗಳು, ಸಾವಿರಾರು ಕಿರುಗಾಲುವೆಗಳು ಮತ್ತು ಅಸಂಖ್ಯಾತ ಹೊಲಗಾಲುವೆಗಳ ನಿರ್ಮಾಣ ಆರಂಭವಾಯಿತು. ಜತೆಗೆ ನೀರು ಸರಬರಾಜಾಗಲು, ಜನ- ಜಾನುವಾರುಗಳ ಸಂಚಾರವಾಗಲು ಹಳ್ಳ-ಕೊಳ್ಳ, ಬೆಟ್ಟ-ಗುಡ್ಡಗಳ ನೀರು ಕಾಲುವೆಗೆ ಧಕ್ಕೆ ಬಾರದಂತೆ ಸಾಗಲು ನೂರಾರು ಪ್ಯಾಸೇಜುಗಳು, ಕಲವರ್ಟಗಳು, ಅಕ್ವಡೆಕ್ವಗಳು, ಬಾಕ್ಸಗಳು, ಮೋರಿಗಳು, ಸೇತುವೆಗಳು, ಡಾಂಬರ ರಸ್ತೆಗಳು ನಿರ್ಮಾಣವಾಗ ತೊಡಗಿದವು. ಈ ಎಲ್ಲದರ ತಯಾರಿಗಳನ್ನು ನೋಡಿಯೆ ರೈತರು ಇನ್ನೇನು ತಮ್ಮ ಹೊಲಕ್ಕೆ ನೀರು ಬಂದಂತೆ, ಬೆಳೆ ಬೆಳೆದಂತೆ ಖುಷಿಪಟ್ಟರು. ಆದರೆ ತಾನೊಂದು ಬಗೆದರೆ ದೈವವೊಂದು ಬಗೆಯಿತೆಂಬಂತೆ ಲೂಟಿಕೋರರ ಆಟಕ್ಕೆ ಬಲದಂಡೆ ಬಲಿಯಾಯಿತು.

ಮುಖ್ಯ ಕಾಲುವೆಗೆ ಪ್ರಾಯೋಗಿಕವಾಗಿ 3.5 ಮೀಟರ್ ಗೇಜುಕೊಟ್ಟು ನೀರು ಹರಿಸಿದಾಗ 19ನೆ ಕಿ.ಮಿ. ನಲ್ಲಿ ಬಾರಿ ಬಿರುಕುಂಟಾಯಿತು. ಕಳಪೆ ಕಾಮಗಾರಿಯ ಫಲಶೃತಿ ಎದ್ದು ಕಾಣುತ್ತಿತ್ತು. ಬಿರುಕು ಕಂಡ ರೈತರು ಆತಂಕದಿಂದ ಬೊಬ್ಬಿಟ್ಟರು. ದೊಡ್ಡ ದೊಡ್ಡ ಅಧಿಕಾರಿಗಳು, ತಜ್ಞರು ಜನಪ್ರತಿನಿಧಿಗಳು ಭೇಟಿಕೊಟ್ಟರು. ತಪ್ಪಿತಸ್ಥರಿಗೆ ಶಿಕ್ಷಿಸುವುದಾಗಿ ಹೇಳಿಕೆ ಕೊಟ್ಟರು. ತನಿಖಾ ಸಮಿತಿಗಳನ್ನು ರಚಿಸಿದರು. ಆದರೆ ಪರಿಣಾಮ? ಘಟನೆ ನಡೆದು 3 ವರ್ಷಗಳಾಯ್ತು. ಒಬ್ಬರಿಗೂ ಸಹ ಶಿಕ್ಷೆಯಾಗಲಿಲ್ಲ. ಶಿಕ್ಷೆ ಏಕಾಗಲಿಲ್ಲವೆಂದು ಒಬ್ಬ ಜನಪ್ರತಿನಿಧಿ ಸಹ ಪ್ರಶ್ನೆ ಎತ್ತಲಿಲ್ಲ. ಯಾಕೆ ಹೀಗೆ? ಅಧಿಕಾರಿಗಳು, ಗುತ್ತಿದಾರರು, ಜನಪ್ರತಿನಿಧಿಗಳು ಒಂದಾಗಿ ಪ್ರಕರಣ ಮುಚ್ಚಿಹಾಕಿದರು. ಈ ಎಲ್ಲರ 'ಮಲೀನ ಮೈತ್ರಿ'ಗೆ ರೈತರ ಬದುಕು ಬಲಿಯಾಯಿತು. ಕೇವಲ ಮಳೆ ನೀರಿಗೇನೆ ಮುಖ್ಯ ಕಾಲುವೆಯ 65 ನೇ ಕಿ.ಮಿ ಒಡೆದುಹೋಯಿತು. ಅಂದರೆ ಕಾಲುವೆ ನಿರ್ಮಾಣ ಗುಣಮಟ್ಟ ಏನು ಎಂಬ ಪ್ರಶ್ನೆ ಕಾಡುವಂತಾಗಿದೆ.

ವಿತರಣಾ, ಉಪ ವಿತರಣಾ, ಕಿರುಗಾಲುವೆಗಳ ಲೈನಿಂಗ್ ಬಿರುಕು ಬಿಟ್ಟು ಈಗಲೋ- ಆಗಲೋ ಒಡೆದು ಹೋಗುವಂತಿವೆ. ಈಗಾಗಲೆ ಪ್ರಾಯೋಗಿಕವಾಗಿ ಬಿಟ್ಟ ನೀರಿಗೇನೆ 9,11,13ನೇ ವಿತರಣಾ ಕಾಲುವೆಗಳು ಒಡೆದು ಹೋಗಿವೆ. ಇನ್ನೂ ಕೆಲವು ಮಳೆ ನೀರಿಗೆ ಕೊಚ್ಚಿ ಹೋಗಿವೆ. ಪೈಪುಗಳು ಸೋರುತ್ತಿವೆ. ಅಕ್ವಡೆಕ್ವಗಳು, ಪ್ಯಾಸೇಜುಗಳು, ಕಲವಟಗಳು, ಸೇತುವೆಗಳು ಕುಸಿದು ಹೋಗಿವೆ. ಕೆಲವು ಅಕ್ವಡೆಕ್ವಗಳು ಬಾಕ್ಸಗಳು, ಛೇಂಬರಗಳು ಅವೈಜ್ಞಾನಿಕ ವಾಗಿ ನಿರ್ಮಿಸಿದ್ದರಿಂದ ನೀರು ಸರಬರಾಜಾಗದೆ ಅಕ್ಕ-ಪಕ್ಕದ ಹೊಲಗಳಿಗೆ ನೀರು ನುಗ್ಗಿ ಬೆಳೆಹಾಳಾಗಿವೆ. ಡ್ರಾಪಗಳು ಕುಸಿದು ಅದರ ಕಲ್ಲು - ಮಣ್ಣು ಕಾಲುವೆಯಲ್ಲಿ ಬಿದ್ದು ಕಾಲುವೆ ಗಳು ಹೂತು ಹೋಗಿವೆ. ಸೇವಾ ರಸ್ತೆಗಳಲ್ಲಿ ಗಿಡ-ಗಂಟೆಗಳು ಬೆಳೆದು ಸಂಚಾರಕ್ಕೆ ಅಯೋಗ್ಯವಾಗಿವೆ. ಇದೆಲ್ಲಾ ಗಮನಿಸಿ ಸರಿಪಡಿಸಬೇಕಾದ ಅಧಿಕಾರಿಗಳು ಬಿ. ಗುಡಿಯಲ್ಲಿ ಆರಾಮವಾಗಿದ್ದಾರೆ.

ಕಾಡಾದವರ ಕರ್ಮಕಾಂಡ

ಎಲ್ಲಾ ಹಂತದ ಕಾಲುವೆಗಳಿಂದ ಬಂದ ನೀರನ್ನು ಭೂಮಿಗೆ ಒಯ್ಯುವ ಕಾಲುವೆಗಳೆ ಹೊಲಗಾಲುವೆಗಳು. ಈ ಹೊಲಗಾಲುವೆಗಳ ನಿರ್ಮಾಣ ಜವಾಬ್ದಾರಿ ಇರುವುದು ಕಾಡಾಕ್ಕೆ. ಕಾಡಾದ ಮುಖಾಂತರ ಮಾಡಿದ ಕಾಲುವೆಗಳಲ್ಲಿ ಒಂದೂ ಕೂಡ ಸರಿಯಾಗಿಲ್ಲ. ತೆಗ್ಗು ತೋಡಿರುವಲ್ಲಿ ಒಡ್ಡೆಗಳನ್ನು ಜೋಡಿಸಿಲ್ಲ. ಬಂಡೆ ಹಾಕಿರುವಲ್ಲಿ ಸಿಮೆಂಟ್ ಮಾಡಿಲ್ಲ. ಕಾಲುವೆಗಳನ್ನು ಹಳ್ಳಿಗಳಿಗೆ ಮುಟ್ಟಿಸದೆ ಹೊಲಗಳ ಮಧ್ಯದಲ್ಲಿ ಬಿಡಲಾಗಿದೆ. ಸಂಬಂಧಿಸಿದ ಜೆ.ಇ.ಗಳೊಬ್ಬರು ಬಂದು ವೀಕ್ಷಿಸುವುದಿಲ್ಲ. ಬದಲು ಸ್ಥಳೀಯ ಪುಡಾರಿಗಳಿಗೆ ಕೆಲಸ ಕೊಟ್ಟಿರುವುದರಿಂದ ಪುಡಾರಿಗಳು ಅವೈಜ್ಞಾನಿಕವಾಗಿ ಕಾಲುವೆಗಳನ್ನು ಮಾಡಿದ್ದರಿಂದ ನೀರು ಹರಿವ ಬದಲು ಹಿಂದಕ್ಕೆ ಹೋಗುವುದೆ ಹೆಚ್ಚು. ಶೇ. 50 ರಷ್ಟು ಹೊಲಗಾಲುವೆಗಳು ನೀರು ಹರಿಸಲು ಅಯೋಗ್ಯವಾಗಿವೆಯೆಂದರೆ ಈ ಕರ್ಮ ಕಾಂಡದ ವ್ಯಾಪ್ತಿ ಎಷ್ಟೆಂಬುದನ್ನು ಅರ್ಥ ಮಾಡಿಕೊಳ್ಳಬಹುದು. ಅಲ್ಲದೆ ಕೆಲಸಗಳು ಅರ್ಧಂಬರ್ಧವಾಗಿ ನಿಂತಿವೆ. ಈ ಕಾಡಾದವರನ್ನು ಕೇಳುವವರಿಲ್ಲದೆ ತಿಂದು ಕೊಬ್ಬಿ ಹೆಗ್ಗಣಗಳಾಗಿದ್ದಾರೆ.

ಕಂಟ್ರೋಲ್ ಪಾಯಿಂಟ್

26 ಸಾವಿರ ಎಕರೆ ಲಿಂಗಸೂಗೂರ ತಾಲೂಕಿನಲ್ಲಿ ನೀರುಣಿಸಿದ ಕಾಲುವೆ, ಉಳಿದ 1.84 ಲಕ್ಷ ಎಕರೆಗೆ ನೀರುಣಿಸುವುದು ದೇವದುರ್ಗ ತಾಲೂಕಿನಲ್ಲಿ. ವಾಸ್ತವವಾಗಿ ಅಧಿಕಾರದ ಕಂಟ್ರೊಲ ಪಾಯಿಂಟ್' ಇರಬೇಕಾದುದು ದೇವದುರ್ಗದಲ್ಲಿ. ಆದರೆ ಪ್ರಸ್ತುತ 'ಕಂಟ್ರೋಲ್' ಪಾಯಿಂಟ್' ಇರುವುದು ಬಿ.ಗುಡಿ ಮತ್ತು ಕೃಷ್ಣಾಪುರಗಳಲ್ಲಿ ಇನ್ನು ಕೆಲವು ಕಛೇರಿಗಳು ಮದ್ರಿಕಿ, ದೋರನಹಳ್ಳಿ, ಕೊಳೂರುಗಳಲ್ಲಿವೆ. ಎಲ್ಲಾ ನಿರ್ವಹಣೆ ಇಲ್ಲದಂತೆ ಆಗುತ್ತಿದೆ. ದೇವದುರ್ಗ ತಾಲೂಕಿನಲ್ಲಿ ಅಲ್ಲಲ್ಲಿ ಹೆಸರಿಗೆ ಕಛೇರಿ ಆರಂಭಿಸಿದ್ದಾರೆ. ಇಲ್ಲಿ ಸಿಬ್ಬಂದಿ ಅಥವಾ ಅಧಿಕಾರಿ ಇರುವುದಿಲ್ಲ. ಬದಲು ಒಬ್ಬ ಸೇವಕ ಇರುತ್ತಾನೆ. ಸಮಸ್ಯೆ ಹೊತ್ತು ಬಂದ ರೈತನಿಗೆ ಈ ಸೇವಕನಲ್ಲಿ ಗಿಳಿಪಾಠದ ಉತ್ತರವಿರುತ್ತದೆ. 'ಸಾಹೇಬರು ಬೆಳಿಗ್ಗ ಫೋನ್ ಮಾಡಿದ್ದರು, ಫೀಲ್ಡಿಗೆ ಹೋಗಿ ಇಲ್ಲಿಗೆ ಬರ್‍ತಾರೆ' ಎಂದು. ಆದರೆ ಸೇವಕನ ಆ ಸಾಹೇಬ

ಮುಂದಿನ ಪುಟಕ್ಕೆ


ಬಾಬಾಬುಡನ್‌ಗಿರಿ ದತ್ತಪೀಠದಲ್ಲಿ ಕಾನೂನು ಬಾಹಿರವಾದ ದತ್ತ ಜಯಂತಿ ಆಚರಣೆ, ಶೋಭಾಯಾತ್ರೆಗೆ ಕೋಮುವಾದಿಗಳ ಅಟ್ಟಹಾಸಕ್ಕೆ ಮುಕ್ತ ಅವಕಾಶ ಕಲ್ಪಿಸಿಕೊಟ್ಟ ಕಾಂಗ್ರೆಸ್ ಸರ್ಕಾರ ನಾಡಿನ ಸೌಹಾರ್ದತೆ, ಶಾಂತಿ, ಸಾಮರಸ್ಯ ರಕ್ಷಿಸುವ ಪ್ರಗತಿಪರರ ಕಾರ್ಯಕ್ರಮಗಳಿಗೆ ಅವಕಾಶ ನಿರಾಕರಿಸಿದ್ದು ಮಾತ್ರವಲ್ಲ, ಸಾವಿರಾರು ಜನರನ್ನು ಬಂಧಿಸಿ ಕಾರಾಗೃಹಕ್ಕೆ ತಳ್ಳಿತು. ಈ ಮೂಲಕ ಅದರ ಜಾತ್ಯಾತೀತೆಯ ಸೋಗಲಾಡಿತನದ ಮುಖ ಬಟಬಯಲಾಯಿತು.


ಸೌಹಾರ್ದದೆಡೆಗೆ ನಮ್ಮ ನಡಿಗೆ ರ‍್ಯಾಲಿ

ಕಾಂಗ್ರೆಸ್ ಸರ್ಕಾರದ ಸೆಕ್ಯುಲರ್ ಮುಖ ಬಟಾಬಯಲು

ಬಾಬಾಬುಡನ್ ಸ್ವಾಮಿ ದತ್ತಪೀಠದಲ್ಲಿ ...ೀಮುಸಾಮರಸ್ಯದ, ಸೂಫಿಸಂತರ ...ಂಪರೆಯನ್ನು ನಾಶಗೊಳಿಸಲು ಆರ್‌ಎಸ್‌ಎಸ್ ...ಘ ಪರಿವಾರದ ಅಟ್ಟಹಾಸ ಮಿತಿಮೀರಿತ್ತು. ...ತ್ತಜಯಂತಿಯ ಧಾರ್ಮಿಕತೆ ಸೋಗಿನಲ್ಲಿ ...ಜಕೀಯ ದುರುದ್ದೇಶದ ದುಷ್ಟ ಅಜೆಂಡಾ ...ರಿಗೊಳಿಸಲು ಹಲವಾರು ಕುತಂತ್ರಗಳನ್ನು ...ಹೆದಿರುವಾಗ ಅದನ್ನು ಪ್ರತಿಭಟಿಸಿ ನಾಡಿನ ...ತಿಪರರು, ಸಾಹಿತಿಗಳು, ಸಂಘಟನೆಗಳು ತೀವ್ರ ...ರೋಧಕ್ಕೆ ಮುಂದಾದವು. ಅಲ್ಲಿನ ಪರಂಪರೆ ...ಗೂ ನ್ಯಾಯಾಲಯದ ಆದೇಶಕ್ಕೆ ವಿರುದ್ಧವಾಗಿ ...ಜಯಂತಿ ಆಚರಣೆ, ಶೋಭಾಯಾತ್ರೆ ಹಾಗೂ ...ಬಾಬುಡನ್‌ಗಿರಿಯಲ್ಲಿ 'ರಾಜಕೀಯ' ...ಮಾವೇಶ ನಡೆಸಲು ಅವಕಾಶ ಕಲ್ಪಿಸಬಾರದೆಂದು ...ಜ್ಯ ಸರ್ಕಾರವನ್ನು ಆಗ್ರಹಿಸಲಾಯಿತು. ಅಲ್ಲದೇ ...ಸೆಂಬರ್ 7 ರಂದು ಚಿಕ್ಕಮಗಳೂರಿನಲ್ಲಿ ...ಹಾರ್ದತಾ ಸಮಾವೇಶ ನಡೆಸಲು ಅವಕಾಶ ...ಡಲು ಆಡಳಿತವನ್ನು ಕೋರಲಾಗಿತ್ತು. ...ಗತಿಪರರ ಈ ಬೇಡಿಕೆಯನ್ನು ...ಹಾನುಭೂತಿಯಿಂದ ಪರಿಗಣಿಸುವುದಾಗಿ ...ಖ್ಯಮಂತ್ರಿಗಳು ಕಾರ್ನಾಡ್, ಗೌರಿ ಲಂಕೇಶ್, ... ಗೋವಿಂದರಾವ್, ಡಾ. ಮರುಳಸಿದ್ದಪ್ಪ ...ಂತಾದವರಿಗೂ, ಎಡಪಕ್ಷಗಳು ಹಾಗೂ ...(ಎಸ್) ಮುಖಂಡರಿಗೆ ಭರವಸೆ ನೀಡಿದ್ದರು. ...ಂತಹ ಅನುಮತಿಗಾಗಿ ಜಿಲ್ಲಾಧಿಕಾರಿ ...ಗ, ಎಸ್‌ಪಿಯವರಿಗೆ ಅರ್ಜಿ ಸಲ್ಲಿಸಿದ್ದರೂ ...ಸೆಂಬರ್ 6 ರವರೆಗೂ ಆಡಳಿತ ಏನನ್ನೂ ...ಷ್ಟವಾಗಿ ತಿಳಿಸಲಿಲ್ಲ. ನಂತರ ಸೌಹಾರ್ದ ...ಸಮಾವೇಶಕ್ಕೆ ಅನುಮತಿಯನ್ನು ...ಕರಿಸಲಾಯಿತು. ಯಾಕೆಂದು ಕೇಳಿದರೆ ಸಂಘ ...ವಾರದ್ದು ಧಾರ್ಮಿಕ ಸಮಾವೇಶ. ನಿಮ್ಮ ...ಜಕೀಯ ಸಮಾವೇಶ ಎಂದರು. ಅವರು ...ಜ್ಞಾಪೂರ್ವಕವಾಗಿಯೇ 'ಉಲ್ಟಾಪಲ್ಟಾ' ...ಖ್ಯಾನ ನೀಡಿದ್ದರು!

ಸರ್ಕಾರದ ಈ ಆದೇಶ, ನಿರ್ಬಂಧಗಳು ಸಂಘ ...ವಾರದ ಅಟ್ಟಹಾಸಕ್ಕೆ ಪುಷ್ಟಿ ನೀಡುವಂತಿದ್ದವು. ...ನಿರ್ಬಂಧಗಳನ್ನು ಧಿಕ್ಕರಿಸದೇ, ಪ್ರಗತಿಪರರಿಗೆ ...ಬೇರೆ ದಾರಿಯಿರಲಿಲ್ಲ. ಆದ್ದರಿಂದ ಏನೇ ಆದರೂ ...ಹಾರ್ದ ಸಮಾವೇಶ ನಡೆಸಿಯೇ ತೀರಲು ...ರ್ಧರಿಸಲಾಗಿತ್ತು. ಈ ಸೆಕ್ಯುಲರ್ ಕಾಂಗ್ರೆಸ್ ...ರ್ಕಾರದ ಕ್ರಮಗಳು ಹೇಗಿದ್ದವೆಂದರೆ ...ಮಗಳೂರಿನತ್ತ ಹೊರಟ ಬೇರೆ ಜಿಲ್ಲೆಗಳ ...ರ್ಯಕರ್ತರನ್ನು ಅಲ್ಲಲ್ಲೇ ತಡೆಯಲಾಯಿತು. ...ಸೆಂಬರ್ 6 ರಂದು ಹಾಸನದಲ್ಲಿ ಡಿವೈಎಫ್‌ಐ, ...ಎಫ್‌ಐ, ಸಿಪಿಐ(ಎಂ),ಡಿಎಸ್‌ಎಸ್ ಹಾಗೂ ಹಲವಾರು ಪ್ರಗತಿಪರ ಸಂಘಟನೆಗಳು, ಭಾನು ಮುಷ್ತಾಕ್, ಜಹೋನಾ ಮುಂತಾದ ಬುದ್ದಿಜೀವಿ, ಚಿಂತಕರೊಡಗೂಡಿದ ಸೌಹಾರ್ದ ನಡಿಗೆಯನ್ನು ಕೈಬಿಡುವಂತೆ ಎಸ್ಪಿಯರು ಭಾರಿ ಒತ್ತಡ ಹಾಕಿದರು.ಇನ್ನೊಂದೆಡೆ ಬಜರಂಗದಳ ನಡೆಸಲು ನಿರ್ಧರಿಸಿದಾಗ ಕಾರ್ಯಕ್ರಮಕ್ಕೆ ಅವಕಾಶ ನೀಡಿ 'ಸೌಹಾರ್ದ ನಡಿಗೆಗೆ ತಡೆಯೊಡ್ಡಲಾಯಿತು. ಸೌಹಾರ್ದ ನಡಿಗೆ ನಮ್ಮ ಹಕ್ಕು ಎಂದು ಹೊರಟ ಸಿಪಿಐ(ಎಂ) ಕಾರ್ಯದರ್ಶಿ ಜಿ.ಎನ್.ನಾಗರಾಜ್, ಡಿವೈಎಫ್‌ಐ ಕಾರ್ಯದರ್ಶಿ ಮಹಾಂತೇಶ್,ಭಾನು ಮುಂತಾದವರನ್ನು ಬಂಧಿಸಿ ಠಾಣೆಗೆ ಕರೆದೊಯ್ಯಲಾಯಿತು. ಪ್ರತಿಭಟನಾಕಾರರ ಸತತ ಪ್ರತಿಭಟನೆ ಬಳಿಕ ರಾತ್ರಿ ಬಿಡುಗಡೆ ಮಾಡಲಾಯಿತು. ಚಿಕ್ಕಮಗಳೂರಿನತ್ತಲ್ಲದೇ ಅದಕ್ಕೂ ಮೊದಲು ಪ್ರತಿಭಟನಾ ಮೆರವಣಿಗೆ ನಡೆದು ಮಾನವ ಸರಪಣಿ ರಚಿಸಿ, ಬಹಿರಂಗ ಸಭೆ ನಡೆಸಲಾಯಿತು. ಇದರಲ್ಲಿ ಕಾರ್ನಾಡ್, ಜಿ.ಕೆ.ಜಿ., ಪ್ರೊ. ರಾಮದಾಸ್, ವಿಜಯ, ಜಿ.ಎನ್. ನಾಗರಾಜ್, ಸರಸ್ವತಿ ಮುಂತಾದವರಿದ್ದರು. ಉರಿಬಿಸಿಲಿನಲ್ಲಿಯೂ ಹಾಸನದ ಜನತೆ ನೂರಾರು ಸಂಖ್ಯೆಯಲ್ಲಿ ಸೇರಿ ಮಾತುಗಳನ್ನು ಆಲಿಸಿ, ಸೌಹಾರ್ದತೆ ಸಾರಿದರು. ಇನ್ನೊಂದೆಡೆ ಬಜರಂಗದಳ, ವಿ.ಹಿಂ.ಪರಿಷತ್ತಿನ ಗೂಂಡಾಪಡೆ ಅತ್ಯಂತ ಪ್ರಚೋದನಾತ್ಮಕ ಘೋಷಣೆ ಕೂಗುತ್ತಾ, ಬೆದರಿಸುತ್ತಾ ಗಿರಿಗೆ ಸಾಗುತ್ತಿತ್ತು. ಗಿರಿಯಲ್ಲಿ ಅವರ ಸಭೆ, ಆ ಸಭೆಯಲ್ಲಿ ಮಾತನಾಡಿದ ಬಜರಂಗದಳದ ನಾಯಕ ಪ್ರಮೋದ ಮುತಾಲಿಕ್ ಸೌಹಾರ್ದತೆಯ ಹೋರಾಟಗಾರರನ್ನು ಬಾಯಿಬಂದಂತೆ ಬೈದದಲ್ಲದೇ ಹಿಂದೂಗಳು ಶಸ್ತ್ರಗಳನ್ನು ಹೊಂದಿ, ಬಳಸಬೇಕೆಂದು ಕರೆ ನೀಡಿದ. ಈ ಅಟ್ಟಹಾಸ ತಡೆಯಲು ಆಡಳಿತ ಏನೂ ಕ್ರಮವಹಿಸಲಿಲ್ಲ. ಸಂವಿಧಾನ, ಕಾನೂನು-ಉಲ್ಲಂಘಿಸಿದರೂ ಮುಕ್ತ ಅವಕಾಶ ಕೊಡಲಾಯಿತು. ಆದರೆ ಸೌಹಾರ್ದತೆಗಾಗಿ ಶ್ರಮಿಸುತ್ತಿರುವ ಕಾರ್ಯಕರ್ತರನ್ನು ಏನೊಂದು ವ್ಯವಸ್ಥೆಯೇ ಇಲ್ಲದಿರುವ ಬಯಲು ಬಂಧಿಖಾನೆಗೆ ದೂಡಿದ್ದಲ್ಲದೇ, ನೀರು ಸಹ ಒದಗಿಸದೇ ಹಿಂಸೆ ನೀಡಲಾಯಿತು. ಅವರನ್ನು ನೋಡಲು ಬಂದವರಿಗೂ ಅವಕಾಶ ನೀಡದೇ ಹಿಂದಕ್ಕೆ ತಳ್ಳಲಾಯಿತು. ಈ ಬಂಧಿತರನ್ನು ಬಿಡುಗಡೆಗೊಳಿಸಿದ್ದು 8 ರ ಮಧ್ಯರಾತ್ರಿ. ಹೀಗೆ


'ಸೌಹಾರ್ದದೆಡೆಗೆ ನಮ್ಮ ನಡಿಗೆ' ಕಾರ್ಯಕ್ರಮದಲ್ಲಿ ಮಾತನಾಡುತ್ತಿರುವ ಗಿರೀಶ್ ಕಾರ್ನಾಡ್. ಜಿ.ಎನ್.ನಾಗರಾಜ್ ಮತ್ತು ಮರಳುಸಿದ್ದಪ್ಪನವರನ್ನು ಕಾಣಬಹುದು

ಹೊರಟವರನ್ನು ಬೇಲೂರಿನಲ್ಲೇ ತಡೆಯಲಾಯಿತು. ಹಾಗೆಯೇ ಗಿರೀಶ್ ಕಾರ್ನಾಡ್, ಕೆ.ಮರುಳುಸಿದ್ದಪ್ಪ, ಜಿ.ಕೆ.ಗೋವಿಂದ ರಾವ್, ವಿಜಯಾ, ಜಿ.ಆರ್.ಸರಸ್ವತಿ ಮುಂತಾದವರನ್ನು ಮಧ್ಯರಾತ್ರಿಯೇ ಬೇಲೂರಿನಲ್ಲಿ ತಡೆದು ಬಂಧಿಸಲಾಯಿತು. ಇದೇ ರೀತಿ ಬಂಧನವನ್ನು ಶಿವಮೊಗ್ಗ, ಕೊಡಗು, ಸಕಲೇಶಪುರ ಮುಂತಾಡೆಗಳಲ್ಲಿಯೂ ನಡೆಸಲಾಗಿತ್ತು. ಹೀಗೆ ಬಂಧನ ಆರರಿಂದಲೇ ಆರಂಭಗೊಂಡು 7 ರಂದು ಮುಂದುವರೆದಿದ್ದರೂ ಅಂದು ನಿಗದಿಯಾದಂತೆ ಚಿಕ್ಕಮಗಳೂರಿನಲ್ಲಿ ಸೌಹಾರ್ದತೆ ಸಮಾವೇಶ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಆರಂಭವಾಗಿಯೇ ಬಿಟ್ಟಿತು. ಗೌರಿಲಂಕೇಶ್, ಎ.ಕೆ.ಸುಬ್ಬಯ್ಯ, ರಹಮತ್ ತರಿಕೇರಿ, ಸನತ್ ಕುಮಾರ್, ಸಿದ್ದನಗೌಡ ಪಾಟೀಲ್, ಶ್ರೀಧರ್, ಅನಂತ ಸುಬ್ಬರಾವ್, ಪೀರ್‌ಭಾಷಾ, ಆರ್.ಆರ್. ಮನೋಹರ್ ಮುಂತಾದವರಿದ್ದ ಸುಮಾರು 1000 ಕ್ಕೂ ಅಧಿಕ ಕಾರ್ಯಕರ್ತರು, ಬುದ್ಧಿಜೀವಿ ಗಳನ್ನು ಬಂಧಿಸಿ ಜೈಲಿಗೆ ಹಾಕಲಾಯಿತು. ಹಾಸನದಲ್ಲಿ, ಚಿಕ್ಕಮಗಳೂರಿಗೆ ಹೋಗದಂತೆ ನಿರ್ಧರಿಸಿದಾಗ ಪ್ರತಿಭಟಿಸಿ ಬಂಧನಕ್ಕೊಳಗಾಯಿ


...ವೇಶದಲ್ಲಿ ಜನತೆ


ಕೋಮುವಾದಿಗಳ ವಿರುದ್ಧ ಸಮರ ಸಾರುವುದಾಗಿ ಘೋಷಿಸುವ ಪೂಜಾರಿ, ಕೃಷ್ಣರವರು ನಿಜಕ್ಕೂ ಅವರು ಯಾರ ಪರ ಎಂಬುದನ್ನು ಸಾಬೀತು ಪಡಿಸಿದರು. ಈ ಮೂಲಕ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡುತ್ತಿರುವ ಜಾತ್ಯತೀತ, ಪ್ರಗತಿಪರ ಶಕ್ತಿಗಳನ್ನು ದುರ್ಬಲಗೊಳಿಸಲು ಮುಂದಾಗಿದ್ದಾರೆ. ಕೋಮುವಾದಿಗಳಿಗೆ ಪ್ರೋತ್ಸಾಹ ನೀಡಿ ತಾವೂ ಸಹ ಮೃದು ಹಿಂದುತ್ವದ ಧೋರಣೆಗೆ ಬದ್ಧವಾಗಿರುವುದನ್ನು ನಾಚಿಕೆಯಿಲ್ಲದೇ ತೋರ್ಪಡಿಸಿಕೊಂಡಿದ್ದಾರೆ. ಇದು ಹೊಸತೇನಲ್ಲ. ಹಿಂದೆಯೂ ಇದೇ ಸರ್ಕಾರದ ಮಂತ್ರಿಗಳು, ಆಡಳಿತ ವ್ಯವಸ್ಥೆ ಸಂಘ ಪರಿವಾರದ ಅಜೆಂಡಾವನ್ನೇ ಜಾರಿಗೊಳಿಸಲು ತೊಡಗಿದ್ದು ಬಾಬಾಬುಡನ್‌ಗಿರಿ ವಿಷಯದಲ್ಲೇ ನಿಚ್ಚಳವಿದೆ. ಇಂತಹ ಡೋಂಗಿತನ ಪ್ರಗತಿಪರರ ದಮನ ಪ್ರತಿಭಟಿಸಿ ಮುಖ್ಯ ಮಂತ್ರಿಯವರ ಮನೆಯೆದುರೇ ಡಿ. 10 ರಂದು ಧರಣಿ ನಡೆಸಲಾಯಿತು. ಮುಖ್ಯಮಂತ್ರಿ ಗಳು ಚಳುವಳಿಗಾರರ ನಿಯೋಗದೊಂದಿಗೆ ಮಾತನಾಡಿದರು. ಚಳುವಳಿಗಾರರ ಜೊತೆ ಆದ ಲೋಪಗಳಿಗೆ ಕ್ಷಮೆ ಕೋರಿದರು. ತೊಗಾಡಿಯಾ, ಮುತಾಲಿಕರನ್ನು ಗಡಿಪಾರು ಮಾಡಲು ಕ್ರಮ ಜರುಗಿಸುವುದಾಗಿ ಹೇಳಿದರು. ತಾವೂ ಸಹ ಸಮಾನಮನಸ್ಕರೆಂದರು. ಮೊಕದ್ದಮೆ ಹಿಂತೆಗೆಯಲು ಸೂಚಿಸಿದರು. ಆದರೆ ಬಾಬಾಬುಡನ್‌ಗಿರಿಯ ಸಮಸ್ಯೆಗ ದೃಢವಾದ ಪರಿಹಾರ ಹಾಗೂ ಕೋಮುವಾದಿಗಳ ಅಟ್ಟಹಾಸಕ್ಕೆ ಕಡಿವಾಣ ಹಾಕುವ ಗಟ್ಟಿ ಧ್ವನಿ ಬರಲಿಲ್ಲ. ಅವರ ಅನೇಕ ಅಭಿಪ್ರಾಯ ತುಟಿಮೇಲಿನ ಮಾತುಗಳಷ್ಟೇ

ಇಷ್ಟಂತೂ ನಿಜ ಕಾಂಗ್ರೆಸ್ ಕೋಮುವಾದಿಗಳ ಜೊತೆ ಕೈ ಜೋಡಿಸಿದ ಅವಮಾನಕರ ಡೋಂಗಿತನದ ಮುಖ ಬಯಲಾಗಿದೆ. ಇದಕ್ಕೆ ಭಾರಿ ಬೆಲೆಯನ್ನು ಕಾಂಗ್ರೆಸ್ ತೆರಬೇಕಾಗುತ್ತದೆ. ಈ ಮುಖವಾಡದ ಅಧಿಕಾರಸ್ಥರಿಂದ ಕರ್ನಾಟಕವನ್ನು ರಕ್ಷಿಸಬೇಕಿದೆ. ಕೃಷ್ಣರ ದಮನವಾಗಲಿ, ಮುಖಕ್ಕೆ ಅಂಟಿರುವ ಕಳಂಕದ ಮಸಿ ಒರೆಸಿಕೊಳ್ಳುವ ಮಾತಾಗಲೀ, ಮತಾಂಧರ ಅಟ್ಟಹಾಸವಾಗಲೀ ಮೇಲುಗೈ ಪಡೆಯಲಾರವು. ಪ್ರಗತಿಪರ, ಜಾತ್ಯತೀತ ಶಕ್ತಿಗಳ ಹೋರಾಟ ತಡೆಯಲಾರವು.

- ಜೀ


ಸೌಹಾರ್ದತೆ ಬಯಸಿದ ಜನರನ್ನು [illegible] ಪೋಲೀಸರು

ಕರ್ನಾಟಕದ ಕೆಲವೆಡೆ ನಕ್ಸಲೀಯರ ಚಟುವಟಿಕೆಗಳು ಟಿಸಿಲೊಡೆಯುತ್ತಿವೆ. ಕಣ್ಣು ಕೋರೈಸಿ ತಣ್ಣಗಾಗುವ ಈ ವಾದ ಒಳ ಹೊರಗಿನ ಹೂರಣ, ನಡೆದು ಬಂದ ಹಾದಿ, ಸನ್ನಿವೇಶಗಳನ್ನು ಮತ್ತು ನಕ್ಸಲೀಯರ ಮೇಲೆ ಸರ್ಕಾರ-ಪ್ರಭುತ್ವದ ಎನ್‌ಕೌಂಟರ್‌ಗಳ ಧಾಳಿ ಕುರಿತ ನಿಲುವನ್ನು ಹಿಂದಿನ ಲೇಖನದಲ್ಲಿ ವಿವರಿಸಲಾಗಿತ್ತು. ಈಗ ಭಾರತದ ಕ್ರಾಂತಿಕಾರಿ ಪರಿವರ್ತನೆಗೆ ಹೋರಾಡಬೇಕಾದಲ್ಲಿ ಭಾರತೀಯ ಸಮಾಜದ ನಿರ್ದಿಷ್ಟ-ವಾಸ್ತವಿಕ ಸ್ಥಿತಿಯ ವಿಶ್ಲೇಷಣೆ ಅತ್ಯಗತ್ಯ. ಈ ಬಗ್ಗೆ ನಕ್ಸಲ್‌ವಾದ ಏನು ಹೇಳುತ್ತದೆ? ಅದು ಹೇಗೆ ತಪ್ಪಾದದ್ದು ಎಂಬುದರತ್ತ ಚರ್ಚೆಯನ್ನು ಕೈಗೆತ್ತಿಕೊಂಡಿದ್ದಾರೆ ಲೇಖಕರು.



ಭಾರತದ ಕ್ರಾಂತಿಕಾರಿ ಪರಿವರ್ತನೆ ಮತ್ತು ನಕ್ಸಲೀಯರು

ಜಿ.ಎನ್.ನಾಗರಾಜ್

ಭಾರತದ ಕ್ರಾಂತಿಕಾರಿ ಪರಿವರ್ತನೆ ಹೇಗೆ ಎಂಬುದು ಪ್ರಗತಿಪರರೆಲ್ಲರ ಪ್ರಮುಖ ಪ್ರಶ್ನೆ. ಭಾರತದ ಸಮಾಜ ರಚನೆಯನ್ನು ಅಧ್ಯಯನ ಮಾಡುವ, ಅರ್ಥಮಾಡಿಕೊಳ್ಳುವ ಮೂಲಕ ಸಮಾಜದ ಇಂದಿನ ರಚನೆಗೆ ತಕ್ಕಂತೆ ಕ್ರಾಂತಿಯ ಪಥವನ್ನು ರೂಪಿಸಿಕೊಳ್ಳಬೇಕಾಗಿದೆ. ಭಾರತದ ಸಮಾಜ ಆಧುನಿಕತೆಯ ಒತ್ತಡದಲ್ಲಿ ನಿರಂತರವಾಗಿ ಬದಲಾವಣೆಗೆ ಒಳಗಾಗುತ್ತಿದೆ. ಬ್ರಿಟಿಷರ ಪ್ರವೇಶದಿಂದ ಆರಂಭವಾದ ಈ ಬದಲಾವಣೆಗಳು ಸ್ವಾತಂತ್ರ್ಯ ಚಳುವಳಿಯಿಂದಾಗಿ ತೀವ್ರಗೊಂಡವು. ಭಾರತದ ಸ್ವಾತಂತ್ರ್ಯಾನಂತರದ ವರ್ಷಗಳಲ್ಲಿ ಈ ಬದಲಾವಣೆಗಳಿಗೆ ಮತ್ತಷ್ಟು ವೇಗ ದೊರಕಿತು. ಈ ಬದಲಾವಣೆಗಳನ್ನು ಹಾಗೂ ಸಮಾಜ ರಚನೆಯ ಮೇಲೆ ಇವುಗಳಿಂದ ಮೂಡಿದ ಪರಿಣಾಮಗಳನ್ನು ಅಧ್ಯಯನ ಮಾಡಬೇಕಾಗಿದೆ. ನಕ್ಸಲ್ ವಾದಿಗಳು ಅಪಾರವಾಗಿ ಗೌರವಿಸುವ ಮಾವೋ ಜೆ ಡುಂಗ್ ರವರ ಚಿಂತನೆಯ ಮೂಲ ಸೂತ್ರವೇ Seek truth from facts (ವಾಸ್ತವ ಸಂಗತಿಗಳಿಂದ ಸತ್ಯವನ್ನು ತಿಳಿದುಕೊಳ್ಳಬೇಕು). ಮಾರ್ಕ್ಸ್‌ವಾದಿ-ಲೇನಿನ್‌ವಾದಿಗಳೆಂದು ಕರೆದುಕೊಳ್ಳುವ ನಕ್ಸಲೀಯರು ಲೆನಿನ್‌ರವರ ಮತ್ತೊಂದು ಪ್ರಮುಖ ತತ್ವ - concrete Study of concrete conditions (ವಾಸ್ತವ ಪರಿಸ್ಥಿತಿಯ ನಿರ್ದಿಷ್ಟ ಅಧ್ಯಯನವನ್ನು ಕೈಗೊಳ್ಳಬೇಕು). ಇದು ಮಾತ್ರವೇ ಕ್ರಾಂತಿಯ ಹಾದಿಯನ್ನು ರೂಪಿಸಿಕೊಳ್ಳುವ ವಿಧಾನ. ಮಾರ್ಕ್ಸ್‌ವಾದವನ್ನು ಬೆಳೆಸುವ ವಿಧಾನ. ಆದರೆ ನಕ್ಸಲೀಯರು ಈ ಮಾರ್ಕ್ಸ್‌ವಾದಿ ವಿಧಾನವನ್ನು ಮಾವೋವಾದಿ ವಿಧಾನವನ್ನು ಕೈಬಿಟ್ಟಿದ್ದಾರೆ ಮತ್ತು ಮಾವೋರವರು ಕ್ರಾಂತಿಪೂರ್ವದ ಚೀನಾದ ಸಮಾಜದ ಬಗ್ಗೆ ಮಾಡಿದ ವಿಶ್ಲೇಷಣೆಯನ್ನು ಹಾಗೆಯೇ ಕಾಪಿ ಹೊಡೆದು ಭಾರತಕ್ಕೆ ಹಾಗೆ ಹಾಗೆಯೇ ಹಸಿಹಸಿಯಾಗಿ ಅಮದು ಮಾಡಿಕೊಳ್ಳಬಯಸುತ್ತಾರೆ. ಈ ಕುರುಡು ಮಾವೋವಾದದ ಪರಿಣಾಮವಾಗಿ ಅವರು ಭಾರತದಲ್ಲಿ ಸ್ವತಂತ್ರವಾಗಿ ಬಂಡವಾಳಶಾಹಿ ಬೆಳೆದೇ ಇಲ್ಲ. ವಿದೇಶಿ ತಯಾರಿಕೆಗಳನ್ನು ಭಾರತದಲ್ಲಿ ಮಾರುವ ಕಮಿಷನ್ ಏಜೆಂಟರಷ್ಟೇ ಇದ್ದಾರೆ. ಆದ್ದರಿಂದ ಭಾರತ ಇನ್ನೂ ಅರೆ ವಸಾಹತು-ಅರೆ ಪಾಳೆಯಗಾರಿ ಸಮಾಜ. ಇಲ್ಲಿ ಜನತೆಯ ಪ್ರಮುಖ ಶೋಷಕ ಹಾಗೂ ಶತ್ರು ಪಾಳೆಯಗಾರಿಕೆಯೇ ಎಂಬುದು ಅವರ ಕುರುಡುವಾದ. ಇಂತಹ ಕುರುಡು ವಾದದಿಂದಾಗಿ 'ಭಾರತದ ಸರ್ಕಾರ ಮತ್ತು ಪ್ರಭುತ್ವ ವ್ಯವಸ್ಥೆ ಪೂರ್ಣವಾಗಿ ಜನರಿಂದ ದೂರವಾಗಿದೆ, ಸರ್ವತ್ರ ದ್ವೇಷಕ್ಕೊಳಗಾಗಿದೆ. ಸಶಸ್ತ್ರ ಚಳುವಳಿಗೆ ಪರಿಸ್ಥಿತಿ ಪಕ್ವವಾಗಿದೆ. ಆದ್ದರಿಂದ ತಕ್ಷಣವೇ ಸಶಸ್ತ್ರ ಹೋರಾಟಕ್ಕಿಳಿಯಬೇಕು. ಕ್ರಾಂತಿಗೆ ಅದೊಂದೇ ದಾರಿ. ಸಶಸ್ತ್ರ ಹೋರಾಟಕ್ಕೆ ಕರೆ ಕೊಟ್ಟರೆ ಭಾರತದ ಜನರೆಲ್ಲರೂ ಈಗಿಂದೀಗ ಶಸ್ತ್ರಗಳನ್ನು ಕೈಗೆ ತೆಗೆದುಕೊಂಡು ಕ್ರಾಂತಿಗೆ ಧುಮುಕುತ್ತಾರೆ' ಎಂಬುದು ಅವರ ತೀರ್ಮಾನ.

ಭಾರತೀಯ ಸಮಾಜ

ಸಿಪಿಐ(ಎಂ) ಪಕ್ಷ ಭಾರತದ ವಾಸ್ತವಿಕ ಪರಿಸ್ಥಿತಿಯನ್ನು ವಿಶದವಾಗಿ ಅಧ್ಯಯನ ಮಾಡಿ ಭಾರತದ್ದೇ ಆದ ದಾರಿಯನ್ನು ಕಂಡುಕೊಳ್ಳಬೇಕು. ಚೀನಾದ ವಾಸ್ತವಿಕ ಪರಿಸ್ಥಿತಿಯೇ ಬೇರೆ. ಭಾರತದ ವಾಸ್ತವಿಕ ಪರಿಸ್ಥಿತಿಯೇ ಬೇರೆ ಎಂದು ಸ್ಪಷ್ಟ ತೀರ್ಮಾನಕ್ಕೆ ಬಂದಿತು. ಭಾರತದಲ್ಲಿ ಬಂಡವಾಳಶಾಹಿ ಗಣನೀಯವಾಗಿ ಬೆಳೆದಿದೆ. ಈ ಬಂಡವಾಳಶಾಹಿ ಉತ್ಪಾದನೆಯ ಮೇಲೆ ಕೈಗಾರಿಕೆಗಳ ಮೇಲೆ ವ್ಯಾಪಾರದ ಮೇಲೆ ತನ್ನ ಬಲವಾದ ಹಿಡಿತವನ್ನು ಹೊಂದಿದೆ. ಕೃಷಿಯ ಒಳಗೂ ಪ್ರವೇಶಿಸಿ ಮಾರ್ಪಾಡುಗಳನ್ನು ತಂದಿದೆ. ಆದರಿಂದಾಗಿ ಕೃಷಿ ಬಂಡವಾಳಶಾಹಿಗಳು, ಶ್ರೀಮಂತ ರೈತರು ಉದ್ಭವಿಸಿದ್ದಾರೆ. ಈ ಬಂಡವಾಳಶಾಹಿ ಉತ್ಪಾದನೆಯ ಮೇಲೆ ಮಾತ್ರವಲ್ಲ ಪತ್ರಿಕೆ-ಮಾಧ್ಯಮ, ಸಿನೆಮಾ ಇತರ ಸಾಂಸ್ಕೃತಿಕ ಪರಿಕರಗಳ ಮೇಲೆ ತನ್ನ ಹಿಡಿತ ಸಾಧಿಸಿದೆ. ಶಿಕ್ಷಣ ವ್ಯವಸ್ಥೆಯಲ್ಲೂ ತನ್ನ ವಿಚಾರಗಳನ್ನು ಹರಡುವ ಮಾಧ್ಯಮವನ್ನಾಗಿ ಬಳಸಿಕೊಳ್ಳುತ್ತಿದೆ. ಈ ಬಂಡವಾಳಶಾಹಿಗಳ ಒಳಗೆ ದೊಡ್ಡ ಬಂಡವಾಳಶಾಹಿ ಬೆಳೆದಿದೆ. ಇದನ್ನು

ಗುತ್ತೇದಾರಿಯೆಂದೂ ಪರಿಗಣಿಸಬಹುದು. ಈ ಗುತ್ತೇದಾರಿ ಅಥವಾ ಹಿರಿ ಬಂಡವಾಳಶಾಹಿ ಭಾರತದ ಪಾಳೆಯಗಾರಿ ವರ್ಗದೊಡನೆ ರಾಜಿ ಮಾಡಿಕೊಂಡು 'ಅಧಿಕಾರವನ್ನು ಅದರೊಡನೆ ಹಂಚಿ ಕೊಂಡಿದೆ. ಈ ಮೂಲಕ ಹಾಗೂ ನೇರವಾಗಿ ಹಳ್ಳಿಗಳ ಮೇಲೆ ತನ್ನ ಹಿಡಿತ ಹೊಂದಿದೆ. ಅದೇ ಸಮಯದಲ್ಲಿ ತನ್ನ ಲಾಭಕ್ಕಾಗಿ ಸಾಮ್ರಾಜ್ಯಶಾಹಿಗಳೊಡನೆ ಸಹಕರಿಸುತ್ತಿದೆ ಎಂಬ ತೀರ್ಮಾನಕ್ಕೆ ಬಂದಿದೆ. ಭಾರತದ ಸಮಾಜದ ಈ ವೈಜ್ಞಾನಿಕ, ವಾಸ್ತವಿಕ ವಿಶ್ಲೇಷಣೆಯ ಅರ್ಥವೆಂದರೆ ಭಾರತದ ಜನತೆಯ ಇಂದಿನ ಶೋಷಕರು ಹಿರಿಬಂಡವಾಳಶಾಹಿ, ಪಾಳೆಗಾರಿ ವರ್ಗ ಮತ್ತು ಸಾಮ್ರಾಜ್ಯಶಾಹಿಗಳು. ಜನತೆಯ ವಿಮೋಚನಾ ಹೋರಾಟ ಈ ಮೂರು ವರ್ಗಗಳ ವಿರುದ್ಧ.

ಸ್ವಾತಂತ್ರ್ಯಾನಂತರದಲ್ಲಿ ಕಾಂಗ್ರೆಸ್ ಈ ಬಂಡವಾಳಶಾಹಿ ಮತ್ತು ಭೂಮಾಲಕ (ಪಾಳೆಯಗಾರಿ) ವರ್ಗಗಳನ್ನು ಪ್ರತಿನಿಧಿಸುವ ಪ್ರಧಾನ ಪಕ್ಷವಾಗಿತ್ತು. ನಂತರ ಭಾರತದಲ್ಲಿ ಆರ್ಥಿಕ ಬಿಕ್ಕಟ್ಟು ಅದರಿಂದುಂಟಾದ ಜನತೆಯ ಸಂಕಟ ತೀವ್ರವಾಗುತ್ತಾ ಆಳುವ ವರ್ಗದ ಬೇರೆ ಬೇರೆ ಪಕ್ಷಗಳು ಉದ್ಭವಿಸಿವೆ. ಜನತೆಯ ಮೇಲೆ ತಮ್ಮ ಹಿಡಿತವನ್ನುಳಿಸಿಕೊಳ್ಳಲು ಬೇರೆ ಬೇರೆ ಮಾರ್ಗಗಳನ್ನು ಅವಲಂಬಿಸಿವೆ. ಅದರಲ್ಲಿ ಭಾರತದ ಹಿರಿ ಬಂಡವಾಳಗಾರರ ಒಂದು ಪ್ರಮುಖ ವಿಭಾಗ ಇಂದು ಕೋಮುವಾದವನ್ನು ಅವಲಂಬಿಸಿದ ಬಿಜೆಪಿ ಕಡೆಗೆ ಸರಿದಿದೆ. ಇನ್ನುಳಿದ ಅನೇಕ ಪಕ್ಷಗಳು - ಪ್ರಮುಖವಾಗಿ ಪ್ರಾದೇಶಿಕ ಪಕ್ಷಗಳು ಆಯಾ ರಾಜ್ಯದ ಪ್ರಾದೇಶಿಕ ಬಂಡವಾಳಶಾಹಿ - ಪಾಳೆಯಗಾರಿ ವರ್ಗದ ಪಕ್ಷಗಳಾಗಿವೆ. ಈ ಪಕ್ಷಗಳು ಪ್ರಾದೇಶಿಕ ಅಭಿವೃದ್ಧಿ, ಭಾಷೆ, ರಾಜ್ಯ ಸರ್ಕಾರಗಳಿಗೆ ಹೆಚ್ಚು ಅಧಿಕಾರ ಇಂತಹ ಪ್ರಜಾಸತ್ತಾತ್ಮಕ ಪ್ರಶ್ನೆಗಳ ಜೊತೆಯಲ್ಲಿ ಜಾತಿವಾದ, ಭಾಷಾಂದತೆ ಮೊದಲಾದ ಮಾರ್ಗಗಳ ಮೂಲಕ ಜನತೆಯ ಮೇಲೆ ಹಿಡಿತ ಸಾಧಿಸಿವೆ ಎಂದು ವಿಶ್ಲೇಷಿಸಿದೆ.


ಜನರ ಮೇಲೆ ಬಂಡವಾಳಶಾಹಿ ಹಿಡಿತ ಹಾಗೂ ಅದರಿಂದ ಹೊರಬರುವ ದಾರಿ

ಇದರ ಅರ್ಥವೇನೆಂದರೆ ಆಳುವರ್ಗಗಳ ಬಂಡವಾಳಶಾಹಿ ಹಾಗೂ ಪಾಳೆಯಗಾ ವರ್ಗಗಳು ಸಮಾಜದ ಮೇಲೆ ತಮ್ಮ ಆಧಿ ಹಿಡಿತ, ಶಿಕ್ಷಣ, ಸಾಂಸ್ಕೃತಿಕ ಮಾಧ್ಯಮಗ ಮೇಲಿನ ಹಿಡಿತ, ರಾಜಕೀಯ ಪಕ್ಷಗಳು ಸಿದ್ಧಾಂತಗಳ ಮೂಲಕ ಭಾರತದ ಜನತೆಯ ಮೇ ಪ್ರಬಲವಾದ ಹಿಡಿತವನ್ನು ಈಗಲೂ ಹೊಂದಿ ಈ ಹಿಡಿತದಿಂದ ಜನರನ್ನು ಹೊರತರ ಭಾರತದಲ್ಲಿ ಕ್ರಾಂತಿಕಾರಿ ಪರಿವರ್ತನೆ ಸಾಧ್ಯವ ಇದಕ್ಕಾಗಿ ಜನಸಮುದಾಯವ ಸಂಘಟಿಸಿ - ವ್ಯಾಪಕವ ಸಂಘಟಿಸಿ ಅವರ ದಿನನಿತ್ಯದ ಸಮಸ್ಯೆಗ ಆಧಾರದಲ್ಲಿ ಹೋರಾಟವನ್ನು, ಚಳುವಳಿಗಳ ರೂಪಿಸುವ ಮೂಲಕ ಜನತೆ ಅವರ ಅನುಭವದಿಂದ ಈ ವ್ಯವಸ್ಥೆಯ ಕರಾಳತೆಯ ಕಂಡುಕೊಳ್ಳಬೇಕು. ಈ ತಾಳ್ಮೆಯ, ನಿರಂತರವಾ ಕೆಲಸದಿಂದ ಜನತೆಯನ್ನು ಬಂಡವಾಳಶಾಹಿ ಭೂಮಾಲಕ ವರ್ಗಗಳ ಹಿಡಿತದಿಂ ಹೊರತರಬೇಕು. ಇಂತಹ ಪ್ರಬಲ ಪ್ರಭಾವದಿ ಹೊರಬಂದ ಜನತೆ ಮಾತ್ರವೇ ಕ್ರಾಂತಿಕಾ ಪರಿವರ್ತನೆಯನ್ನು ತರಬಲ್ಲರು.


ನಕ್ಸಲೀಯರು ಈ ತಾಳ್ಮೆಯ ನಿರಂತರವಾದ ಕೆಲಸ ಮಾಡ ನಿರಾಕರಿಸುತ್ತಾರೆ. ಆಳುವವರ್ಗಗ **ಶೋಷಣೆಯನ್ನು ಅರಿತುಕೊಂಡ ತಾವು ಕೆಲ ಜನ ಒಮ್ಮಿಂದೊಮ್ಮೆಲೆ ದಂಗೆಯೆದ್ದು ಕೂಡ** *ಸಮಾಜದ ಪರಿವರ್ತನೆಯ* **ಸಾಧಿಸಬೇಕೆನ್ನುತ್ತಾರೆ.** ಈ 'ಮಧ್ಯವರ್ಗೀಯ ಬಂಡವಾಳಶಾಹಿ' ಆತುರ, ಅಸಹನೆ ಅವರ ತಪ್ಪು ಮಾರ್ಗ ತುಳಿಯುವಂತೆ ಮಾಡುತ್ತಿದೆ. ಅ ಶ್ರಮವನ್ನು ವ್ಯರ್ಥಗೊಳಿಸುತ್ತಿದೆ. 1967 ರ ಹಿಡಿದು ಇಲ್ಲಿವರೆಗಿನ 36 ವರ್ಷಗಳಲ್ಲಿ ಇಂ ಹಲವು ದಂಗೆಗಳನ್ನು ಹೂಡಲು ಪ್ರಯ ವಿಫಲರಾಗಿದ್ದಾರೆ. ವಾಸ್ತವತೆಯ ಬಂಡೆಗೆ ಅ ಹಗಲುಗನಸುಗಳು ಒಡೆದು ಚೂರು ಚೂರಾಗ ಹಾಗೆಯೇ ನಕ್ಸಲ್‌ವಾದಿಗಳೂ ಹಲವಾ ಗುಂಪುಗಳಾಗಿ ಒಡೆದು ಛಿದ್ರ ಛಿದ್ರವಾಗಿದ್ದಾ ಒಂದು ಗುಂಪು ಮತ್ತೊಂದು ನಕ್ಸಲ್‌ವಾ ಗುಂಪಿನೊಡನೆ ಸಹಕರಿಸುವುದಿಲ್ಲ ಮಾತ್ರ ಅವರನ್ನೇ ಶತ್ರುವಿನಂತೆ ಪರಿಗಣಿಸುವುದ ಸಾಮಾನ್ಯ. ಆದರೆ ಇಷ್ಟು ದೀರ್ಘ ಕಾ ಅನುಭವದ ನಂತರವೂ ಪಾಠ ಕಲಿಯದಿರುವು ವಿಷಾದಕರವಾದದ್ದು.

(ಸಶೇ

ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲಿ



ಡಾ. ಪ್ರಕಾಶ್ ಸಿ. ರ



ಆರೋಗ್ಯ ಸುಧಾರಣೆಯೆಂದರೆ ಟಾನಿಕ್‌ಗಳನ್ನು ಉಪಯೋಗಿಸುವುದು, ಶಕ್ತಿ ವೃದ್ಧಿಸಲು ಇಂಜೆಕ್ಷನ್ ತೆಗೆದುಕೊಳ್ಳುವುದು ಎಂಬ ನಂಬಿಕೆ ವ್ಯಾಪಕವಾಗಿದೆ. ಆದರೆ ಅದು ಮೂಢನಂಬಿಕೆಯಷ್ಟೆ. ವೈದ್ಯರ ಚಿಕಿತ್ಸೆಗಳು ರೋಗ ಗುಣಪಡಿಸಲು ಸಹಾಯವಾಗುತ್ತವೆ. ವೈದ್ಯರ ಸಲಹೆಯಿಂದ ಆರೋಗ್ಯ ಸಂಪತ್ತನ್ನು ಹೆಚ್ಚಿಸಿಕೊಳ್ಳಬಹುದು. ಆದರೆ ಅನೇಕ ಬಾರಿ ವೈದ್ಯರಿಗೆ ಹಾಗೂ ರೋಗಿಗಳಿಗೆ ಸಮಯವಿರುವುದಿಲ್ಲವೆಂಬ ಕಾರಣದಿಂದ ಆರೋಗ್ಯ ವೃದ್ಧಿಸುವ ಸಲಹೆಗಳು ಕಡೆಗಣಿಸಲ್ಪಡುತ್ತವೆ. ಆರೋಗ್ಯ ಸಂಪತ್ತನ್ನು ಹೆಚ್ಚಿಸುವ ಸೂತ್ರಗಳನ್ನು ಅರಿಯುವುದು ನಮ್ಮ ಆರೋಗ್ಯ ನಮ್ಮ ಕೈಯಲ್ಲಿದ್ದಂತೆ.

ಆರೋಗ್ಯ ಎಂದರೆ ದೈಹಿಕ, ಮಾನಸಿಕ, ಸಾಮಾಜಿಕ ಸುಸ್ಥಿತಿ. ಈ ಸುಸ್ಥಿತಿಯನ್ನು ಸಾಧಿಸಲು ವೈಯಕ್ತಿಕ ಪ್ರಯತ್ನ ಮಾಡಬೇಕಾಗುತ್ತದೆ. ತಮ್ಮ ಪ್ರಯತ್ನದಲ್ಲಿ ವೈದ್ಯರು ಸಹಾಯ ಮಾಡಬಲ್ಲರು.


ಪೌಷ್ಠಿಕ ಆಹಾರ - ಪೌಷ್ಠಿಕಾಂಶದ ಕೊರತೆಯಿಂದ ಉಂಟಾದ ರೋಗಗಳು ಇಂದಿಗೂ ವ್ಯಾಪಕವಾಗಿ ಕಂಡುಬರುತ್ತಿರುವ ಸಮಯದಲ್ಲಿ, ಪೌಷ್ಠಿಕ ಆಹಾರದ ಬಗ್ಗೆ ಚರ್ಚೆ ಅತ್ಯಗತ್ಯ. ಆಹಾರ, ಆರೋಗ್ಯ ಕಾಪಾಡಲು ಪ್ರಮುಖ ಪಾತ್ರ ವಹಿಸುತ್ತದೆ. ಸಮತೋಲ ಆಹಾರದ ಮುಖ್ಯ ಘಟಕಗಳಾದ ಪ್ರೋಟೀನ್, ಕಾರ್ಬೋಹೈಡ್ರೇಟ್ಸ್, ಕೊಬ್ಬು, ವಿಟಮಿನ್, ಮಿನರಲ್, ನಾರು, ನೀರು ನಾವು ಉಪಯೋಗಿಸುವ ತರಕಾರಿ, ಅಕ್ಕಿ, ಗೋಧಿ, ರಾಗಿ, ಮಾಂಸ, ಮೀನು, ಮೊಟ್ಟೆ, ಹಾಲು, ಮೊಸರು ಮುಂತಾದವುಗಳಲ್ಲಿ ದೊರಕುತ್ತದೆ. ಈ ಎಲ್ಲಾ ಘಟಕಗಳುನ್ನು ದಿನನಿತ್ಯ ಉಪಯೋಗಿಸಿದಲ್ಲಿ ಆರೋಗ್ಯ ಸಾಧನೆ ಸುಲಭ.

ಊಟ ಬಲ್ಲವನಿಗೆ ರೋಗವಿಲ್ಲವೆಂಬುದು ಸತ್ಯ. ಯಾವುದೇ ಆಹಾರ ಪದಾರ್ಥ ಆರೋಗ್ಯ ಸಾಧಿಸಲು ನಿಷೇಧವಲ್ಲ. ಕೆಲವು ರೋಗಗಳಲ್ಲಿ ಕೆಲವು ಆಹಾರ ಪದಾರ್ಥಗಳು ನಿಷಿದ್ಧ(ಸಕ್ಕರೆ ಕಾಯಿಲೆ, ಬೊಜ್ಜು). ಈ ರೋಗಿಗಳಿಗೂ ಸಮತೋಲ ಆಹಾರ ಸೇವನೆ ಅಗತ್ಯ.

ಆಹಾರಕ್ಕೆ ಪೂರಕವಾಗಿ ಅನೇಕ ಪ್ರೋಟೀನ್ ಪುಡಿಗಳು, ಪೇಯಗಳು ಸಹಾಯವಾಗುತ್ತವೆ ಎಂದು ಔಷಧಿ ಕಂಪನಿಗಳು ಹೇಳುತ್ತವೆ. ಇದು ಅಸತ್ಯ. ಈಗಿನ ದಿನಗಳಲ್ಲಿ ಪೆಪ್ಸಿ, ಕೋಕೊಕೋಲಾ ಮುಂತಾದ ತಂಪು ಪಾನೀಯಗಳನ್ನು ಜನರು ಸೇವಿಸುತ್ತಾರೆ. ಇವುಗಳು ಆರೋಗ್ಯಕ್ಕೆ ಅಪಾಯ ಉಂಟು ಮಾಡುತ್ತವೆ. ಕಾರಣ ಇವುಗಳಲ್ಲಿ ಅಧಿಕ ಪ್ರಮಾಣದ ಸಕ್ಕರೆ ಹಾಗೂ ಆಮ್ಲ ಇರುತ್ತದೆ. 'ದಿನವೂ ಹಾಲು ಕುಡಿಯಲೇ ಬೇಕು', 'ಹಣ್ಣು ತಿನ್ನಲೇಬೇಕು', 'ಗೋಡಂಬಿ, ದ್ರಾಕ್ಷಿ, ಕೇಸರಿ, ಬಾದಾಮಿ ಆರೋಗ್ಯಕ್ಕೆ ಒಳ್ಳೆಯದು', 'ಮೀನ ತಿನ್ನುವುದರಿಂದ ಬುದ್ಧಿ ಬೆಳೆಯುತ್ತದ ಮುಂತಾದ ಹೇಳಿಕೆಗಳನ್ನು ಆಗಾಗ ಕೇಳುತ್ತೇವೆ ಆದರೆ ಸಮತೋಲ ಆಹಾರ ಸೇವಿಸುವ ವ್ಯಕ್ತಿ ಈ ಹೇಳಿಕೆಗಳು ಅರ್ಥಹೀನ. ಸಮತೋಲ ಆಹಾರ ಸೇವನೆಯಿಂದ ನಮ್ಮ ದೇಹದಲ್ಲಿ ಕಂಡುಬರುವ ಅಪೌಷ್ಠಿಕತೆಯಿಂದ ಉಂಟಾ ರೋಗಗಳಾದ ಪ್ರೋಟೀನ್ ಶಕ್ತಿ ಅಪೌಷ್ಠಿಕ ಕ್ವಾಶಿಯಾರ್ಕರ್, ಮೆರಾಸ್ಮಸ್, ವಿಟಮಿನ್ ಕೊರತೆಯಿಂದ ಉಂಟಾದ ರೋಗಗಳ ತಡೆಗಟ್ಟಬಹುದಾಗಿದೆ.

(ಮುಂದುವರಿಯುವು

ಜನಗಳಿಗೆ ಪರಿಹಾರ ಒದಗಿಸುವಲ್ಲಿ ಪರ್ಯಾಯ ನೀತಿಗಳನ್ನು ಅನುಸರಿಸುವಲ್ಲಿ ಕಾಂಗ್ರೆಸ್ ಸರ್ಕಾರಗಳ ವಿಫಲತೆ, ಜತೆಗೆ ರಾಷ್ಟ್ರೀಯ ಐಕ್ಯತೆಯ ಬಹುಮುಖ್ಯ ಪ್ರಶ್ನೆಗಳ ಮೇಲೆ ಹೋರಾಡುವಲ್ಲಿ ಆ ಪಕ್ಷದ ವಿಫಲತೆ ಈ ಭಾರೀ ಪರಾಭವಕ್ಕೆ ಪ್ರಮುಖ ಕಾರಣಗಳು. ಅದೇ ವೇಳೆಗೆ ಕಾವಿಪಡೆಗಳನ್ನು ತಾನು ಏಕಾಂಗಿಯಾಗಿ ಎದುರಿಸಬಲ್ಲೆ ಎಂಬ ಅದರ ಮೇರೆಮೀರಿದ ಆತ್ಮವಿಶ್ವಾಸದ ನಿಲುವಿನ ಪರಿಣಾಮವನ್ನು ಅದು ಅನುಭವಿಸಬೇಕಾಯಿತು. ಕಾಂಗ್ರೆಸ್-ಬಿಜೆಪಿಗಳ ಸೋಲು ಗೆಲುವಿಗೆ ಕಾರಣವಾದ ವಾಸ್ತವ ಸತ್ಯಗಳೇನು ಎಂಬುದನ್ನು ವಿಶ್ಲೇಷಿಸಿದ್ದಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು



ವಿಧಾನಸಭಾ ಚುನಾವಣೆಗಳು

ಕಾಂಗ್ರೆಸ್‌ನ ವಿಫಲತೆಗಳು

ಹರ್ಕಿಶನ್‌ಸಿಂಗ್ ಸುರ್ಜಿತ್

ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಭರ್ಜರಿ ಸೋಲು ಬಂದಿರುವುದು ಬಿಜೆಪಿ-ಎನ್‌ಡಿಎಯು ಜನಪ್ರಿಯತೆ ಕುಗ್ಗುತ್ತಿರುವಂತೆ ಕಾಣುತ್ತಿದ್ದ ಒಂದು ಸಂದರ್ಭದಲ್ಲಿ. ನಿಜ ಸಂಗತಿಯೆಂದರೆ ಐದು ವರ್ಷಕ್ಕೂ ಮೊದಲು ಕೇಂದ್ರದಲ್ಲಿ ಅಧಿಕಾರ ವಹಿಸಿಕೊಂಡ ಮೇಲೆ ನಡೆದ 28 ವಿಧಾನಸಭಾ ಚುನಾವಣೆಗಳಲ್ಲಿ 22 ರಲ್ಲಿ ಬಿಜೆಪಿ ಮತ್ತು ಎನ್‌ಡಿಎ ಯ ಇತರ ಅಂಗ ಪಕ್ಷಗಳು ಹಿನ್ನಡೆ ಕಂಡಿವೆ. ಅಷ್ಟೇ ಅಲ್ಲ, ಉತ್ತರ ಪ್ರದೇಶ, ಬಿಹಾರ, ಪಶ್ಚಿಮಬಂಗಾಳ, ತ್ರಿಪುರಾ ಮತ್ತಿತರ ಕೆಲವು ರಾಜ್ಯಗಳನ್ನು ಬಿಟ್ಟರೆ ಈ ಚುನಾವಣೆಗಳಲ್ಲಿ ಅತಿಹೆಚ್ಚು ಪ್ರಯೋಜನ ಪಡೆದದ್ದು ಇದೇ ಕಾಂಗ್ರೆಸ್ ಪಕ್ಷಕ್ಕೆ.




ಶೀಲಾ ದೀಕ್ಷಿತ್

ಈ ಬಾರಿಯೂ ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳನ್ನು ಕುರಿತಂತೆ ಇಂತಹುದೇ ಭವಿಷ್ಯ ಹೇಳಲಾಗಿತ್ತು. ಮಿಜೋರಾಂನಲ್ಲಿ ಕಾಂಗ್ರೆಸ್ ಒಂದು ಹೇಳಿಕೊಳ್ಳುವಂತಹ ಶಕ್ತಿಯಾಗಿರಲಿಲ್ಲ. ಆದರೆ ಇತರ ನಾಲ್ಕು ರಾಜ್ಯಗಳಾದ ಮಧ್ಯಪ್ರದೇಶ, ರಾಜಸ್ತಾನ, ಛತ್ತೀಸ್ ಗಡ ಮತ್ತು ದಿಲ್ಲಿಯಲ್ಲಿಯೂ ಮುಖ್ಯ ಸ್ಪರ್ಧೆಯಿದ್ದದ್ದು ಕಾಂಗ್ರೆಸ್ ಮತ್ತು ಬಿಜೆಪಿಗಳ ನಡುವೆಯೇ. ಅವೆಲ್ಲಾ ಕಾಂಗ್ರೆಸ್ ಆಡಳಿತದ ರಾಜ್ಯಗಳೇ ಆಗಿದ್ದರೂ ಅಭಿಪ್ರಾಯ ಸಂಗ್ರಹದಲ್ಲಿ ಅಧಿಕಾರಸ್ಥ ವಿರೋಧಿ ಅಂಶಗಳು ಗಮನಾರ್ಹವಾಗಿ ಕಂಡುಬಂದಿರಲಿಲ್ಲ. ಮಧ್ಯಪ್ರದೇಶದಲ್ಲಷ್ಟೇ ಬಿಜೆಪಿಗೆ ಸ್ವಲ್ಪ ಮಟ್ಟಿನ ನಿರೀಕ್ಷೆಯಿತ್ತು. ಇಲ್ಲಿಯೂ ಬಿಜೆಪಿ ಸ್ವಲ್ಪದಲ್ಲಿ ಅಧಿಕಾರಕ್ಕೆ ಬರಬಹುದು ಎಂದು ಹೇಳಲಾಗಿತ್ತು. ಚುನಾವಣೆಯ ನಂತರದ ಎಕ್ಸಿಟ್‌ಪೋಲ್‌ಗಳು ಬಿಜೆಪಿಗೆ ಬೆಂಬಲ ಹೆಚ್ಚಳವನ್ನು ಸೂಚಿಸಿದ್ದರೂ ಕಾಂಗ್ರೆಸ್ ಇತ್ತೀಚಿನ ವರ್ಷಗಳಲ್ಲೇ ಅತಿ ಕೆಟ್ಟದಾದ ಸೋಲುಣ್ಣುತ್ತದೆ ಎಂದು ಯಾರೂ ಯೋಚಿಸಿರಲಿಲ್ಲ.

ಫಲಿತಾಂಶಗಳು ಇಂತಹ ಎಲ್ಲಾ ಭವಿಷ್ಯ ವಾಣಿಗಳನ್ನು ಹುಸಿಗೊಳಿಸಿವೆ. ಚುನಾವಣೆಯ [illegible]ಗೆ ಬಿಜೆಪಿ ಪಾಳೆಯದಲ್ಲಿ ದುಗುಡದ ವಾತಾವರಣವಿದ್ದರೆ ಕಾಂಗ್ರೆಸ್ ಈಗ ಭಾಸಿಗೊಂಡಿದೆ. ಮಧ್ಯಪ್ರದೇಶದಲ್ಲಿ ಬಿಜೆಪಿ 230 ಸ್ಥಾನಗಳಲ್ಲಿ 171 ನ್ನು ಪಡೆದಿದೆ. ಮುಕ್ಕಾಲು ಭಾಗಕ್ಕೆ ಸ್ವಲ್ಪ ಕಮ್ಮಿಯಷ್ಟೆ. ಇದು ಬಿಜೆಪಿಯ ನಿರೀಕ್ಷೆಗೂ ಮೀರಿದ್ದು. ರಾಜಸ್ಥಾನದಲ್ಲಿ 200 ರಲ್ಲಿ 120 ಸ್ಥಾನಗಳನ್ನು ಬಿಜೆಪಿ ಗಳಿಸಿತು. ಅಲ್ಲಿ ಇದುವರೆಗೆ ಬಿಜೆಪಿ ತಾನಾಗಿಯೇ ನಿಚ್ಚಳ ಬಹುಮತ ಪಡೆದದ್ದಿಲ್ಲ. ಒಂದೆರೆಡು ಬಾರಿ ಅಲ್ಲಿ ಅದು ಸರ್ಕಾರ ರಚಿಸಿದ್ದು ಸಣ್ಣಪಕ್ಷಗಳ ನೆರವಿನಿಂದ ಅಥವಾ ಪಕ್ಷಾಂತರಗಳನ್ನು ನಡೆಸಿ. ಛತ್ತೀಸ್‌ಗಡದಲ್ಲಿ ಬಿಜೆಪಿ 90 ರಲ್ಲಿ 50 ಪಡೆಯಿತು. ಕಾಂಗ್ರೆಸ್ 37 ರಿಂದಲೇ ತೃಪ್ತಿಗೊಳ್ಳ ಬೇಕಾಯಿತು. ದಿಲ್ಲಿಯಲ್ಲಿ ಮಾತ್ರವೇ ಅಧಿಕಾರಸ್ಥ- ವಿರೋಧಿ ಭಾವನೆಯಿಂದ ತಪ್ಪಿಸಿಕೊಳ್ಳಲು ಕಾಂಗ್ರೆಸ್‌ಗೆ ಸಾಧ್ಯವಾಯಿತು. ಅಲ್ಲಿಯೂ 70 ಸದಸ್ಯರ ಸದನದಲ್ಲಿ ಬಿಜೆಪಿ ತನ್ನ ಬಲವನ್ನು 14 ರಿಂದ 20 ಕ್ಕೇರಿಸಿಕೊಂಡಿದೆ.

ನಕಾರಾತ್ಮಕ ವೋಟು

ಇಲ್ಲಿ ಏಳುವ ಮುಖ್ಯ ಪ್ರಶ್ನೆಯೆಂದರೆ ಹೀಗೆ ಬಹುದೊಡ್ಡ ಜನವಿಭಾಗಗಳು ಕಾಂಗ್ರೆಸ್‌ಗೆ ಕೈಕೊಟ್ಟದ್ದೇಕೆ? ಈ ಎಲ್ಲಾ ವರ್ಷಗಳಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎಯ ಅದೃಷ್ಟ ಇಳಿಮುಖವಾಗಿರುವಾಗ ಬಿಜೆಪಿ ಅದೃಷ್ಟ ಖುಲಾಯಿಸಿದ್ದು ಆ ಪಕ್ಷದ ಜನಪ್ರಿಯತೆ ಇದ್ದಕ್ಕಿದ್ದಂತೆ ಹೆಚ್ಚಿದ್ದರಿಂದ ಅಥವಾ ವಾಜಪೇಯಿ ಸರ್ಕಾರದ ನೀತಿಗಳಿಂದ ಅಲ್ಲ ಎಂಬುದು ಸ್ಪಷ್ಟ. ಈ ಧೋರಣೆಗಳ ಬಗ್ಗೆ ಜನಗಳಲ್ಲಿ ಕಳೆದ ಐದು ವರ್ಷಗಳಲ್ಲಿ ಎಷ್ಟು ಅಸಂತುಷ್ಟಿಯಿತ್ತೋ ಅಷ್ಟೇ ಈಗಲೂ ಇದೆ ಎಂದು ನಂಬಲು ಕಾರಣಗಳಿವೆ. ಬಿಜೆಪಿ ಮುಖಂಡತ್ವಕ್ಕೆ ಕೂಡಾ ಲೋಕಸಭೆಯನ್ನು ವಿಸರ್ಜಿಸಿ ಚುನಾವಣೆ ನಡೆಸಬೇಕೋ ಬೇಡವೋ ಎಂದು ನಿರ್ಧರಿಸಲು ಆಗುತ್ತಿಲ್ಲ. "ಲೋಕಸಭಾ ಚುನಾವಣೆಗಳು ಅವುಗಳ ಸಮಯದಲ್ಲೇ ನಡೆಯುತ್ತವೆ" (ಅಡ್ವಾಣಿ) ಮತ್ತು "ಫೆಬ್ರವರಿಯಲ್ಲಿ ನಿಯಮಿತ ಬಜೆಟ್ ಇರುತ್ತದೆ"(ಜಸ್ವಂತ್ ಸಿಂಗ್) ಎಂಬಂತಹ ಅವರ ಮುಖಂಡರ ಹೇಳಿಕೆಗಳನ್ನು ನೋಡಿದರೆ ತಮ್ಮ ಧೋರಣೆಗಳಿಗೆ ಒಪ್ಪಿಗೆ ದೊರೆಯುತ್ತದೆ ಎಂಬ ಬಗ್ಗೆ ಅವರಿಗೂ ಸಂಪೂರ್ಣ ಧೈರ್ಯವಿದ್ದಂತಿಲ್ಲ. ಅವರು ಎಷ್ಟೇ ಹೇಳಿಕೊಂಡರೂ ಚಂದ್ರಬಾಬು ನಾಯ್ಡು ಕೂಡಾ ಬಿಜೆಪಿಯೊಂದಿಗೆ ತನ್ನ ಅದೃಷ್ಟ ಮಿಲಾಯಿಸಿಕೊಳ್ಳಲು ಸಿದ್ಧರಾಗಿಲ್ಲ. ಇತ್ತೀಚಿನ ವಿಧಾನಸಭಾ ಚುನಾವಣೆಗಳ ಫಲಿತಾಂಶಗಳಿಗೂ ಕಾಯದೆ ಆತ ಸಹಾನುಭೂತಿಯ ಅಂಶದ ಪ್ರಯೋಜನ ಪಡೆಯಲು ಆಂಧ್ರಪ್ರದೇಶ ವಿಧಾನಸಭೆಯನ್ನು ವಿಸರ್ಜಿಸಿದರು.



ಕೃಪೆ : ದಿ ಹಿಂದು

ಬಿಜೆಪಿ ಮೂರು ರಾಜ್ಯಗಳಲ್ಲಿ ಗೆದ್ದದ್ದು ವಾಜಪೇಯಿ ಆಳ್ವಿಕೆಯ ಸಾಧನೆಗಳಿಂದಾಗಿ ಅಲ್ಲ, ನಕಾರಾತ್ಮಕ ವೋಟಿನಿಂದಾಗಿ ಎಂಬುದು ಸ್ವಯಂವೇದ್ಯ. ಅಂದರೆ ತಪ್ಪಿರುವುದು ಈ ರಾಜ್ಯಗಳಲ್ಲಿದ್ದ ಕಾಂಗ್ರೆಸ್ ಸರ್ಕಾರಗಳಲ್ಲೇ.


ಪರ್ಯಾಯ ನೀತಿಗಳಿಲ್ಲ

ಕಾಂಗ್ರೆಸ್‌ನ ಪರಾಭವಕ್ಕೆ ಕಾರಣವೇನು ಎಂಬುದಕ್ಕೆ ಒಂದು ಸಂಕೇತ ಮಧ್ಯಪ್ರದೇಶದಲ್ಲಿ ದಿಗ್ವಿಜಯ್‌ಸಿಂಗ್‌ರ ಹತ್ತು ವರ್ಷಗಳ ಆಳ್ವಿಕೆಯಲ್ಲಿ ಸಿಗುತ್ತದೆ. ಇಲ್ಲಿ ಬಿಜೆಪಿ ಕಾಂಗ್ರೆಸ್ ಸರ್ಕಾರದ ಶೋಚನೀಯ ಆಡಳಿತದ ಪೂರ್ಣ ಪ್ರಯೋಜನ ಪಡೆಯಿತು. ಬಿ.ಸ.ಪಾ(ಬಿಜಲೀ-ಸಡಕ್-ಪಾನೀ ಅಂದರೆ ವಿದ್ಯುತ್-ರಸ್ತೆ-ನೀರಿನ ಅಭಾವ) ಎಂದೇ ಇದು ಕುಖ್ಯಾತವಾಗಿದೆ. ರಾಜ್ಯ ಸರ್ಕಾರ ಜನಗಳ ಸಮಸ್ಯೆಗಳ ಬಗ್ಗೆ ನಿರ್ಲಕ್ಷ್ಯದ ನಿಲುವು ತಳೆಯಿತು. ಕಳೆದ ಐದು ವರ್ಷಗಳಲ್ಲಿ ಅದು ಇನ್ನಷ್ಟು ಹೆಚ್ಚಿತು. ಹೊಸ ಉದ್ಯೋಗಾವಕಾಶಗಳಿರಲಿ, ವರ್ಷಾನುಗಟ್ಟಲೆ ಕೆಲಸ ಮಾಡುತ್ತಿದ್ದ 33 ಸಾವಿರ ತಾತ್ಕಾಲಿಕ ಸರ್ಕಾರಿ ನೌಕರರನ್ನು ತೆಗೆದು ಹಾಕಲಾಯಿತು. ಈ ಕಾಂಗ್ರೆಸ್ ಸರ್ಕಾರ ಹಿಂದಿನ ಬಿಜೆಪಿ ಸರ್ಕಾರಗಳಿಗಿಂತ ಅಥವಾ ಕೇಂದ್ರ ವಾಜಪೇಯಿ ಸರ್ಕಾರಕ್ಕಿಂತ ಹೇಗೂ ಭಿನ್ನವಾಗಿಲ್ಲ ಎಂಬುದನ್ನು ಇದು ತೋರಿಸುತ್ತದೆ.


ಕಳೆದ ಚುನಾವಣೆಗಳಲ್ಲಿ ಮಧ್ಯಪ್ರದೇಶದ ಭಾಗವಾಗಿದ್ದ ಛತ್ತೀಸ್‌ಗಡದಲ್ಲೂ ಸ್ವಲ್ಪ ಮಟ್ಟಿಗೆ ಇದೇ ಕಂಡುಬಂತು. ಬಾಲ್ಕೊ ಖಾಸಗೀಕರಣದ ಬಗ್ಗೆ ಕಾಂಗ್ರೆಸ್ ಮುಖ್ಯಮಂತ್ರಿ ಅಜಿತ್ ಜೋಗಿ ಸಕಾರಾತ್ಮಕ ನಿಲುವು ತಳೆದರೂ ಆ ನಿಲುವು ನೀತಿ-ಆಧಾರಿತವಾಗಿತ್ತು ಎಂದು ಹೇಳುವಂತಿಲ್ಲ. ಆತನಿಗೆ ಖಾಸಗೀಕರಣದ ನೀತಿಯ ಬಗ್ಗೆ ವಿರೋಧವೇನೂ ಇರಲಿಲ್ಲ. ನಿಜ ಸಂಗತಿಯೆಂದರೆ ಶಿವನಾಥ ನದಿ ನೀರನ್ನು ಖಾಸಗೀಕರಿಸಿದ ಮುಖ್ಯಮಂತ್ರಿಯೆಂದೇ ಆತನ ಹೆಸರು ಇತಿಹಾಸದಲ್ಲಿ ದಾಖಲಾಗತ್ತದೆ. ಫಲಿತಾಂಶವೆಂದರೆ ರೈತರನ್ನು ನೀರಾವರಿ ಸೌಲಭ್ಯಗಳಿಂದ ವಂಚಿಸಲಾಯಿತು - ಬಿಜೆಪಿಗಿಂತ ಕಾಂಗ್ರೆಸ್ ಹೇಗೆ ಭಿನ್ನವಾಗಿ ನಡೆಕೊಂಡಿಲ್ಲ ಎಂಬುದಕ್ಕೆ ಇದು ಇನ್ನೊಂದು ಉದಾಹರಣೆ. ದಿಲೀಪ್ ಸಿಂಗ್ ಜುದೇವ್ ಲಂಚ ಪ್ರಕರಣ ಜನರನ್ನು ಅಷ್ಟಾಗಿ ಬಾಧಿಸಿರದಿದ್ದರೆ ಅದಕ್ಕೆ ಕಾರಣ ಜೋಗಿಯವರು. ಆತನಿಗಿಂತ ಸ್ವಚ್ಛ ಎಂದೇನೂ ಹೇಳುವಂತಿಲ್ಲ ಎಂದು ನಂಬಲೂ ಕಾರಣಗಳಿವೆ.

ಇನ್ನು ರಾಜಸ್ತಾನದಲ್ಲಿ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಸ್ವಚ್ಛ ಇಮೇಜ್ ಹೊಂದಿದ್ದರೆಂಬುದು ನಿಜ. ಆದರೆ ಅವರ ಆಡಳಿತ ಗಮನಾರ್ಹವಾದುದೇನನ್ನು ಮಾಡಲಿಲ್ಲ. ಉದಾಹರಣೆಗೆ ವಿದ್ಯುತ್, ನೀರಾವರಿ ಮತ್ತು ಕೃಷಿ ಉತ್ಪನ್ನಗಳ ಬೆಲೆಗಳ ಬಗ್ಗೆ ರೈತರು ಮತ್ತೆ-ಮತ್ತೆ ಚಳುವಳಿ ನಡೆಸಿದರೂ ಸರ್ಕಾರ ಜನತೆಗೆ ಯಾವುದೇ ಗಮನಾರ್ಹ ಪರಿಹಾರ ನೀಡಲು ಮುಂದಾಗಲಿಲ್ಲ. ಭೀಕರ ಕ್ಷಾಮವನ್ನು ಎದುರಿಸಲು ಕೇಂದ್ರ ಸರ್ಕಾರ ನೆರವಾಗಲಿಲ್ಲವಷ್ಟೇ ಅಲ್ಲ ಹೊಲಸು ರಾಜಕೀಯ ನಡೆಸಿತು ಎಂಬುದು ನಿಜ. ಆದರೆ ರಾಜ್ಯ ಸರ್ಕಾರವೂ ಕ್ಷಾಮ ಎದುರಿಸಲು ಪರ್ಯಾಯ ದಾರಿಗಳನ್ನು ಹುಡುಕಲಿಲ್ಲ. ಆದ್ದರಿಂದ ಕೇವಲ ಕೇಂದ್ರವನ್ನು ದೂರುವುದನ್ನು ಜನ ಮೆಚ್ಚಿಕೊಳ್ಳಲಿಲ್ಲ. ಇನ್ನು ಆ ಸರ್ಕಾರಗಳ ಕೆಲವು ಕ್ರಮಗಳು ಜನಗಳನ್ನು ದೂರ ಮಾಡಿದವು. ಎಷ್ಟೆಂದರೆ ಸರ್ಕಾರಿ ನೌಕರರು ಬಹಿರಂಗವಾಗಿಯೇ ಕಾಂಗ್ರೆಸ್‌ಗೆ ವಿರೋಧ ವ್ಯಕ್ತಪಡಿಸಿದರು. ಈ ವಾತಾವರಣದಲ್ಲೇ ಜಾತಿ ಅಂಶ ಪಕ್ಷದ ಬೆನ್ನೆಲುಬು ಮುರಿಯಿತು. ಜಾಟ್ ಜಾತಿಯವರು ಸಂಪೂರ್ಣವಾಗಿ ಬಿಜೆಪಿಗೆ ಮತ ನೀಡಿದರು.

ದಿಲ್ಲಿಯಲ್ಲಿ ಬೇರೆ ರಾಜ್ಯಗಳಂತೆ ಕಾಂಗ್ರೆಸ್ ದುಷ್ಕರ್ಮಫಲ ಉಣ್ಣಬೇಕಾಗಿ ಬಂದಿರದಿದ್ದರೆ ಅದಕ್ಕೆ ಕಾರಣ ಅದರ ಕೆಲಸದ ದಾಖಲೆಯೇನಲ್ಲ. ದಿಲ್ಲಿಯಲ್ಲಿ ವಿದ್ಯುತ್ ವಿತರಣೆ ಖಾಸಗೀಕರಣ, ಟಾಟಾ, ಅಂಬಾನಿಗಳಿಗಷ್ಟೇ ಪ್ರಯೋಜನ ತಂದಿತು. ಜನಗಳಿಗೆ ಸಮಸ್ಯೆಗಳನ್ನೇ ಸೃಷ್ಟಿಸಿತು. ರಾಜ್ಯ ಸರ್ಕಾರ ನೀರು ಪೂರೈಕೆ ಮತ್ತಿತರ ಸೇವೆಗಳನ್ನು ಖಾಸಗೀಕರಿಸುವ ಯೋಜನೆಯಲ್ಲಿತ್ತು. ಈ ವಿಚಾರಗಳಲ್ಲಿ ಅದು ವಾಜಪೇಯಿ ಸರ್ಕಾರಕ್ಕಿಂತ ಭಿನ್ನವಾಗಿಯೇನೂ ಕಾಣಿಸಲಿಲ್ಲ.



ಉಮಾಭಾರತಿ



ವಸುಂಧರಾ ರಾಜೆ


ಆದರೂ ಅದು ಅಧಿಕಾರಸ್ಥರ ಬಗ್ಗೆ ಇರುವ ವಿರೋಧದ ಭಾವನೆಯಿಂದ ತಪ್ಪಿಸಿಕೊಂಡಿತು. ಏಕೆಂದರೆ ಈ ವಿರೋಧದ ಭಾವನೆ ಕೇಂದ್ರ ಸರ್ಕಾರದ ವಿರುದ್ಧ ಕೆಲಸ ಮಾಡಿತು. ಗುಡಿಸಲುಗಳನ್ನು ಕೆಡಹುವ ವ್ಯಾಪಕ ಕ್ರಮಗಳು, ಫ್ಯಾಕ್ಟರಿಗಳ ಮುಚ್ಚಿಕೆ, ಲಕ್ಷಾಂತರ ಕಾರ್ಮಿಕರ ರಿಟ್ರೆಂಚ್‌ಮೆಂಟ್ ಅಥವಾ ದೇಶದ ರಾಜಧಾನಿಯ ಹದಗೆಡುತ್ತಿರುವ ಕಾನೂನು-ವ್ಯವಸ್ಥೆ, ಇವುಗಳಿಂದ ಕೇಂದ್ರ ಸರ್ಕಾರದ ಬಗ್ಗೆ ಆದಾಗಲೇ ಮತದಾರರಲ್ಲಿ ವಿರೋಧದ ಭಾವನೆ ಹಬ್ಬಿತ್ತು. ಅವರು ಆ ಸರ್ಕಾರಕ್ಕೆ ನೇತೃತ್ವ ನೀಡುವ ಪಕ್ಷದ ವಿರುದ್ಧ ಪ್ರಚಂಡವಾಗಿ ಮತ ನೀಡಿದರು. ದಿಲ್ಲಿಯ ಜನಸಂಖ್ಯೆ ದೊಡ್ಡ ವಿಭಾಗವಾದ ಮಧ್ಯಮ ವರ್ಗಗಳೂ ಯುಟಿಐ ಹಗರಣ, ಪಿ.ಎಫ್. ಮೇಲೆ ಸೇರಿದಂತೆ ಎಲ್ಲಾ ಕಡೆ ಬಡ್ಡಿದರ ಇಳಿಕೆ ಇತ್ಯಾದಿಗಳಿಂದ ದೂರ ಸರಿದಿದ್ದವು. ಇದು ಎಷ್ಟರ ಮಟ್ಟಿಗೆ ಇತ್ತೆಂದರೆ ಜನ ನೀರು, ವಿದ್ಯುತ್ ಖಾಸಗೀಕರಣ, ಅಂದರಿಂದಾದ ತೊಂದರೆಗಳನ್ನು ಮರೆತರು. ಮೇಲು ಸೇತುವೆಗಳು, ಮೆಟ್ರೋ ರೈಲು ಇತ್ಯಾದಿ ನಿರ್ಮಾಣಗಳ ಕೀರ್ತಿ ಶೀಲಾ ದೀಕ್ಷಿತ್ ಸರ್ಕಾರಕ್ಕೆ ದೊರೆಯಿತು.

ಅಭಿವೃದ್ಧಿ ಪ್ರಶ್ನೆ ಮಾತ್ರವೇ ಅಲ್ಲ

ಫಲಿತಾಂಶಗಳು ಬಂದ ಮೇಲೆ ಬಿಜೆಪಿ ಮುಖಂಡರು ಈ ಚುನಾವಣೆಗಳಲ್ಲಿ ಅಭಿವೃದ್ಧಿ ಪ್ರಶ್ನೆಯ ಮೇಲೆ ನಡೆದವು ಎಂದು ಹೇಳಲಾರಂಬಿಸಿದರು. ಮಾಧ್ಯಮ ಒಂದು ವಿಭಾಗ ಕೂಡಾ ಬಿಜೆಪಿ ವಿವಾದಾತ್ಮಕ ವಿಷಯಗಳನ್ನು ಬದಿಗಿಟ್ಟುದದರಿಂದ ಪ್ರಯೋಜನ ಪಡೆಯಿತು ಎಂಬ ವಾದವನ್ನು ಮುಂದಿಟ್ಟಿವೆ. ಇದು ಕೇವಲ ಮೇಲ್ನೋಟಕ್ಕೆ ಕಾಣುವ ಅಂಶ.

ಇಲ್ಲಿ ಮೂರು ಅಂಶಗಳು ಗಮನಾರ್ಹ. ಮೊದಲನೆಯದಾಗಿ, ಅಯೋಧ್ಯೆಯಲ್ಲಿ ದೇವಸ್ಥಾನ ನಿರ್ಮಿಸುವ ಬಗ್ಗೆ ಸಿಟ್ಟನ್ನು ನಟಿಸುತ್ತಾ ವಿಹೆಚ್‌ಪಿ ಮುಖಂಡರು ಈ ಚುನಾವಣೆಯಲ್ಲಿ ಪ್ರಚಾರ

ಪುಟ 10ಕ್ಕೆ



ಆಂಧ್ರಕ್ಕೆ ಉದಾರೀಕರಣ ತರುತ್ತಿರುವ ಗೋಳು

ಕೆಚ್ಚಲು ಕೊಯ್ಯುವವರ ಚಡಪಡಿಕೆ

ಕೇಂದ್ರದ ಯೋಜನಾ ಆಯೋಗದ ಉಪಾಧ್ಯಕ್ಷ ಕೆ.ಸಿ.ಪಂತ್ ಮಹಾಶಯರಿಗೆ ಈ ಚಡಪಡಿಕೆ ಉಂಟಾಗಿದೆ. ಸಾರ್ವಜನಿಕ ವಲಯದ ಉದ್ದಿಮೆಗಳ ಮಾರಾಟ ಬಹಳ ನಿಧಾನವಾಗಿ ಆಗುತ್ತಿದೆ ಎಂಬುದೇ ಅವರ ದೂರು. ಈ ವರ್ಷದ ಗುರಿಯನ್ನು ಮುಟ್ಟಲಾಗಿಲ್ಲ ಎಂಬುದೇ ಅವರ ಕೊರಗು.


ಸಾರ್ವಜನಿಕ ವಲಯದ ಘಟಕಗಳಲ್ಲಿ ಕೆಲವು ಮೂಲಭೂತ ದೋಷಗಳಿರುವುದರಿಂದಲೇ ಅವುಗಳ ಖಾಸಗೀಕರಣ ಮಾಡಲಾಗುತ್ತಿದೆ ಎಂದು ಅವರ ಅಂಬೋಣ. ಇಂತಹ ಖಾಸಗೀಕರಣದಿಂದ ಎಂತಹ ಲಾಭ, ಯಾರಿಗೆ ಆಗಿದೆ ಎಂದು ಕೇಳಿಕೊಂಡರೆ ವಿಷಯ ಸ್ಪಷ್ಟವಾಗುತ್ತದೆ. ಸರ್ಕಾರೀ ಸ್ವಾಮ್ಯದ (ಅಂದರೆ ಜನತೆಯ) ಆಸ್ತಿಯನ್ನು ಮೂರು ಕಾಸಿಗೆ ಖಾಸಗಿಯವರಿಗೆ ಮಾರುವುದೇ ಈ ಪ್ರಕ್ರಿಯೆಯ ಉದ್ದೇಶ. ಈ ಖಾಸಗಿ ಬಂಡವಾಳಿಗ ಸರ್ಕಾರದ ಅಧಿಕಾರಿ/ ಮಂತ್ರಿ/ ರಾಜಕಾರಣಿಗಳಿಗೆ ತನ್ನ ಲಾಭದ ಒಂದು ಭಾಗವನ್ನು ಕೊಡುತ್ತಾನೆಂಬುದು ಈ ಪ್ರಕ್ರಿಯೆಯ ಇನ್ನೊಂದು ಪ್ರಚೋದಕ ಅಂಶ.

ಖಾಸಗಿಯವರ ಕೈಯಲ್ಲೂ ಸಹಸ್ರಾರು ರೋಗಗ್ರಸ್ತ ಉದ್ದಿಮೆಗಳಿವೆ ಎಂಬುದನ್ನು ಅವರು ಮರೆಮಾಚುತ್ತಾರೆ.

ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಭಾರತದ ಅತ್ಯಂತ ಉದಾರೀಕರಣವಾದಿ ಮುಖ್ಯಮಂತ್ರಿ ಎಂದು ಹೆಸರು ಪಡೆದಿದ್ದಾರೆ. ಅತ್ಯಂತ ತಂತ್ರಜ್ಞಾನಪರ ಮುಖ್ಯಮಂತ್ರಿ ಎಂಬ ಹೆಸರೂ ಅವರದೇ. ಭಾರತದ ವಿವಿಧ ರಾಜ್ಯಗಳಲ್ಲಿ ಐಎಂಎಫ್ ಮತ್ತು ವಿಶ್ವಬ್ಯಾಂಕ್‌ಗಳ ನಿರ್ದೇಶನಗಳನ್ನು ಚಾಚೂ ತಪ್ಪದೇ ಪಾಲಿಸಿ ಅತ್ಯಂತ ವೇಗದಲ್ಲಿ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಗಳನ್ನು ಅನುಷ್ಠಾನಗೊಳಿಸ ಹೊರಟಿರುವ ಸರದಾರರೂ ಅವರೇ. ನಮ್ಮ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರಿಗೂ ಈ ಹೆಸರಿದೆ.

ಆದರೆ ಈ ಉದಾರೀಕರಣ, ಖಾಸಗೀಕರಣ, ಜಾಗತೀಕರಣಗಳು ಎಂತಹ ಲಾಭವನ್ನು ಆ ರಾಜ್ಯಕ್ಕೆ ತಂದುಕೊಡುತ್ತಿವೆ? ಅತ್ಯಂತ ಹಣಕಾಸು ಒತ್ತಡ ಅನುಭವಿಸುತ್ತಿರುವ ರಾಜ್ಯ ಇದು ಎಂಬುದು ಈಗ ಗೊತ್ತಾಗಿದೆ. ಆ ರಾಜ್ಯದ ಹಣಕಾಸು ಖೋತಾ 2002-03 ರಲ್ಲಿ 7499 ಕೋಟಿ ರೂಪಾಯಿಗಳಷ್ಟಾಗಿದ್ದು ಇದು ರಾಜ್ಯದ ಒಟ್ಟು ಉತ್ಪಾದನೆಯ ಶೇ 4.7 ರಷ್ಟು. 1997-98 ರಲ್ಲಿ ಇದು ಶೇ. 2.5 ರಷ್ಟಿತ್ತು. ಕಳೆದ ಸಾಲಿನಲ್ಲಿ ಐದು ಬಾರಿ ತನ್ನ ಆದಾಯಕ್ಕಿಂತ ಹೆಚ್ಚು ಖರ್ಚು ಮಾಡಬೇಕಾದ ಪರಿಸ್ಥಿತಿ ಬಂದದ್ದು ಈ ಸಾರಿ ಈಗಾಗಲೇ ಒಂದು ಸಾರಿ ಇಂತಹ ಪರಿಸ್ಥಿತಿಯನ್ನು ಅದು ಅನುಭವಿಸಿದೆಯಂತೆ.

ತನ್ನ 128 ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಖಾಸಗೀಕರಿಸಿರುವ ಈ ರಾಜ್ಯ



ಈಗ ಇನ್ನೂ 79 ಸಾರ್ವಜನಿಕ ವಲಯದ ಘಟಕಗಳನ್ನು ಖಾಸಗೀಕರಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ.

ನೀರಿನ ದರಗಳನ್ನು ಆಗಲೇ ಈ ರಾಜ್ಯ ಮೂರು ಬಾರಿ ಹೆಚ್ಚಿಸಿದೆ. ವಿಶ್ವಬ್ಯಾಂಕಿನ ನಿರ್ದೇಶನದಂತೆ ವಿದ್ಯುತ್ ನಿಗಮವನ್ನು ಒಡೆದು ಹಲವು ನಿಗಮಗಳನ್ನಾಗಿ ವಿಂಗಡಿಸಿ ನಡೆಸಿದರು. ಈ ನಿಗಮಗಳ ಒಟ್ಟು ನಷ್ಟ 2300 ಕೋಟಿ ರೂಪಾಯಿಗಳಿಗೆ ಏರಿದೆ. ಇದು ಆ ರಾಜ್ಯದ ಹಣಕಾಸು ಖೋತಾದ ಅರ್ಧದಷ್ಟಂತೆ.

ಹೀಗೆ ಉದಾರೀಕರಣದ ಹರಿಕಾರನೆನಿಸಿರುವ ಈ ರಾಜ್ಯ ತನ್ನ ಜನತೆಗೆ ತೀವ್ರ ನೋವನ್ನೇ ನೀಡಿದೆ. ಕಳೆದ ಬೇಸಿಗೆಯಲ್ಲಿ ಬಿಸಿಲಿನ ಧಗೆಯಿಂದಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಬಡಜನರು ಈ ರಾಜ್ಯದಲ್ಲೇ ಸತ್ತಿರುವುದು. ಒಂದು ಕಡೆ ತಂತ್ರಜ್ಞಾನದ ವೈಭವೀಕರಣ ಇನ್ನೊಂದೆಡೆ ಬಡ ಜನರ ಸಾವುನೋವು. ಇದು ಈ ರಾಜ್ಯದ ವೈಪರೀತ್ಯ.

ಹೈದ್ರಾಬಾದ್ ನಗರವನ್ನು ಆಗಾಗ ಸಂದರ್ಶಿಸುವವರು ಈ ನಗರದಲ್ಲಿ ಆಗಿರುವ ಮಾರ್ಪಾಡುಗಳನ್ನು ಗಮನಿಸಿರಬಹುದು. ಹಲವು ರಸ್ತೆಗಳನ್ನು ಉತ್ತಮಗೊಳಿಸಲಾಗಿದೆ. ಮೋಟಾರುಗಳ ಓಡಾಟಕ್ಕೆ ಅವು ಚೆನ್ನಾಗಿವೆ. ಆದರೆ ಬಡಜನ ಸಾಮಾನ್ಯ ರಸ್ತೆ ದಾಟಲು ಹೊರಟರೆ ಪ್ರಾಣಾಪಾಯ ಖಂಡಿತ. ಹೀಗೆ ಅಲ್ಲಿ ಜನ ಸಾಮಾನ್ಯರ ಅವಶ್ಯಕತೆಗಳಿಗೆ ತಿಲಾಂಜಲಿ ನೀಡಿ ಶ್ರೀಮಂತರ ಅನುಕೂಲಗಳನ್ನು ನೋಡಿಕೊಳ್ಳಲಾಗಿದೆ. ಜೀವನವೆಚ್ಚ ಅಗಾಧವಾಗಿ ಹೆಚ್ಚಿದೆ.

ಶ್ರೀಮಂತರಿಗೂ ಹೊರೆಯನ್ನು ಹೇರಲಾಗಿಲ್ಲವೆಂದಲ್ಲ. ಕರಗಳನ್ನು ಹೆಚ್ಚಿಸಲಾಗಿದೆ. ಉದಾಹರಣೆಗೆ ವಾಹನ ಕಾಯಿದೆ ನಿಯಮಗಳನ್ನು ಮುರಿದವರಿಗೆ ಅತ್ಯಂತ ಹೆಚ್ಚಿನ ದಂಡ ಹಾಕಲಾಗುತ್ತಿದೆ. ಇಲ್ಲಿ ಭ್ರಷ್ಟಾಚಾರವೂ ಹೆಚ್ಚಿದೆ. ಶ್ರೀಮಂತರರು ಇದನ್ನು ಬೇರೆಯವರಿಗೆ ದಾಟಿಸಿಯಾರು. ಬಡ ಜನ ಸಾಮಾನ್ಯರು ಅನುಭವಿಸಲೇಬೇಕು.. ಹೀಗಿದೆ ಉದಾರೀಕರಣ ತರುತ್ತಿರುವ ಸುಖಗಳು.


.....ವಿಧಾನಸಭಾ ಚುನಾವಣೆಗಳು

ಪುಟ 9 ರಿಂದ

ನಡೆಸುವುದಿಲ್ಲ ಎಂದು ಬಹಿರಂಗವಾಗಿ ಪ್ರಕಟಿಸಿದ್ದರು.ಆದರೆ ನಿಜ ಸಂಗತಿಯೆಂದರೆ ಅವರು ಬಿಜೆಪಿ ಪರ ಪ್ರಚಾರ ನಡೆಸಿದರು. ಎರಡನೆಯದಾಗಿ, ಗುಜರಾತಿನ ಗಡಿಗೆ ಹೊಂದಿಕೊಂಡಿರುವ ರಾಜಸ್ತಾನ ಮತ್ತು ಮಧ್ಯಪ್ರದೇಶದ ಪ್ರದೇಶಗಳಲ್ಲಿ ಅಲ್ಪಸಂಖ್ಯಾತರ ವಿರುದ್ಧ ನರೇಂದ್ರಮೋದಿಯ ದೂಷಣಾ ಪ್ರವಾಹ ಇತ್ತು. ಕೊನೆಯದಾಗಿ, ಸಾಕಷ್ಟು ಪ್ರಮಾಣದಲ್ಲಿ ಬುಡಕಟ್ಟು ಜನರಿರುವ ಮಧ್ಯಪ್ರದೇಶ, ರಾಜಸ್ತಾನ, ಛತ್ತೀಸ್‌ಗಡದಲ್ಲಿ ಬುಡಕಟ್ಟು ಪ್ರದೇಶಗಳಲ್ಲಿ ಆರ್‌ಎಸ್‌ಎಸ್ ಹತೋಟಿಯ ವನವಾಸಿ ಕಲ್ಯಾಣ ಸಂಘ 'ಹಿಂದೂ' ಬುಡಕಟ್ಟು ಜನಗಳನ್ನು 'ಕ್ರಿಶ್ಚಿಯನ್' ಬುಡಕಟ್ಟು ಜನಗಳ ವಿರುದ್ಧ ಎತ್ತಿ ಕಟ್ಟಲು ಪ್ರಯತ್ನಿಸಿತು. ಈ ಧೃವೀಕರಣ ಪ್ರಯತ್ನಕ್ಕೂ ಸ್ವಲ್ಪಮಟ್ಟಿನ ಯಶಸ್ಸು ದೊರೆಯಿತು. ಒಟ್ಟಿನಲ್ಲಿ ಸಂಘ ಪರಿವಾರ ಹಿಂದುತ್ವವನ್ನು ಪಕ್ಕಕ್ಕೆ ಸರಿಸಿಲ್ಲ ಎಂಬುದನ್ನು ಇವೆಲ್ಲಾ ತೋರಿಸುತ್ತದೆ.

ಆರ್‌ಎಸ್‌ಎಸ್ ಅಂತೂ ಫಲಿತಾಂಶ ಪ್ರಕಟವಾದ ದಿನವೇ ಈ ಚುನಾವಣೆಗಳಲ್ಲಿ ಹಿಂದುತ್ವದ ವೇದಿಕೆ ಜಯಶಾಲಿಯಾಗಿದೆ ಎಂದು ಹೇಳಿಕೆಯನ್ನೇ ನೀಡಿತು. ಇದು ಸರಿಯೋ ಎಂಬುದನ್ನು ಪ್ರಶ್ನಿಸಬಹುದಾದರೂ ಈ ಪರಿವಾರದ 'ಯಜಮಾನನ ಯೋಜನೆಯೇನು ಎಂಬುದನ್ನಂತೂ ಇದು ತೋರಿಸುತ್ತದೆ.

ಜನ ತಮಗೆ ಅಭಿವೃದ್ಧಿ ಪ್ರಶ್ನೆಗಳ ಮೇಲೆ ಮತ ನೀಡಿದರು ಎಂಬ ಬಿಜೆಪಿ ಮುಖಂಡರ ಅಭಿಪ್ರಾಯ ಮುಗ್ಧ ಹೇಳಿಕೆಗಳೇನಲ್ಲ. ಹೀಗೆ ಹೇಳುವ ಮೂಲಕ ತಮ್ಮ ರಾಷ್ಟ್ರ-ವಿರೋಧಿ ಉದಾರೀಕರಣ-ಖಾಸಗೀಕರಣ-ಜಾಗತೀಕರಣ ನೀತಿಗಳಿಗೆ ಜನರ ಅನುಮೋದನೆ ದೊರೆತಿದೆ ಎಂದು ಬಿಂಬಿಸುವ ಪ್ರಯತ್ನವನ್ನು ಅವರು ನಡೆಸಿದ್ದಾರೆ. ದೇಶದ ಎಲ್ಲಾ ಮೂಲೆಗಳಲ್ಲೂ ಈ ನೀತಿಗಳ ಬಗ್ಗೆ ಸರ್ವಾನುಮತಿಯಿದೆ ಎಂದು ಕಾಣುವ ಅವರ ಕನಸಿನ ಭಾಗವಿದು. ಹಿಂದುತ್ವ ಈಗ ಒಂದು ಪ್ರಶ್ನೆ ಅಲ್ಲ ಎನ್ನುವಾಗ ಜನರಿಗೆ ಅವರ ಸಲಹೆಯೆಂದರೆ ನೀವು ಸಂಘ ಪರಿವಾರದ ಕರಾಳ ಕೃತ್ಯಗಳನ್ನು ಮರೆಯಬೇಕು, ಬಾಬ್ರಿ ಮಸೀದಿ ಧ್ವಂಸವನ್ನು ಮರೆಯಬೇಕು, ಗುಜರಾತಿನಲ್ಲಿ ಮುಸ್ಲಿಮ ಸಂಹಾರವನ್ನು ಮರೆಯಬೇಕು ಇತ್ಯಾದಿ. ನಿಜ, ಇತ್ತೀಚಿನ ವಿಜಯ ಅವರಿಗೆ ಈ ಬಗ್ಗೆ ಬಡಾಯಿ ಕೊಚ್ಚಿಕೊಳ್ಳಲು, ಉಪದೇಶಗಳನ್ನು ಉದುರಿಸಲು ಅವಕಾಶ ಮಾಡಿಕೊಟ್ಟಿದೆ. ಆದರೆ ಜನ ನಿಜವಾಗಿಯೂ ಈ ಪರಿವಾರದ ಕುಕೃತ್ಯಗಳನ್ನು ಮರೆತಿದ್ದಾರೆಯೇ? ಅವರು ತಾವೇ ಇದನ್ನು ಕೊಡಲಿದ್ದಾರೆ.


ದಿಗ್ವಿಜಯ್ ಸಿಂಗ್ ಅಜಿತ್ ಜೋಗಿ

ಸಂಘ ಪರಿವಾರದ ನಿಜವಾದ ಮುಖದ ಬಗ್ಗೆ ಇನ್ನೂ ಯಾರಿಗಾದರೂ ಸಂದೇಹಗಳಿದ್ದರೆ ಉಮಾಭಾರತಿ ಮತ್ತು ವಸುಂಧರ ರಾಜೇ ತಮ್ಮ ಪ್ರತಿಜ್ಞಾ ಸ್ವೀಕಾರ ಸಮಾರಂಭಗಳನ್ನು ಕಾವೀ ಜಾತ್ರೆಗಳಾಗಿ ಮಾಡಿದ್ದನ್ನು ನೋಡಬೇಕು.

ಕಾಂಗ್ರೆಸೆ ವಿಫಲವಾದದ್ದೇಕೆ?

ಒಂದಂತೂ ನಿಜ, ಹಿಂದಿನ ಗುಜರಾತ್ ಚುನಾವಣೆಗಳಂತೆ ಮಧ್ಯಪ್ರದೇಶದಲ್ಲೂ ಕಾಂಗ್ರೆಸ್‌ನ ಮೃದು ಹಿಂದುತ್ವದ ವೇದಿಕೆ ಫಲ ನೀಡಲಿಲ್ಲ, ಬದಲಿಗೆ ತಿರುಗೇಟು ಹೊಡೆಯಿತು. ಸಂಘ ಪರಿವಾರದ ನಕಲು ಮಾಡಿ ಕಾಂಗ್ರೆಸ್ ಅದನ್ನು ಸೋಲಿಸುವ ನಿರೀಕ್ಷೆಯಿಟ್ಟುಕೊಳ್ಳುವಂತಿಲ್ಲ ಎಂಬುದು ಸ್ಪಷ್ಟ. ಕಾವಿ ಪಡೆಗಳಿಂದ ತಮ್ಮನ್ನು ಅವರು ಪ್ರತ್ಯೇಕಿಸಿಕೊಳ್ಳುವ ಅಗತ್ಯವನ್ನು ಇದು ಇನ್ನೂ ತೀಕ್ಷ್ಣವಾಗಿ ತೋರಿಸಿಕೊಟ್ಟಿದೆ.

ಆದರೆ ಹೀಗೆ ಪ್ರತ್ಯೇಕಿಸಿಕೊಳ್ಳುವ ಕೆಲಸ ನೀತಿಗಳು ಮತ್ತು ಪ್ರಶ್ನೆಗಳ ಮೇಲೆ ನಡೆಯದಿದ್ದರೆ ಅದರಿಂದೇನೂ ಪ್ರಯೋಜನವಿಲ್ಲ. ಮಧ್ಯಪ್ರದೇಶ ಮತ್ತು ಛತ್ತೀಸಗಡದ ಕಾಂಗ್ರೆಸ್ ಸರ್ಕಾರಗಳು ವಿಫಲವಾದದ್ದು ಇಲ್ಲೇ. ರಾಜ್ಯಮಟ್ಟದ ಸಾಮಂತರು ತಮಗೆ ಮನಬಂದಂತೆ ಕೆಲಸ ಮಾಡುವಾಗ ಕಾಂಗ್ರೆಸ್ ಹೈಕಮಾಂಡ್ ಮೂಕ ಪ್ರೇಕ್ಷಕನಂತಿದ್ದದ್ದು ಇನ್ನಷ್ಟು ಪರಿಣಾಮಕಾರಿಯಾಯಿತು. ನಮ್ಮ ರಾಜಕಾರಣ ಎಂತಹ ಅವನತಿ ಹೊಂದಿದೆ ಎಂದರೆ ಕಾಂಗ್ರೆಸ್ ಮುಖ್ಯಮಂತ್ರಿಗಳೂ ಜನರಿಗೆ ಉತ್ತಮ ಆಡಳಿತ ನೀಡುವುದರ ಮೇಲೆ ಅವಲಂಬಿಸುವ ಬದಲು ಪರ್ಯಾಂತರವನ್ನು ಅವಲಂಬಿಸಿದ್ದಾರೆ. ಹೀಗಿರುವಾಗ ಜನರ ನೆನಪಿನಲ್ಲಿ ಇನ್ನೂ ಹಸಿರಾಗಿರುವ ಹಗರಣಗಳಿಂದಲೂ ಪ್ರಯೋಜನ ಪಡೆಯಲು ಅವರಿಗೆ ಸಾಧ್ಯವಿಲ್ಲವಾಗಿದ್ದರೆ ಅದರಲ್ಲಿ ಆಶ್ಚರ್ಯವಿಲ್ಲ.

ಹೀಗೆ ಜನಗಳಿಗೆ ಪರಿಹಾರ ಒದಗಿಸುವಲ್ಲಿ ಪರ್ಯಾಯ ನೀತಿಗಳನ್ನು ಅನುಸರಿಸುವಲ್ಲಿ ಕಾಂಗ್ರೆಸ್ ಸರ್ಕಾರಗಳ ವಿಫಲತೆ, ಜತೆಗೆ ರಾಷ್ಟ್ರೀಯ ಐಕ್ಯತೆಯ ಬಹುಮುಖ್ಯ ಪ್ರಶ್ನೆಗಳ ಮೇಲೆ ಹೋರಾಡುವಲ್ಲಿ ಆ ಪಕ್ಷದ ವಿಫಲತೆ ಈ ಭಾರೀ ಪರಾಭವಕ್ಕೆ ಪ್ರಮುಖ ಕಾರಣಗಳು. ಅದೇ ವೇಳೆಗೆ ಕಾವಿಪಡೆಗಳನ್ನು ತಾನು ಏಕಾಂಗಿಯಾಗಿ ಎದುರಿಸಬಲ್ಲೆ ಎಂಬ ಅದರ ಮೇರೆಮೀರಿದ ಆತ್ಮವಿಶ್ವಾಸದ ನಿಲುವಿನ ಪರಿಣಾಮವನ್ನು ಅದು ಅನುಭವಿಸಬೇಕಾಯಿತು. ಪಂಚಮಡಿಯಲ್ಲಿ ಬಹಿರಂಗವಾಗಿ ಅದನ್ನು ಹೇಳಿದಾಗಲೇ ಅದು ಪರಿಣಾಮ ಅನುಭವಿಸಬೇಕಾಯಿತು. ನಂತರವೂ ಈಗ ಸಮ್ಮಿಶ್ರ ಸರ್ಕಾರಗಳ ಯುಗ ಆರಂಭವಾಗಿದೆ, ಇನ್ನೂ ಸ್ವಲ್ಪ ಸಮಯ ಅದು ಮುಂದುವರೆಯುತ್ತದೆ ಎಂಬ ಅಂಶವನ್ನು ಅರಿಯಲು ಅದು ವಿಫಲವಾಯಿತು. ಅತ್ತ ಬಿಜೆಪಿಗೆ ಇದು ಬೇಗನೆ ಮನವರಿಕೆಯಾಯಿತು. ಐದು ವರ್ಷಗಳ ಸಾಕಷ್ಟು ಹೊಡೆತಗಳನ್ನು ತಿಂದ ಮೇಲೆ ಕಾಂಗ್ರೆಸ್ ಪಾಠ ಕಲಿಯಿತು. ತನ್ನ ಸಿಮ್ಲಾ ಸಭೆಯಲ್ಲಿ ಅದು ಸಮಾನಮನಸ್ಕ ಪಕ್ಷಗಳೊಂದಿಗೆ ತಿಳುವಳಿಕೆಗೆ ಬರಲು ತಾನು ಸಿದ್ಧ ಎಂದಿತು. ಅಷ್ಟರವರೆಗೆ ಪರವಾಯಿಲ್ಲ. ಆದರೆ ಈ ವಿಚಾರವನ್ನು ಚುನಾವಣಾ ಕಾರ್ಯತಂತ್ರವಾಗಿ ಪರಿವರ್ತಿಸುವಲ್ಲಿ ಅದು ವಿಫಲವಾಯಿತು. ಅದರ ಫಲಿತಾಂಶ ಕಣ್ಣೆದುರಿಗೇ ಇದೆ. ಟೈಂಸ್ ಆಫ್ ಇಂಡಿಯಾದ ಒಂದು ಲೆಕ್ಕಾಚಾರದ ಪ್ರಕಾರ ಎನ್‌ಸಿಪಿ ಮತ್ತು ಇತರ ಪಕ್ಷಗಳು ಛತ್ತೀಸ್ ಗಡ್‌ನಲ್ಲಿ ಕಾಂಗ್ರೆಸ್ ಮತಗಳನ್ನು ಸೆಳೆದುಕೊಳ್ಳದಿದ್ದರೆ ಕಾಂಗ್ರೆಸ್‌ಗೆ 37 ಸ್ಥಾನಗಳ ಬದಲು 45 ರಿಂದ 52 ಸ್ಥಾನಗಳು ದೊರೆಯುತ್ತಿದ್ದವು. ಇದೇ ರೀತಿಯಾಗಿ ಮಧ್ಯಪ್ರದೇಶದಲ್ಲಿ ಸರ್ಕಾರ ರಚಿಸಲಾಗದಿದ್ದರೂ ಬಿಜೆಪಿ ಬಲವನ್ನು 120 ಕ್ಕೆ ಇಳಿಸಬಹುದಿತ್ತು. ರಾಜಸ್ತಾನದಲ್ಲಿ ಕಾಂಗ್ರೆಸ್ ಸಮ್ಮಿಶ್ರ ರಾಜಕಾರಣದ ನೀತಿಗಳನ್ನು ಅನುಸರಿಸಿದ್ದರೆ ಬಿಜೆಪಿಯ ಬಲವನ್ನು 91 ಕ್ಕೆ ನಿಲ್ಲಿಸಬಹುದಿತ್ತು. ದಿಲ್ಲಿಯಲ್ಲಿ ಅನ್ಯ ಬಿಜೆಪಿಯೇತರ ಪಕ್ಷಗಳು ಅದರ ಮತಗಳನ್ನು ಸೆಳೆದದ್ದರಿಂದ ಕನಿಷ್ಠ 4 ಸ್ಥಾನಗಳನ್ನು ಕಳೆದುಕೊಂಡಿತು. ಈ ಬಿಜೆಪಿಯೇತರ ಸಣ್ಣ ಪಕ್ಷಗಳೂ ಕೋಮುವಾದಿ ಬಿಜೆಪಿಯನ್ನು ಸೋಲಿಸುವ ಬದಲು ಕಾಂಗ್ರೆಸ್‌ಗೆ ತೊಂದರೆಯುಂಟು ಮಾಡುವಲ್ಲೇ ಹೆಚ್ಚು ಗಮನ ಕೇಂದ್ರೀಕರಿಸಿದವು.

ಕಾಂಗ್ರೆಸ್‌ನ ಭವಿಷ್ಯ ಈ ಎಲ್ಲಾ ಗಹನ ಪ್ರಶ್ನೆಗಳ ಮೇಲೆ ನಿಂತಿದೆ. ಸದ್ಯಕ್ಕೆ ಅದರ ಕಾರ್ಯಕಾರಿ ಸಮಿತಿ ಎರಡು ದಿನಗಳ ಸಭೆ ನಡೆಸಿದರೂ ಕಾರ್ಯನಿರ್ವಹಣೆಯ ಬಗ್ಗೆ ಸ್ವ ಮೌಲ್ಯಮಾಪನಕ್ಕಿಳಿದಿಲ್ಲ. ಆ ಕೆಲಸವನ್ನು ಒಂದು ಸಮಿತಿಗೆ ಒಪ್ಪಿಸಿದೆ. ಆ ಸಮಿತಿ ಕೊನೆಯದಾಗಿ ಏನೇ ಹೇಳಲಿ, ಕಾಂಗ್ರೆಸ್ ಈಗಿನ ರೀತಿಯಲ್ಲೇ ಮುಂದುವರೆದರೆ ಅದು ಇನ್ನಷ್ಟು ಅನಾಹುತಗಳನ್ನು ಕಾಣಲಿದೆ ಎಂಬುದು ನಿಸ್ಸಂದೇಹ.

ಜಾರ್ಜಿಯಾದಲ್ಲೊಂದು ಕ್ಷಿಪ್ರಕ್ರಾಂತಿ

ಜಾರ್ಜಿಯಾ ಮಾಜಿ ಸೋವಿಯತ್ ಒಕ್ಕೂಟದ ಭಾಗವಾಗಿದ್ದ ದೇಶ. ಇತ್ತೀಚೆಗೆ ಅಲ್ಲಿ ಚುನಾವಣೆ ನಡೆದು ಹಿಂದಿನ ಅಧ್ಯಕ್ಷ ಶೆವರ್‌ನಾದ್‌ಝೆ ಪುನರಾಯ್ಕೆಯಾಗಿದ್ದ. ಆ ಚುನಾವಣೆಯಲ್ಲಿ ಮೋಸ ನಡೆದಿದೆ ಎಂದು ವಿರೋಧ ಪಕ್ಷಗಳು ತೀವ್ರ ಚಳುವಳಿ ನಡೆದು ಅಧ್ಯಕ್ಷರು ರಾಜೀನಾಮೆ ಕೊಡಬೇಕಾಗಿ ಬಂದಿದೆ. ಕನಿಷ್ಟ ಹಾಗಂತ ವರದಿಯಾಗಿತ್ತು. ಆದರೆ ಆಮೇಲೆ ಬಂದ ಸುದ್ದಿ, ವರದಿಗಳು ಅಲ್ಲಿ ಅಮೆರಿಕನ್ ಹಸ್ತಕ್ಷೇಪ ನಡೆದಿದೆ. ನಡೆದದ್ದು ಕಂಡಷ್ಟು ಸರಳವಲ್ಲ ಎಂದಿದ್ದಾರೆ. ಅಮೆರಿಕ ಬೇಕೆಂದಲ್ಲಿ ಹಸ್ತಕ್ಷೇಪ ಮಾಡುವುದು ಸುದ್ದಿಯೇನಲ್ಲ? ಆದರೆ ಜಾರ್ಜಿಯಾದಲ್ಲಿ ಯಾಕೆ? ಅದರಲ್ಲೂ ಹಿಂದೆ ಗೋರ್ಬಚೇವ್‌ನ ವಿದೇಶಾಂಗ ಮಂತ್ರಿಯಾಗಿದ್ದ, ಪಾಶ್ಚಿಮಾತ್ಯರಿಗೆ ಮೆಚ್ಚುಗೆ ವ್ಯಕ್ತಿಯಾಗಿದ್ದ ಶೆವರ್‌ನಾದ್‌ಝೆಗೆ ಈ ಗತಿ ಯಾಕೆ?

ಸಾಕಾಶ್‌ವಿಲಿ ಜತೆ ಭಾರಿ ಸಂಬಂಧ. ಈತ ಅಮೆರಿಕದಲ್ಲಿತರಬೇತಿ ಪಡೆದ ವಕೀಲ. ಈಗ ಶೆವರ್‌ನಾಧ್‌ಝೆ ಸ್ಥಾನ ಗ್ರಹಣ ಮಾಡುವವನು ಈತನೇ. ಜನವರಿ 4 ಕ್ಕೆ ನಡೆವ ಚುನಾವಣೆಯಲ್ಲಿ ಈತ ಅಧ್ಯಕ್ಷನಾಗುವುದು ಹೆಚ್ಚು ಕಡಿಮೆ ಖಚಿತವಾಗಿದೆ. ಜಾರ್ಜ್ ಸೊರೋನ್

ಶರತ್‌ಚಂದ್ರ

ಅಮೆರಿಕದ ಕೋಟ್ಯಾಧೀಶ ಸೊರೋನ್ ಹುನ್ನಾರ

ಸೋರೋನ್ ಛಾಪು

ಮಾಜಿ ಅಧ್ಯಕ್ಷ ಶೆವರ್‌ನಾಝೆ ಆಪಾದಿಸಿದ್ದು ಮಾತ್ರವಲ್ಲ, ಹಲವು ಸ್ವತಂತ್ರ ರಾಜಕೀಯ ವೀಕ್ಷಕರು ಜಾರ್ಜ್ ಸೊರೋನ್ ಎಂಬ ಅಮೆರಿಕನ್ ಕೋಟ್ಯಾಧೀಶ ಜಾರ್ಜಿಯಾದ ಆಂತರಿಕ ಬೆಳವಣಿಗೆಗಳಲ್ಲಿ ನೇರ ಹಸ್ತಕ್ಷೇಪ ಮಾಡಿದ್ದಾನೆ. ಇದರಲ್ಲಿ 'ಸೊರೊನ್ ಛಾಪು' ಕಾಣುತ್ತಿದೆ ಎಂಬ ಆಪಾದನೆ ಮಾಡಿದ್ದಾರೆ. ಹಿಂದೆ ಸ್ಲೋವಾಕಿಯಾದಲ್ಲಿ, ಕ್ರೋಶಿಯಾ, ಯುಗೋಸ್ಲಾವಿಯಾದಲ್ಲಿ (ಸರ್ಬಿಯಾದಲ್ಲಿ) ಅಮೆರಿಕಕ್ಕೆ ಇಷ್ಟವಿಲ್ಲದ ಸರ್ಕಾರಗಳನ್ನು ಬದಲಾಯಿಸಲು ಬಳಸಿದ ತಂತ್ರಗಳನ್ನೇ ಇಲ್ಲೂ ಬಳಸಲಾಯಿತು ಎಂದು ಜಾರ್ಜಿಯಾದ ಪ್ರಮುಖ ಪತ್ರಿಕೆಯ ಸಂಪಾದಕ ಟಿಪ್ಪಣಿ ಮಾಡಿದ್ದಾರೆ.

ಸರ್ಬಿಯಾ ಮಾದರಿ'

ಜಾರ್ಜಿಯಾದ ಇತ್ತೀಚಿನ 'ಬೀದಿ ದಂಗೆ'ಯಲ್ಲಿ ಭಾಗವಹಿಸಿದ ನಾಯಕರೊಬ್ಬರನ್ನು ಸರ್ಬಿಯಾಕ್ಕೆ ಕಳುಹಿಸಿ ತರಬೇತಿ ಮಾಡಲಾಗಿತ್ತು. ಮಾತ್ರವಲ್ಲ, ಸರ್ಬಿಯಾದಲ್ಲಿ ಅಧ್ಯಕ್ಷ ಮಿಲೋಸೊವಿಕ್‌ರನ್ನು 'ದಂಗೆ' ಮಾಡಿ ಕೆಳಗಿಳಿಸಿದ ಕೆಲವು ನಾಯಕರನ್ನು ಜಾರ್ಜಿಯಾಕ್ಕೆ ಕಳಿಸಿ ಸುಮಾರು ಒಂದು ಸಾವಿರ ಯುವಕರಿಗೆ 'ಬೀದಿ ದಂಗೆ' ಯ ತಂತ್ರಗಳ ಬಗ್ಗೆ ತರಬೇತಿ ನೀಡಲಾಗಿತ್ತು. ಇವೆರಡಕ್ಕೂ ಧನ ಸಹಾಯ ಒದಗಿಸಿದ್ದು, ಮುತುವರ್ಜಿ ವಹಿಸಿದ್ದು - ಜಾರ್ಜ್ ಸೊರೋನ್ ಬೆಂಬಲಿತ `Open Socity Institute(ಮುಕ್ತ ಸಮಾಜ ಸಂಘಟನೆ) ಎಂಬ ಸಂಘಟನೆ. ಜಗತ್ತಿನ ಎಲ್ಲೆಡೆ ಪ್ರಜಾತಂತ್ರ ಸ್ಥಾಪಿಸಲು, ಮಿಲಟರಿ ಬಳಸುವುದನ್ನು ಅಧ್ಯಕ್ಷ ಬುಷ್ ಸಮರ್ಥಿಸಿಕೊಳ್ಳುವಂತೆ, ಈತ ಎಲ್ಲೆಡೆ ಈ ಸಂಘಟನೆ ದೇಶದ ಆಂತರಿಕ ರಾಜಕೀಯದದಲ್ಲಿ ಮೂಗು ತೂರಿಸುವುದನ್ನು ಸಮರ್ಥಿಸಿಕೊಳ್ಳುತ್ತಾನೆ.

ಸರ್ಬಿಯಾದಲ್ಲಿ 'ತರಬೇತಿ' ಪಡೆದು ಬಂದ ...ಕೆರಿಯಾದ ಲಿಬರ್ಟಿ ಇನ್ಸ್‌ಟಿಟ್ಯೂಟ್‌ಗೆ ಸೊರೋನ್ ಭಾರಿ ಅನುದಾನ ಕೊಟ್ಟಿದ್ದ. ಕಮಾರಾ (ಜಾರ್ಜಿಯಾ ಭಾಷೆಯಲ್ಲಿ ಸಾಕು!) ಎಂಬ 'ಯುವಕ ಗುಂಪಿ'ಗೆ 5 ಲಕ್ಷ ಡಾಲರಿನ ಅನುದಾನ ಕೊಟ್ಟಿದ್ದ. ಶೆವರ್‌ನಾದ್‌ಝೆ ಪದಚ್ಯುತ ನಡೆಸಿದ ದಂಗೆಯಲ್ಲಿ ಕಮಾರಾ ದೊಡ್ಡ ಪಾತ್ರ ವಹಿಸಿತ್ತು. ರುಸ್ತಾವಿ-2 ಎಂಬ ಟಿ.ವಿ. ಸ್ಟೇಷನ್ ಮತ್ತು '24 ಗಂಟೆ' ಎಂಬ ಅದೇ ಕಂಪನಿ ಆರಂಭಿಸಿದ ಪತ್ರಿಕೆಗೂ ಸೊರೋನ್‌ದ್ದೇ ಕೃಪಾಕಟಾಕ್ಷ. ಇವೆಲ್ಲವೂ 'ಬೀದಿದಂಗೆ'ಯಲ್ಲಿ ದೊಡ್ಡ ಪಾತ್ರ ವಹಿಸಿದವು ಎಂಬುದು ಆಕಸ್ಮಿಕವಲ್ಲ.

ಜಾರ್ಜ್ ಸೊರೋನ್ ಹಿಂದೆ ಶೆವರ್‌ನಾಧ್‌ಝೆ ಜತೆಗೂ ಒಳ್ಳೆಯ ಸಂಬಂಧ ಹೊಂದಿದ್ದವ. ಜಾರ್ಜಿಯಾದಲ್ಲಿ ಓಪನ್ ಸೊಸೈಟಿ ಇನ್‌ಸ್ಟಿಟ್ಯೂಟ್ ಸ್ಥಾಪಿಸಲು ಕರೆದದ್ದು ಶೆವರನಾದ್‌ಝ್ ನೇ. ಆದರೆ ಸೊರೋನ್ (ಹಿಂದೆ ಶೆವರ್‌ನಾಧ್‌ಝೆ ಮಂತ್ರಿಮಂಡಲದಲ್ಲಿ) ಕಾನೂನು ಮತ್ತು ನ್ಯಾಯ ಮಂತ್ರಿಯಾಗಿದ್ದ ಈತನ ಪರವಾಗಿಯೇ 'ದಂಗೆ'ಯನ್ನು ಸಂಘಟಿಸಿದ್ದು.

ಇಲ್ಲೂ ತೈಲದ್ದೇ ಕಾರುಬಾರು

ಶೆವರ್‌ನಾದ್‌ಝೆ ಹಿಂದೆ ಅಮೆರಿಕದ ಮತ್ತು ಸೊರೋನ್‌ನ 'ಕಣ್ಮಣಿ'ಯಾಗಿದ್ದ. ಆದರೆ ಅಮೆರಿಕ ಮತ್ತು ರಶ್ಯನ್ ತೈಲ ಕಂಪನಿಗಳ ಪೈಪೋಟಿಯಲ್ಲಿ, ರಶ್ಯನ್ ಪರ ಆತ ವಾಲಲು ಆರಂಭಿಸಿದ್ದು, ಅಮೆರಿಕದ ಕಣ್ಣು ಕೆಂಪು ಮಾಡಿತ್ತು. ಶೆವರ್‌ನಾಧ್‌ಝೆ ಆಡಳಿತದಲ್ಲಿ (ಎಲ್ಲಾ ಸೋವಿಯತ್ ದೇಶದಲ್ಲಿದ್ದಂತೆ ಬಂಡವಾಳಶಾಹಿ ವ್ಯವಸ್ಥೆ ಪೂರ್ತಿ ಅಂಗೀಕರಿಸದ ಪರಿಣಾಮವಾಗಿ) ಆರ್ಥಿಕತೆ ಕುಸಿದು, ಸಾಮಾಜಿಕ-ಸಾಂಸ್ಕೃತಿಕ ಬಿಕ್ಕಟ್ಟು, ಭ್ರಷ್ಟಾಚಾರ ಹೆಚ್ಚಿದ್ದು ನಿಜ. ಇತ್ತೀಚಿನ ಚುನಾವಣೆಗಳಲ್ಲಿ ಮೋಸ ನಡೆದದ್ದೂ ನಿಜ. ಆದರೆ ಶೆವರ್‌ನಾಧಝೆಯನ್ನು ಪದಚ್ಯುತಿಗೊಳಿಸುವ 'ಬೀದಿ ದಂಗೆ' ನಡೆದ್ದದು ಅದರಿಂದಾಗಿ ಮಾತ್ರವಲ್ಲ. ಜಾರ್ಜಿಯಾವನ್ನು ಹಾದು ಹೋಗುವ ತೈಲ ಪೈಪ್‌ಲೈನ್‌ಗಳ ಹತೋಟಿಯನ್ನು ಅಮೆರಿಕನ್ ತೈಲ ಕಂಪನಿಗಳಿಗೆ ಒಪ್ಪಿಸಲು ಶೆವರ್‌ನಾದ್‌ಝೆ ತಯಾರಿರಲಿಲ್ಲ. ಹೊಸದಾಗಿ ಅಧ್ಯಕ್ಷನಾಗುವ ಸಾಕಾಶ್ ವಿಲಿ ಸೊರೋನ್ ದುಡ್ಡಿನ ಮೇಲೆ ಆಧಾರಿತವಾದ್ದರಿಂದ, ಸ್ವಾಭಾವಿಕವಾಗಿಯೇ ಅವರಿಗೆ ಅನುಕೂಲಕರವಾದ ನೀತಿ ಅನುಸರಿಸುತ್ತಾನೆ. ಹಿಂದೆ ಶೆವರ್‌ನಾದ್‌ಝೆ ಮಂತ್ರಿ ಮಂಡಲದಲ್ಲಿದ್ದ ಆತನಿಗೆ ಇಂದಿನ ಜಾರ್ಜಿಯಾದ ದುಸ್ಥಿತಿಯಲ್ಲಿ ಅಷ್ಟೇ ಪಾತ್ರ ವಹಿಸಿದೆ. ಮಾಜಿ ಸೋವಿಯತ್ ಒಕ್ಕೂಟದ ಪ್ರದೇಶಗಳಲ್ಲಿ ಆಧಿಪತ್ಯಕೆ ರಶ್ಯಾ ಮತ್ತು ಅಮೆರಿಕ ನಡುವೆ ಕಾದಾಟಕ್ಕೂ ಈ 'ಕ್ಷಿಪ್ರಕ್ರಾಂತಿ'ಗೂ ಸಂಬಂಧವಿದೆ.

ಯುರೋಪಿಯನ್ ಸೋಶಿಯಲ್ ಫೋರಂನಲ್ಲಿ 50 ಸಾವಿರ ಪ್ರತಿನಿಧಿಗಳು

ನವೆಂಬರ್‌ನಲ್ಲಿ ಪ್ಯಾರಿಸ್ ಹತ್ತಿರದ ಪಟ್ಟಣವೊಂದರಲ್ಲಿ ನಡೆದ ಯುರೋಪಿಯನ್ ಸೋಶಿಯಲ್ ಫೋರಂಗೆ 50 ಸಾವಿರ ಪ್ರತಿನಿಧಿಗಳು ಬಂದು ಅದನ್ನು ಭಾರಿ ಯಶಸ್ವಿಯಾಗಿಸಿದರು. ಸಾವಿರದಷ್ಟು ಜನ ಭಾಗವಹಿಸಿದ್ದ 55 ವಿವಿಧ ಗೋಷ್ಠಿಗಳು ಒಂದೇ ಸಮಯದಲ್ಲಿ ಜರುಗಿದವು. 250 ಕ್ಕೂ ಹೆಚ್ಚು ನೂರಾರು ಜನ ಭಾಗವಹಿಸಿದ ವಿಚಾರಸಂಕಿರಣಗಳು, ವರ್ಕ್‌ಶಾಪ್‌ಗಳು ಜರುಗಿದವು. ಎಲ್ಲದರಲ್ಲೂ ಸಾಮಾನ್ಯ ಸೂತ್ರ - 'ಇನ್ನೊಂದು ಯುರೋಪು', 'ಇನ್ನೊಂದು ಜಗತ್ತು ಕಟ್ಟುವುದು ಹೇಗೆ?' ಎಂಬ ಜಿಜ್ಞಾಸೆ.

ಯುರೋಪಿನ ಎಡಪಕ್ಷಗಳು, ಎಡ-ಪ್ರಗತಿಪರ ಸಾಮೂಹಿಕ ಸಂಘಟನೆಗಳು, ಜನತಾ ಚಳುವಳಿಗಳೂ ಇದರಲ್ಲಿ ಉತ್ಸಾಹದಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದವು.

ಎಡಪಕ್ಷಗಳು ಹೇಳಿಕೆ

ಅದೇ ಸಮಯದಲ್ಲಿ ಯುರೋಪಿನ 19 ಕಮ್ಯುನಿಸ್ಟ್ ಮತ್ತು ಎಡ ಪ್ರಗತಿಪರ ಪಕ್ಷಗಳು ಸಭೆ ಸೇರಿ ಒಂದು ಜಂಟಿ ಹೇಳಿಕೆ ನೀಡಿದವು. ಈ ಜಂಟಿ ಹೇಳಿಕೆಯಲ್ಲಿ ಅಮೆರಿಕದ ಪ್ರಭಾವದಿಂದ ಮುಕ್ತವಾದ, ಶಾಂತಿ-ಸಹಬಾಳ್ವೆ, ನಿಶ್ಶಸ್ತ್ರೀಕರಣಕ್ಕೆ ಬೆಂಬಲಿಸುವ ಇಡೀ ಜಗತ್ತಿನ ಆಶೋತ್ತರಗಳಿಗೆ ಸ್ಪಂದಿಸುವ 'ಇನ್ನೊಂದು ಯುರೋಪು' ಕಟ್ಟಲು ಕರೆ ನೀಡಿದವು. ಯುರೋಪು ಒಕ್ಕೂಟವನ್ನು ಮೇಲಿಂದ ಕಟ್ಟುವುದನ್ನು ವಿರೋಧಿಸಿ, ಎಲ್ಲಾ ರಾಷ್ಟ್ರೀಯತೆ, ಸಂಸ್ಕೃತಿಗಳ ಜನ ಒಟ್ಟಾಗಿ ಬಾಳುವ ಯುರೋಪನ್ನು ಕೆಳಗಿಂದ ಕಟ್ಟಬೇಕೆಂದು ಕರೆ ಕೊಟ್ಟವು. ○



ಯುರೋಪಿಯನ್ ಸೋಶಿಯಲ್ ಫೋರಂ ರ್‍ಯಾಲಿ, ಪ್ಯಾರಿಸ್

ಭಾರಿ ರ್‍ಯಾಲಿಯಲ್ಲಿ ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಿದರು. ಇದು ಯುರೋಪಿಯನ್ ಸೋಶಿಯಲ್ ಫೋರಂನ ಸಭೆಯ ಸಮಾರೋಪದ ಸಂದರ್ಭದಲ್ಲಿ ಆಗಿದ್ದು, ಅಮೆರಿಕಾದ ಇರಾಕಿ ಅತಿಕ್ರಮಣದ ವಿರುದ್ಧ ಹಲವು ಬ್ಯಾನರ್‌ಗಳು ಕಂಡುಬಂದವು.

...ನಾರಾಯಣ ಪುರ ಬಲದಂಡೆ ಕಾಲುವೆ...

...ಟ 6 ರಿಂದ

...ರುವುದೆ ಇಲ್ಲ. ಈ ನಾಟಕ ಕಳೆದ ಏಳೆಂಟು ...ರ್ಷದಿಂದ ನಡೀತಾ ಇದೆ. ಇದು ಇನ್ನು ಎಷ್ಟು ...ನ? ರೈತರ ಮನೆ ಬಾಗಿಲಿಗೆ ಅಧಿಕಾರ ಅಂದರೆ ...ದೆ ಏನು? ಜನಪ್ರತಿನಿಧಿಗಳಲ್ಲಿ ಇದಕ್ಕೆ ಉತ್ತರ ...ದೆಯೇ?

...ಕ್ ಸಮಸ್ಯೆ

...ತುಂಗಭದ್ರ ಎಡದಂಡೆಯ ಕೊನೆಭಾಗದ ...ರಿಗೆ ನೀರುಣಿಸಲು ರಾಯಚೂರು ಜನತೆಗೆ ...ಪ ನೀರುಬೇಕೆಂಬ ನೆಪದಲ್ಲಿ 0.75 ಟಿ.ಎಂ.ಸಿ. ...ವನ್ನು ನಾರಾಯಣಪುರ ಬಲದಂಡೆಯಿಂದ 'ಗಣೇಕಲ್ ಜಲಾಶಯ'ಕ್ಕೆ ಸಾಗಿಸುವ ಹುನ್ನಾರ ನಡೆದಿದೆ. ಇದರಿಂದ ಗಬ್ಬೂರ ಭಾಗದ 40-50 ಹಳ್ಳಿಗಳಿಗೆ ಮತ್ತು 'ಬಿ' ಸ್ಕಿಂನಲ್ಲಿ ನೀರಾವರಿಯಾಗಲಿರುವ ರಾಯಚೂರು ತಾಲೂಕಿನ ಉತ್ತರ ಭಾಗದ ನೂರಾರು ಹಳ್ಳಿಗಳಿಗೆ ನೀರೆ ಇಲ್ಲದಂತೆ ಮಾಡಲಾಗುತ್ತಿದೆ. 22 ಟಿ.ಎಂ.ಸಿ. ನೀರು ಹರಿಸಲಿಕ್ಕಾಗಿ ರಚನೆಗೊಂಡ ಕಾಲುವೆಗೆ 9.ಎ ಏತ ನೀರಾವರಿ ಹೊರೆಯಾಗಿರುವಾಗ, ಲಿಂಕ್ ಕಾಲುವೆಗೆ ನೀರು ಕೊಟ್ಟರೆ ಮುಂದಿರುವವರಿಗೆ ಇದೇ ಕಾಲುವೆ ಮುಖಾಂತರ ನೀರು ಕೊಡಲು ಹೇಗೆ ಸಾಧ್ಯ?.

ಸಾಲದ ಕಾಲುವೆ ಸಮೃದ್ಧಿ ತಂದೀತೆ?

ನೀರಾವರಿ ಬಾಂಡ್‌ಗಳ ಮೂಲಕ ಸಂಗ್ರಹಿಸಿದ ಹಣವನ್ನು ಸಾಲದ ರೂಪದಲ್ಲಿ ಪಡೆದು ನಿರ್ಮಿಸುತ್ತಿರುವ ಈ ಕಾಲುವೆಗೆ ಬಾಧ್ಯಸ್ಥರು ರೈತರು ಮುಂದೆ ಈ ಸಾವಿರಾರು ಕೋಟಿ ರೂಪಾಯಿಗಳ ಸಾಲವನ್ನು ಬಡ್ಡಿ ಸಹಿತ ರೈತರೆ ಕಟ್ಟಬೇಕು. ಆದರೆ ಕಳಪೆ ಕಾಮಗಾರಿ ಮಾಡಿ ತಿಂದು ತೇಗುತ್ತಿರುವವರು ಭ್ರಷ್ಟ ಅಧಿಕಾರಿಗಳು, ಗುತ್ತೆದಾರರು ಮತ್ತು ಜನಪ್ರತಿನಿಧಿಗಳು, ಲಿಂಕ್ ಸೃಷ್ಟಿಕರ್ತರು ಮತ್ತು ಬ್ಲಾಕಮೇಲರಗಳು ಭ್ರಷ್ಟರಿಗೆ ಅಮೃತ ಕೊಟ್ಟ ಈ ಕಾಲುವೆ ಕಷ್ಟ ಜೀವಿ ರೈತರಿಗೆ ವಿಷಕೊಡಲಿದೆಯೆ ಎಂಬುದನ್ನು ಕಾದು ನೋಡಬೇಕಿದೆ. ಈ ಎಲ್ಲಾ ಸಮಸ್ಯೆಗಳಿಂದ ಜನ ಪ್ರತಿನಿಧಿಗಳಾದ ವೆಂಕಟೇಶ ನಾಯಕ, ಅಮರೇಶ ನಾಯಕ, ಯಲ್ಲಪ್ಪ ಆಕ್ಕಿರ್ತಿ, ಸಯ್ಯದ ಯಾಸಿನ, ಅಮರೆಗೌಡ ಭಯ್ಯಾಪುರ, ಹನುಮಂತಪ್ಪ ಆಯ್ಕೋಡ್, ಬಸವರಾಜ ಪಾಟೀಲ ಇಟಗಿ ತಮ್ಮನ್ನು ಪಾರು ಮಾಡುತ್ತಾರೆಂದು ರೈತರು ನಂಬಿದ್ದಾರೆ. ಆದರೆ ಕುರುಡು ಕಾಂಚಣ ಇವರ ಕೈ ಕಟ್ಟಿ, ಬಾಯಿ ಮುಚ್ಚಿಸಿದೆಯೆಂದು ರೈತರಿಗೆ ಅರ್ಥವಾದೀತೆ? ಕುರುಡು ಕಾಂಚಾಣದ ಕಾಲಿಗೆ ಸಿಕ್ಕು ಸಾಯುವುದಕ್ಕಿಂತ ಅದರ ದೌರ್ಜನ್ಯ ಎದುರಿಸಿ ಹೋರಾಟಕ್ಕಿಳಿಯುವುದೊಂದೆ ರೈತರಿಗೆ ಉಳಿದಿರುವ ದಾರಿ. ○

ಕೋಮುವಾದಿಗಳ ನಡುವೆ ಇಂಥವರೂ ಉಂಟು

ಸಂಘಟಿತ ಸಂಸ್ಕೃತಿಯು ಹೇಗೆ ಜನರನ್ನು ಒಂದುಗೂಡಿಸುತ್ತದೆ; ಆದರೆ ಅದರ ವಿರುದ್ಧವಾಗಿ ಪರಿಶುದ್ಧತೆಯ ವಾದ ಹೇಗೆ ಜನಾಂಗವನ್ನು ಪ್ರತ್ಯೇಕಿಸುತ್ತದೆ ಎಂಬುದರ ಬಗ್ಗೆ ಅಸ್ಗರ್ ಆಲಿ ಇಂಜಿನಿಯರ್‌ರವರು ಎಷ್ಟೊಂದು ಉತ್ತಮ ಉದಾಹರಣೆಗಳನ್ನು ಕೊಟ್ಟಿದ್ದಾರೆಂದರೆ, ಅವುಗಳು ನಮ್ಮ ಓದುಗರಿಗೆ ತಲುಪಲೇ ಬೇಕು ಎಂದು ಇಲ್ಲಿ ಹಲವನ್ನು ನೀಡುತ್ತಿದ್ದೇವೆ

ಎಲ್ಲ ಧರ್ಮಗಳ ಪರಿಶುದ್ಧತೆಯನ್ನು ಕಾಪಾಡಬೇಕು ಎನ್ನುವವರು ಸಂಘಟಿತ ಸಂಸ್ಕೃತಿಯನ್ನು ಒಪ್ಪುವುದೇ ಇಲ್ಲ. ಅವರಿಗೆ 'ಶುದ್ಧ ಹಿಂದೂ' ಅಥವಾ 'ಶುದ್ಧ ಇಸ್ಲಾಂ' ಧರ್ಮ ಮಾತ್ರ ಮುಖ್ಯವಾಗಿರುತ್ತದೆ. ಆದರೆ ಇಂತಹ 'ಶುದ್ಧ'ತೆ ಜನಸಾಮಾನ್ಯರಿಂದ ದೂರವಾಗಿಯೇ ಉಳಿಯುತ್ತದೆ. ಉದಾಹರಣೆಗೆ 'ಶುದ್ಧ ಧರ್ಮ'ದ ಪ್ರತಿಪಾದಕರಾದ ಬ್ರಾಹ್ಮಣರು ಸಂಸ್ಕೃತದಲ್ಲಿ ಮತ್ತು ಉಲೆಮಾಗಳು ಅರಬ್ಬೀ ಭಾಷೆಯಲ್ಲಿ ಬರೆಯುತ್ತಿದ್ದರು. ಜನರ ಆಡುಭಾಷೆಗೂ ಇವರ ಕೃತಿಗಳ ಭಾಷೆಗೂ ಯಾವುದೇ ಸಂಬಂಧವಿರದಿದ್ದ ಕಾರಣ ಅವು ಜನಪ್ರಿಯವಾಗಲೇ ಇಲ್ಲ. ಆದರೆ ಅದೇ ಹಿಂದೂ ಸಂತರು, ಮುಸ್ಲಿಂ ಸೂಫಿಗಳು ಜನರ ಭಾಷೆಯಲ್ಲಿ ಕೃತಿಗಳನ್ನು ರಚಿಸಿದರು. ಹಾಗೆ ಮಾಡಿದ್ದರಿಂದಲೇ ಅವರು ಜನಪ್ರಿಯರಾದದ್ದಲ್ಲದೇ, ಭಾರತದಲ್ಲಿ ಧರ್ಮಗಳ ನಡುವಿನ ಬೇಧಭಾವಗಳನ್ನು ಸಡಿಲಗೊಳಿಸುವುದರಲ್ಲೂ ಯಶಸ್ವಿಯಾದರು.

ಪದಿನಾಲ್ಕನೆ ಶತಮಾನದಲ್ಲಿದ್ದ ಖುಸ್‌ರೋ ಎಂಬ ಪರ್ಷಿಯನ್ ಕವಿ, ತನ್ನ ಪ್ರಾಂತಭಾಷೆಯಲ್ಲೂ ಪದ್ಯಗಳನ್ನು ರಚಿಸಿದ್ದಕ್ಕೆ ಇವತ್ತಿಗೂ ಆತನ ಪದ್ಯಗಳು ಜನರ ನಾಲಿಗೆಗಳಲ್ಲಿ ಜೀವಂತವಾಗಿದೆ; ಭಾಷೆಗೂ ಧರ್ಮಕ್ಕೂ ಸಂಬಂಧವಿಲ್ಲ ಎಂಬುದನ್ನು ಸಾಬೀತು ಪಡಿಸಿದೆ.

ರಸ್‌ಖಾನ್ ಮತ್ತು ರಹೀಂ ಎಂಬ ಅವಧ್ ಕವಿಗಳು ಕೃಷ್ಣನ ಭಕ್ತರಾಗಿದ್ದರು. ಹಸ್‌ರತ್ ಮೊಹನಿ ಎಂಬ ಇನ್ನೋರ್ವ ಕವಿಗೆ ಕೃಷ್ಣನ ಬಗ್ಗೆ ಎಂತಹ ಅಪಾರ ಪ್ರೇಮ ಎಂದರೆ ಪ್ರತಿ ಕೃಷ್ಣ ಜನ್ಮಾಷ್ಟಮಿಯಂದು ತಪ್ಪದೇ ಬೃಂದಾವನಕ್ಕೆ ಭೇಟಿ ನೀಡುತ್ತಿದ್ದ.

ಇಂತಹವರು ಬೀರಿದ ಪ್ರಭಾವದಿಂದಲೇ ಶತ ಶತಮಾನಗಳ ಕಾಲ ಮಹೋರಮ್ಮಿನಲ್ಲಿ



ಹಿಂದೂಗಳು ಭಾಗವಹಿಸುತ್ತಿದ್ದರು; ರಾಮಲೀಲೆ ನಾಟಕಗಳಲ್ಲಿ ಮುಸ್ಲಿಂ ಯುವಕರು ರಾಮನ, ಹನುಮಂತನ ಪಾತ್ರಗಳನ್ನು ನಿರ್ವಹಿಸುತ್ತಿದ್ದರು.

ಬರೋಡದಲ್ಲಿ ಅಬ್ದುಲ್ ರಶೀದ್ ಇಸ್ಮಾಯಿಲ್ ಎಂಬ ವೃದ್ಧರೊಬ್ಬರಿದ್ದಾರೆ. ಈತ ಎಂತಹ ಗಣೇಶನ ಭಕ್ತಾದಿ ಎಂದರೆ, ಬರೋಡಾ ವಿಶ್ವವಿದ್ಯಾಲಯದಲ್ಲಿರುವ ಗಣೇಶನ ಗುಡಿಗೆ ಈತನೇ ಅಧಿಕೃತ ಪೂಜಾರಿ. ಸಂಸ್ಕೃತ ಪಂಡಿತರೂ ಆದ ಇಸ್ಮಾಯಿಲ್ ರವರು ಶ್ಲೋಕಗಳನ್ನು ಪಠಿಸುತ್ತಾರೆ; ಬೆಳಿಗ್ಗೆ ಮತ್ತು ಸಂಜೆ ಗಣೇಶನಿಗೆ ಪೂಜೆ ಸಲ್ಲಿಸುತ್ತಾರೆ. "ಇಲ್ಲಿಯ ಮುಸ್ಲಿಂ ಬ್ರಾಹ್ಮಣ ನಾನು," ಎಂದು ನಗುತ್ತಾರೆ ಎಲ್ಲರಿಗೆ 'ಚಾಚಾ' ಆಗಿರುವ ಇಸ್ಮಾಯಿಲ್.

ಬಾಂಬೆಯಲ್ಲಿ ಗುಲಾಂ ದಸ್ತಗಿರ್ ಎಂಬ ಮುಸ್ಲಿಂ ವೇದಗಳ ಪಂಡಿತ. ಈತನ ಬಳಿ ಇರುವ ಹಲವಾರು ಪುಸ್ತಕಗಳಲ್ಲಿ ಕುರಾನಿನ ಸಂಸ್ಕೃತ ಅನುವಾದವೂ ಒಂದು. ದಸ್ತಗಿರ್ ರವರು ಎಂತಹ ಪ್ರಚಂಡ ಹಿಂದೂ ಪಂಡಿತರೆಂದರೆ ಇವರ ಪ್ರವಚನಗಳನ್ನು ಕೇಳಲು ದೇಶದ ವಿವಿಧ ಭಾಗಗಳಿಂದ ಆಹ್ವಾನಗಳು ಬರುತ್ತಿರುತ್ತವೆ.

ದಹಲಿ ನಿವಾಸಿಯಾಗಿರುವ ಜ್ಯೋತಿ ಪಾಂಡೆ ಎಂಬುವವರು ಹಿಂದೂ ಧರ್ಮಕ್ಕೆ ಸೇರಿದ್ದರೂ ಅವರ ಮೇಲೆ ಇಸ್ಲಾಂಮಿನ ಶಿಯಾ ಪಂಕ್ತಿ ಎಂತಹ ಪ್ರಭಾವ ಬೀರಿದೆ ಎಂದರೆ ಆತ ಮಹಮದ್ ಪೈಗಂಬರ್ ರವರ ಮೊಮ್ಮಗ ಇಮ್ಮಾಮ್ ಹುಸೇನ್‌ರ ಭಕ್ತ. ಇಮ್ಮಾಮ್ ಹುಸೇನ್ ಕುರಿತಂತೆ ಇವರು ಶುದ್ಧ ಉರ್ದುವಿನಲ್ಲಿ ಚರಮಗೀತೆಗಳನ್ನು ಹಾಡುತ್ತಾರೆ.

ಗುರು ನಾನಕ್ ಸ್ಥಾಪಿಸಿದ ಸಿಖ್ ಧರ್ಮವೂ ಹಿಂದೂ ಮತ್ತು ಇಸ್ಲಾಂ ಧರ್ಮಗಳ ಅಂಶಗಳನ್ನು ಹೊಂದಿದೆ. ಮುಸ್ಲಿಮ್‌ರ ಪವಿತ್ರ ಸ್ಥಳವಾದ ಮೆಕ್ಕಾಗೂ ಭೇಟಿ ನೀಡಿದ್ದ ಗುರು ನಾನಕ್ ತಮ್ಮ ಗುರುದ್ವಾರವನ್ನು ನಿರ್ಮಿಸಲು ಹೊರಟಾಗ ಅದರಡಿಗಲ್ಲನ್ನು ಹಾಕಲು ಮುಸ್ಲಿಂ ಸೂಫಿ ಮಿಯಾನ್ ಮಿರ್ ಅವರನ್ನು ಆಹ್ವಾನಿಸಿದ್ದರು.

ಅಷ್ಟೇ ಏಕೆ ದೇಶ ವಿಭಜನೆಯಾಗುವವರೆಗೂ ಹಲವಾರು ಗುರುದ್ವಾರಗಳಲ್ಲಿ ಗುರುಗ್ರಂಥ್ ಸಾಹೀಬ್ ಅನ್ನು ಹಾಡುತ್ತಿದ್ದದ್ದು ಈಗ ಪಾಕಿಸ್ತಾನದಲ್ಲಿರುವ ಪಂಜಾಬಿನ ಮುಸ್ಲಿಂ 'ರಾಗಿ'ಗಳೇ.

ಕರ್ನಾಟಕದಲ್ಲಿನ ಬಾಬಾಬುಡನ್ ಗಿರಿಯಲ್ಲಿನ ಧಾರ್ಮಿಕ ಭಾವೈಕ್ಯತೆ ಎಲ್ಲರಿಗೂ ಗೊತ್ತಿದೆ. ಇದರಂತೆ ಮಹಾರಾಷ್ಟ್ರದ ಕಲ್ಯಾಣ ಎಂಬ ಜಾಗದಲ್ಲಿ ಹಾಜಿ ಮಾಲಂಗ್ ದರ್ಗ ಎಂಬುದೊಂದಿದೆ. ಎಷ್ಟೋ ತಲೆಮಾರುಗಳಿಂದ ಈ ದರ್ಗದ ಉಸ್ತುವಾರಿಯನ್ನು ನೋಡಿ ಕೊಳ್ಳುತ್ತಿರುವುದು ಓರ್ವ ಬ್ರಾಹ್ಮಣ ಸಂಸಾರ.

ಹಲವಾರು ದಶಕಗಳಿಂದ ಈ ದರ್ಗಾಕ್ಕೆ ಹಿಂದೂಗಳು, ಮುಸ್ಲಿಮರು, ಕ್ರೈಸ್ತರು ಮತ್ತು ಪರ್ಶಿಗಳು ಬರುತ್ತಿದ್ದರು. ಎಲ್ಲರೂ ಹಾಜಿ ಮಾಲಂಗ್ ರವರ ಉರ್ಸ್ ಅನ್ನು ಆಚರಿಸುತ್ತಿದ್ದರು. ಆದರೆ ಈಗ ಮಹಾರಾಷ್ಟ್ರ ಶಿವಸೇನೆಗಳು ಈ ದರ್ಗದಲ್ಲಿರುವುದು ಮಾಲಂಗ್‌ರವರ ಸಮಾಧಿಯಲ್ಲ; ಬದಲಾಗಿ ಅಲ್ಲಿರುವುದು ಶ್ರೀ ಮಚ್ಛೀಂದ್ರನಾಥರ ಸಮಾಧಿ ಎಂದು ವಾದಿಸಿ ತಕರಾರು ಶುರು ಮಾಡಿದ್ದಾರೆ. ಪರಿಣಾಮವಾಗಿ ಅಲ್ಲಿ ಇಂದು ಪ್ರತಿ ಉರ್ಸ್ [illegible] ಕೋಮು ಗಲಭೆಗಳು ಉದ್ಭವಿಸಿ ಪೊಲೀಸರು ಬಂದೋಬಸ್ತ್ ಮಾಡುವಂತಾಗಿದೆ.

ಹೋದ ವರ್ಷ ಕೋಮು ದಳ್ಳುರಿಯನ್ನೇ ಕಂಡ ಗುಜರಾತ್ ರಾಜ್ಯದ ಕುಚ್ ಪ್ರದೇಶದಲ್ಲಿ [illegible] ಎಂಬ ಹಳ್ಳಿ ಇದೆ. ಈ ಹಳ್ಳಿಯಲ್ಲಿ ಮುಸ್ಲಿಂ ಸಂತ ಆಸ್ಲಾಂ ಪೀರ್‌ನ ದರ್ಗವಿದ್ದರೂ, ಹಳ್ಳಿಯಲ್ಲಿ ವಾಸಿಸುತ್ತಿರುವ 2200 ಜನರೆಲ್ಲಾ ಹಿಂದೂಗಳೇ. ಆದರೂ [illegible] ವರ್ಷ ಆಷಾಢದ ತಿಂಗಳಲ್ಲಿ ಈ ಹಿಂದೂಗ[illegible] ಸೇರಿ ಆಸಾಂ ಪೀರ್‌ನ ಉರ್ಸ್ ಅನ್ನು ಆಚರಿಸುತ್ತಾರೆ. ದರ್ಗಕ್ಕೆ ಬಟ್ಟೆಗಳನ್ನು, ಧ್ವಜಗಳನ್ನು ದಾನ ಮಾಡುತ್ತಾರೆ. ಪ್ರತಿ ಸಂಸಾರದ ಪ್ರತಿಯೊಬ್ಬರೂ ಎರಡು ರೂಪಾಯಿಗಳನ್ನು ಮತ್ತು 250 ಗ್ರಾಂ ಅಕ್ಕಿ, ಬೇಳೆಯನ್ನು ನೀಡಿ ಸಿಹಿ ಗಂಜಿಯನ್ನು ತಯಾರಿಸಿ, ಜಾತಿ, ಧರ್ಮ, ಕುಲ ಯಾವ ಬೇಧವೂ ಇಲ್ಲದೇ ಜೊತೆಯಾಗಿ ಕೂತು ಊಟ ಮಾಡುತ್ತಾರೆ.

ಮಹಾರಾಷ್ಟ್ರದ ಮರಾತ್ ವಾಡಾದಲ್ಲಿ[illegible] ಎರಡು ಹಳ್ಳಿಗಳ ಕತೆಯಂತೂ ಅದ್ಭುವಾಗಿ[illegible] ಆಸುಪಾಸಿನಲ್ಲೇ ಈ ಹಳ್ಳಿಗಳು ಇವೆ. ಮುಸ್ಲಿಮರೇ ಇರುವ ಹಳ್ಳಿಯಲ್ಲಿ ಹನುಮ[illegible] ದೇವಸ್ಥಾನವಿದೆ. ಈ ದೇವಸ್ಥಾನವನ್ನು ಮುಸ್ಲಿಮರೇ ಚೊಕ್ಕವಾಗಿ ಇಡುತ್ತಾರಲ್ಲದೇ ಪ್ರತಿವರ್ಷ ಅವರೇ ಹಣ ಸಂಗ್ರಹಿಸಿ, ವಾ[illegible] ಜಾತ್ರೆಯನ್ನು ನಡೆಸುತ್ತಾರೆ. ಪಕ್ಕದ ಹಳ್ಳಿಗಳ[illegible] ಜಾತ್ರೆಗೆ ಬರುವ ಹಿಂದೂಗಳಿಗೆ ಅತಿಥಿ ಸ[illegible] ಮಾಡುತ್ತಾರೆ.

ಹಾಗೆಯೇ ಹತ್ತಿರದಲ್ಲೇ ಇರುವ ಹಿಂದೂಗಳೇ ವಾಸಿಸುತ್ತಿರುವ ಹಳ್ಳಿಯಲ್ಲಿ ದರ್ಗ ಒಂದಿದೆ. ಇದರ ಉಸ್ತುವಾರಿಯನ್ನ[illegible] ಹಿಂದೂಗಳೇ ನೋಡಿಕೊಳ್ಳುತ್ತಾರಲ್ಲದೇ [illegible] ವರ್ಷ ದರ್ಗದ ಉರ್ಸ್ ಅನ್ನು ಅವರೇ ಏರ್ಪಡಿಸುತ್ತಾರೆ.

ಇಂತಹ ಉದಾಹರಣೆಗಳು ಕರ್ನಾಟಕದಲ್ಲೂ ಹೇರಳವಾಗಿವೆ. ಇಂತಹ ಸಂಘಟಿತ, ಸೌಹಾರ್ದಿಕ ಸಂಸ್ಕೃತಿಯ ಬದಲಾಗಿ ದುಷ್ಟ ಮನಸ್ಸುಗಳ 'ಶುದ್ಧ' ಧ[illegible] ಯಾರಿಗೆ ಬೇಕಿದೆ?!

ಕೃಪೆ : **ಲಂಕೇಶ್**

ಬಾಬಾಬುಡನ್‌ಗಿರಿ

ಆ ಅಲ್ಲ ಈಶ್ವರರು ಒಂದಾಗಿ ಕೂಡಿ
ತಲೆತಲಾಂತರದಿಂದ ಬಾಳಿಹರು ನೋಡಿ
ಹಾಗೆಯೇ ಒಂದಾಗಿ ನಗುನಗುತ ಇರಲಿ
ಅನಾದಿ ಏಕತೆಗೆ ಹಾಕದಿರಿ ಕೊಡಲಿ

- ವಿಡಂಬಾ[illegible]

ಅರಳದಂಥ ತೆನೆಗಳು

ನೆಲಕೆ ಜೀವ ತುಂಬಿದ ವನ
ಜೀವ ಹೋಯಿತೋ
ಜೀವ ಕೊಟ್ಟ ನೆಲವೇ ಈಗ
ಜೀವ ಕಸಿಯಿತೋ.

ಶ್ರೀಮಂತರ ಸರ್ಕಾರದಲ್ಲಿ
ಬಡವರು ಗುಲಾಮರೋ
ಹಣದ ರಾಜ್ಯಭಾರದಲ್ಲಿ
ರೈತ ಜನರ ಹೆಣಗಳೋ

ಗೋರಿಗಳ ಬೆಳೆಯ ಕಂಡು
ನಗುತಲಿರುವ ಗುಡಿಗಳು
ಜಗದ ತುಂಬ ಕಳೆಯೆ ಬೆಳೆದು
ಅರಳದಂಥ ತೆನೆಗಳು

ಬಿ.ಪೀರ್‌ಬ[illegible]
ಹೂವಿನ ಹ[illegible]

ಸಾದರ ಸ್ವೀಕಾರ

ಇವರದ್ದು ಇನ್ನೊಂದು ಕಥೆ	ನಾ. ಡಿಸೋಜ	ರೂ. 35
ಬುದ್ದಿ ಹೇಳಿದ ಕಥೆ	ಎಸ್.ಮಾಲತಿ	ರೂ. 25
ಲೈಂಗಿಕ ಆರೋಗ್ಯ	ಡಾ. ಪದ್ಮಿನಿ ಪ್ರಸಾದ್	ರೂ. 60
ಬೆಳ್ಳಕ್ಕಿ ಮತ್ತು ಬುಲ್‌ಬುಲ್	ಗಣೇಶ ಪಿ.ನಾಡೋರ	ರೂ. 30
ಆನೆ ಬಂತೊಂದಾನೆ	ಕಂನಾಡಿಗಾ ನಾರಾಯಣ	ರೂ. 15
ಕಥೆ ಹೇಳುವ ಸಮಯ	ಬೇಂದ್ರೆ ಎನ್.ಮಂಜುನಾಥ್	ರೂ. 35
ಚಿಚಿಬಾಬಾ ಸಹೋದರರು	ಡಿ.ಪಿ.ಸೇನ್‌ಗುಪ್ತ	ರೂ. 40
ಸಿವಿಲ್ ಇಂಜಿನಿಯರಿಂಗ್ ಒಂದು ಪರಿಚಯ	ಎಂ.ಜಿ.ಶ್ರೀನಿವಾಸ	ರೂ. 160

ಪ್ರಕಾಶಕರು : **ನವಕರ್ನಾಟಕ ಪ್ರಕಾಶನ ಪ್ರೈ. ಲಿ.**
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು - 560 001

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462
ಮುದ್ರಣ: ಹಸು ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH